ಸಂಪುಟ 7, ಸಂಚಿಕೆ 09

ನವೆಂಬರ್ 1-15, 2026

ಉಚಿತ ವಿತರಣೆಗಾಗಿ

ನ್ಯೂ ಇಂಡಿಯಾ ಸಮಾಚಾರ

ದೀಪಾವಳಿ ವಿಶೇಷ

•'ವೋಕಲ್ ಫಾರ್ ಲೋಕಲ್'•

ರಾಷ್ಟ್ರೀಯ ಸಂಕಲ್ಪವಾಗಿ ಮಾರ್ಪಟ್ಟ ಕರೆ

12 ವರ್ಷಗಳ ಹಿಂದೆ ಪ್ರಾರಂಭವಾದ ಸ್ಥಳೀಯತೆಗೆ ಧ್ವನಿ (ವೋಕಲ್ ಫಾರ್ ಲೋಕಲ್) ಕರೆಯು 1.4 ಶತಕೋಟಿ ಭಾರತೀಯರಲ್ಲಿ ಪ್ರತಿಧ್ವನಿಸುತ್ತಿರುವ ರಾಷ್ಟ್ರೀಯ ಸಂಕಲ್ಪವಾಗಿ ವಿಕಸನಗೊಂಡಿದೆ. ಮಣ್ಣಿನ ದೀಪಗಳಿಂದ ಹಿಡಿದು ಸೆಮಿಕಂಡಕ್ಟರ್ ಚಿಪ್ ಗಳವರೆಗೆ, ಖಾದಿಯಿಂದ ಹಿಡಿದು ಬ್ರಹ್ಮೋಸ್ ಕ್ಷಿಪಣಿಯವರೆಗೆ - ದೇಶದ ಆರ್ಥಿಕ ಅಡಿಪಾಯವನ್ನು ಬಲಪಡಿಸುವುದರಿಂದ ಹಿಡಿದು ರಾಷ್ಟ್ರೀಯ ಭದ್ರತೆಯನ್ನು ರಕ್ಷಿಸುವವರೆಗೆ - ಇದು ಭಾರತದ ಆಕಾಂಕ್ಷೆಗಳ ಸಂಪೂರ್ಣ ಶ್ರೇಣಿಯನ್ನು ವ್ಯಾಪಿಸಿದೆ.



Follow Us @NISPIBIndia


ಯುನೆಸ್ಕೋದ ಸಂಭಾವ್ಯ ಪಟ್ಟಿಯಲ್ಲಿ ಭಾರತದ ಐದು ಹೊಸ ತಾಣಗಳು

ಶ್ರೀಮಂತ-ವೈವಿಧ್ಯಮಯ ಪರಂಪರೆ

ಭಾರತದ ಯುನೆಸ್ಕೋ ಸಂಭಾವ್ಯ ಪಟ್ಟಿಗೆ ಐದು ಹೊಸ ಪಾರಂಪರಿಕ ತಾಣಗಳು ಮತ್ತು ಪ್ರಸ್ತಾವನೆಗಳನ್ನು ಸೇರಿಸಲಾಗಿದೆ. ಈ ಸೇರ್ಪಡೆಗಳೊಂದಿಗೆ, ಪಟ್ಟಿಯಲ್ಲಿರುವ ಒಟ್ಟು ಭಾರತೀಯ ತಾಣಗಳ ಸಂಖ್ಯೆ 78ಕ್ಕೆ ತಲುಪಿದೆ. ಹೊಸದಾಗಿ ಸೇರಿಸಲಾದ ತಾಣಗಳಲ್ಲಿ ಬಾಗ್ ಗುಹೆಯ ವರ್ಣಮಯ ಬೌದ್ಧ ಭಿತ್ತಿಚಿತ್ರಗಳು, ಚಂಬಲ್ ಕಣಿವೆಯ ದೇವಾಲಯಗಳ ಸಮೂಹ, ಗುಪ್ತರ ಯುಗದ ಉದಯಗಿರಿ ಗುಹೆಗಳು ಮತ್ತು ಗಿನ್ನೋರಗಢದ ಬುಡಕಟ್ಟು ಪರಂಪರೆಯೂ ಇವೆ. ಈ ತಾಣಗಳು ಭಾರತದ ಶ್ರೀಮಂತ ನಾಗರಿಕ ಪರಂಪರೆ ಮತ್ತು ರಾಷ್ಟ್ರೀಯ ಅಸ್ಮಿತೆಯನ್ನು ಪ್ರತಿಬಿಂಬಿಸುತ್ತವೆ. ಈ ಪ್ರಗತಿಯು ಭಾರತೀಯ ಪರಂಪರೆಯನ್ನು ಸಂರಕ್ಷಿಸುವ ಮತ್ತು ಅದನ್ನು ಜಾಗತಿಕ ವೇದಿಕೆಯಲ್ಲಿ ಪ್ರಸ್ತುತಪಡಿಸುವ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ದೃಷ್ಟಿಕೋನವನ್ನು ಬಿಂಬಿಸುತ್ತದೆ...




ಭಾರತ-ದಕ್ಷಿಣ ಆಫ್ರಿಕಾದ ಸತ್ಯಾಗ್ರಹ ಸರಣಿ ತಾಣಗಳ ಅಂತಾರಾಷ್ಟ್ರೀಯ ಪ್ರಸ್ತಾವನೆ



ಬಾಗ್ ಗುಹೆಯ ವರ್ಣಮಯ ಬೌದ್ಧ ಭಿತ್ತಿಚಿತ್ರಗಳು



ಗುಪ್ತರ ಕಾಲದ ಉದಯಗಿರಿ ಗುಹೆಗಳು



ಗಿನ್ನೋರ್ ಗಢದ ಬುಡಕಟ್ಟು ಪರಂಪರೆ



ಚಂಬಲ್ ಕಣಿವೆಯ ದೇವಾಲಯಗಳ ಸಮೂಹ

ನ್ಯೂ ಇಂಡಿಯಾ ಸಮಾಚಾರ

ಸಂಪುಟ 7, ಸಂಚಿಕೆ 09 | ನವೆಂಬರ್ 1-15, 2026

ಪ್ರಧಾನ ಸಂಪಾದಕರು
ಧೀರೇಂದ್ರ ಓಝಾ
ಪ್ರಧಾನ ಮಹಾನಿರ್ದೇಶಕರು,
ಪ್ರೆಸ್ ಇನ್‌ಫರ್ಮೇಶನ್ ಬ್ಯುರೋ
ನವದೆಹಲಿ

ಹಿರಿಯ ಸಲಹಾ ಸಂಪಾದಕ
ಸಂತೋಷ್ ಕುಮಾರ್

ಹಿರಿಯ ಸಹಾಯಕ ಸಲಹಾ ಸಂಪಾದಕ
ಪವನ್ ಕುಮಾರ್

ಸಹಾಯಕ ಸಲಹಾ ಸಂಪಾದಕ
ಅಖಿಲೇಶ್ ಕುಮಾರ್
ಚಂದನ್ ಕುಮಾರ್ ಚೌಧರಿ

ಭಾಷಾ ಸಂಪಾದಕರು
ಸುಮಿತ್ ಕುಮಾರ್ (ಇಂಗ್ಲಿಷ್)
ರಜನೀಶ್ ಮಿಶ್ರಾ (ಇಂಗ್ಲಿಷ್)
ನದೀಮ್ ಅಹ್ಮದ್ (ಉರ್ದು)

ಹಿರಿಯ ವಿನ್ಯಾಸಕರು
ಫೂಲ್ ಚಂದ್ ತಿವಾರಿ

ವಿನ್ಯಾಸಕರು
ಸತ್ಯಂ ಸಿಂಗ್
ಅನಿಲ್ ಕುಮಾರ್



13 ಭಾಷೆಗಳಲ್ಲಿ ಲಭ್ಯವಿರುವ ನವ ಭಾರತದ ಸುದ್ದಿಗಳನ್ನು ಓದಲು ಕ್ಲಿಕ್ ಮಾಡಿ
https://newindiasamachar.pib.gov.in/news.aspx
ನ್ಯೂ ಇಂಡಿಯಾ ಸಮಾಚಾರ ಹಿಂದಿನ ಸಂಚಿಕೆಗಳನ್ನು ಓದಲು ಕ್ಲಿಕ್ ಮಾಡಿ:
https://newindiasamachar.pib.gov.in.archive.aspx

'ನ್ಯೂ ಇಂಡಿಯಾ ಸಮಾಚಾರ'ದ ನಿಯಮಿತ ಅಪ್ಡೇಟ್ ಗಳಿಗಾಗಿ @NISPIBIndia ಅನ್ನು ಟ್ವಿಟ್ಟರ್‌ನಲ್ಲಿ ಅನುಸರಿಸಿ

ಒಳ ಪುಟಗಳಲ್ಲಿ...

ಮುಖಪುಟ ಲೇಖನ
'ವೋಕಲ್ ಫಾರ್ ಲೋಕಲ್'



'ವೋಕಲ್ ಫಾರ್ ಲೋಕಲ್' ಭಾರತೀಯರ ಮನಸ್ಸುಗಳನ್ನು ಬೆಸೆದ ಒಂದು ಕರೆ

ಈ ವರ್ಷದ ದೀಪಾವಳಿಯಲ್ಲಿ ಮಿನುಗುವ ದೀಪಗಳು ವಿಶೇಷವಾಗಿರುತ್ತವೆ, ಏಕೆಂದರೆ ಅವು ಸ್ವಾವಲಂಬನೆಯ ಬೆಳಕಿನಿಂದ ಬೆಳಗುತ್ತವೆ. 'ಮನ್ ಕಿ ಬಾತ್' ಮೂಲಕ ಪ್ರತಿಧ್ವನಿಸುತ್ತಿದ್ದ 'ಸ್ಥಳೀಯತೆಗೆ ಧ್ವನಿ -ವೋಕಲ್ ಫಾರ್ ಲೋಕಲ್' ಕರೆ ಇಂದು ಆಲದ ಮರದಂತೆ ಬೆಳೆದಿದೆ. ಈ ದೀಪಾವಳಿಯು ವಿಶೇಷವಾಗಿದೆ, ಕಾರಣ ಭಾರತವು ತನ್ನ ಕುಶಲಕರ್ಮಿಗಳ ಕೌಶಲ್ಯದ ಬಗ್ಗೆ ಹೆಮ್ಮೆಪಡುತ್ತಾ, 2047ರ ಹೊತ್ತಿಗೆ ವಿಕಸಿತ ಭಾರತ ಸಾಕಾರಕ್ಕೆ ಅಡಿಪಾಯ ಹಾಕುತ್ತಿರುವ ಪ್ರಮುಖ ಕ್ಷಣವಾಗಿದೆ. ಈ ದೀಪಾವಳಿ, ಪ್ರತಿ ದೀಪ, ಪ್ರತಿ ಉಡುಗೊರೆ ಮತ್ತು ಪ್ರತಿ ಖರೀದಿಯು ಕೇವಲ ಹಬ್ಬದ ಆಚರಣೆಗಿಂತ ಹೆಚ್ಚಿನದನ್ನು ಪ್ರತಿನಿಧಿಸುತ್ತದೆ; ಇದು 1.4 ಶತಕೋಟಿ ಭಾರತೀಯರ - ಸ್ವದೇಶಿ, ಸ್ವಾವಲಂಬನೆ ಮತ್ತು ಸಮೃದ್ಧ ಭಾರತದ ಸಾಮೂಹಿಕ ಸಂಕಲ್ಪವನ್ನು ಸಾಕಾರಗೊಳಿಸುತ್ತದೆ...

|14-29

ಸಾರ್ವಜನಿಕ ಸೇವೆಯ ಮೂಲಕ ರಾಷ್ಟ್ರಕ್ಕೆ 25 ವರ್ಷಗಳ ಸೇವೆ

ನವ ಭಾರತದ ಸಾಮೂಹಿಕ ಶಕ್ತಿಯ ಸಂಕೇತ



ಪ್ರಧಾನಿ ಮೋದಿ ತಮ್ಮ ಭಾಷಣದಲ್ಲಿ, "ನಾವು ಅದನ್ನು ಮಾಡುತ್ತೇವೆ" ಎಂಬ ಮನೋಭಾವವು ನವ ಭಾರತದ ಸಾಮೂಹಿಕ ಶಕ್ತಿಯ ಸಂಕೇತ ಎಂದು ಬಣ್ಣಿಸಿದರು. |8-13

ಭಾರತೀಯ ಪೈಲಟ್ ನ ಧೈರ್ಯ

ಭಾರತೀಯರು ಜೀವ ರಕ್ಷಕರು ಜೀವ ಭಕ್ಷಕರಲ್ಲ



ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರೊಂದಿಗೆ ವಿಡಿಯೋ ಕರೆ ಮೂಲಕ ಮಾತನಾಡಿದ ಪ್ರಧಾನಿ ಮೋದಿ, ಪೈಲಟ್ ಶೌರ್ಯ ಮತ್ತು ಬುದ್ಧಿವಂತಿಕೆಯನ್ನು ಶ್ಲಾಘಿಸಿ, ಶೀಘ್ರ ಚೇತರಿಸಿಕೊಳ್ಳುವಂತೆ ಹಾರೈಸಿದರು. |30-31

ಸುದ್ದಿ ತುಣುಕುಗಳು |4-5

ಎಂಎಸ್‌ಎಂಇಗಳಿಗೆ 10,000 ಕೋಟಿ ರೂ. ನಿಧಿ
ಐಟಿಎಲ್‌ಎ ಸ್ಥಾಪನೆಗೂ ಕೇಂದ್ರ ಸಚಿವ ಸಂಪುಟ ಅನುಮೋದನೆ | 6-7

ಡಿಜಿಟಲ್ ಸಂಪರ್ಕ: ಭವಿಷ್ಯಕ್ಕೆ ಹೊಸ ದಿಕ್ಕು
ಇಂಡಿಯಾ ಮೊಬೈಲ್ ಕಾಂಗ್ರೆಸ್ ನ 10ನೇ ಆವೃತ್ತಿಯನ್ನು ಉದ್ದೇಶಿಸಿ ಪ್ರಧಾನಿ ಮೋದಿ ಭಾಷಣ |32-33

ಜನ ಕೇಂದ್ರಿತ ಆಡಳಿತ: ಉತ್ತಮ ಆಡಳಿತದ ಹೆಗ್ಗುರುತು
ಪ್ರಧಾನಮಂತ್ರಿ ಮೋದಿ ಅವರು ಮೂರು ಮಂತ್ರಗಳನ್ನು ವಿವರಿಸಿದ್ದಾರೆ: ಜನ ಕೇಂದ್ರಿತ ಮನಃಸ್ಥಿತಿ, ಪೂರ್ವಾಲೋಚನೆ ಮತ್ತು ಉತ್ತಮ ಆಡಳಿತ |34-35

ಬುಡಕಟ್ಟು ಸಮುದಾಯದ ಉನ್ನತಿ... ಅವರ ಪರಂಪರೆಯನ್ನು ಆಚರಿಸುವ ಮೂಲಕ ಭವಿಷ್ಯದ ಪೀಳಿಗೆಗೆ ಸ್ಫೂರ್ತಿ ನೀಡುವುದು...
ಪ್ರಧಾನಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನಕ್ಕೆ ಮೂರು ವರ್ಷಗಳು | 36-37

ಸಬಲೀಕರಣಕ್ಕೆ ಶಕ್ತಿ
ಬ್ಲೂಮ್ ಬರ್ಗ್ ನ್ಯೂ ಎಕಾನಮಿ ಫೋರಂ ಉದ್ದೇಶಿಸಿ ಪ್ರಧಾನಿ ಮೋದಿ ಭಾಷಣ | 38-39

ಏಷ್ಯನ್ ಗೇಮ್ಸ್ 2026: ಅದ್ಭುತ ಪ್ರಯಾಣ, ಸ್ಮರಣೀಯ ಸಾಧನೆ
21 ಚಿನ್ನ, 27 ಬೆಳ್ಳಿ ಮತ್ತು 37 ಕಂಚಿನ ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ಭಾರತಕ್ಕೆ ನಾಲ್ಕನೇ ಸ್ಥಾನ | 40-42

ಲಡಾಖ್ ನ ಪ್ರಗತಿ ಮತ್ತು ಅಭಿವೃದ್ಧಿಯಲ್ಲಿ ಮತ್ತೊಂದು ಅಧ್ಯಾಯ
3,350 ಕೋಟಿ ರೂ.ಗಳ ಯೋಜನೆಗಳನ್ನು ಉದ್ಘಾಟಿಸಿದ ಪ್ರಧಾನಿ ಮೋದಿ | 43

ವ್ಯಕ್ತಿತ್ವ: ಡಾ.ಪದ್ಮಾವತಿ ಬಂಡೋಪಾಧ್ಯಾಯ
ಭಾರತದ ಮೊದಲ ಮಹಿಳಾ ಏರ್ ಮಾರ್ಷಲ್ | 47

ಗೌರವ: ವಿದಾಯ, ನಾನಾ ಪಾಟೇಕರ್ | 48



ಪರಂಪರೆ ಮತ್ತು ಭವಿಷ್ಯದ ಪೋಷಣೆ

ಪ್ರಗತಿಯ ಆಕಾಂಕ್ಷೆಗಳು

ತಮಿಳುನಾಡಿಗಾಗಿ 13,000 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಯೋಜನೆಗಳನ್ನು ಅನಾವರಣಗೊಳಿಸಿದ ಪ್ರಧಾನಿ ಮೋದಿ, ಮೆದುಳು ಸಂಶೋಧನಾ ಕೇಂದ್ರವನ್ನು ರಾಷ್ಟ್ರಕ್ಕೆ ಸಮರ್ಪಿಸಿದರು. |44-46

Published: Kanchan Prasad, Director General, on behalf of Central Bureau of Communication
Communication Address : Room No–1077, Soochna Bhawan, CGO Complex, New Delhi -110003.
E-Mail : response-nis@pib.gov.in, RNI No. : DELENG/2020/78811

ಸಂಪಾದಕೀಯ...

ಈ ದೀಪಾವಳಿಯಲ್ಲಿ, ನಿಮ್ಮ ಮನೆಯನ್ನು ಸ್ವದೇಶಿ ಉತ್ಪನ್ನಗಳಿಂದ ಬೆಳಗಿಸಿ

ಆತ್ಮೀಯ ಶುಭಾಶಯಗಳು,

ಹಬ್ಬದ ಋತು ಸಮೀಪಿಸುತ್ತಿದ್ದಂತೆ, ಪ್ರತಿ ಮನೆಯೂ ಹಬ್ಬದ ಉತ್ಸಾಹದಿಂದ ಜೀವಂತವಾಗಿರುತ್ತದೆ. ಮಾರುಕಟ್ಟೆಗಳನ್ನೂ ಅಲಂಕರಿಸಲಾಗುತ್ತಿದೆ ಮತ್ತು ಕುಟುಂಬಗಳು ತಮ್ಮ ಖರೀದಿ ಪಟ್ಟಿಯನ್ನು ಸಿದ್ಧಪಡಿಸುತ್ತಿವೆ. ದೀಪಾವಳಿಗೆ ಮಣ್ಣಿನ ದೀಪಗಳನ್ನು ಖರೀದಿಸುವುದು ನಮ್ಮ ಬಾಲ್ಯದ ಅತ್ಯಂತ ಸ್ಮರಣೀಯ ಅನುಭವಗಳಲ್ಲಿ ಒಂದಾಗಿದೆ. ಕುಂಬಾರರು ತಯಾರಿಸಿದ ಪ್ರತಿಯೊಂದು ದೀಪವು ಕೇವಲ ಬೆಳಕನ್ನು ನೀಡುವುದಕ್ಕಿಂತ ಹೆಚ್ಚಿನದನ್ನು ಮಾಡುತ್ತದೆ; ಇದು ಕುಟುಂಬದ ಕಠಿಣ ಪರಿಶ್ರಮ ಮತ್ತು ಅವರು ಅದರಲ್ಲಿ ಹೂಡಿಕೆ ಮಾಡಿದ ಭರವಸೆಗಳನ್ನು ಸಾಕಾರಗೊಳಿಸುತ್ತದೆ.

ಈ ವರ್ಷದ ದೀಪಾವಳಿಯ ಸಂದೇಶವು ವಿಶೇಷವಾಗಿ ಮಹತ್ವದ್ದಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು 25 ವರ್ಷಗಳ ಸಾರ್ವಜನಿಕ ಸೇವೆಯನ್ನು ಪೂರೈಸಿದ್ದಾರೆ. ಈ ಸಂದರ್ಭದಲ್ಲಿ, "ನಾವು ಅದನ್ನು ಮಾಡುತ್ತೇವೆ" ಎಂಬ ಸಂಕಲ್ಪದೊಂದಿಗೆ 'ವಿಕಸಿತ ಭಾರತ'ದ ಗುರಿಯನ್ನು ಸಾಧಿಸುವ ಸಂದೇಶವನ್ನು ಅವರು ರವಾನಿಸಿದ್ದಾರೆ. 2047ರ ವೇಳೆಗೆ ವಿಕಸಿತ ಭಾರತದ ಹಾದಿಯು ಸ್ವಾವಲಂಬನೆಯಲ್ಲಿ ಅಡಗಿದೆ, ಸ್ವದೇಶಿ ಅತ್ಯಂತ ಮೂಲಭೂತ ಆಧಾರಸ್ತಂಭವಾಗಿ ಕಾರ್ಯನಿರ್ವಹಿಸುತ್ತದೆ. 'ಸ್ಥಳೀಯತೆಗೆ ಧ್ವನಿ -ವೋಕಲ್ ಫಾರ್ ಲೋಕಲ್' ಎಂಬ ಕರೆಯು ಈಗ ಕೇವಲ ಘೋಷಣೆಯಷ್ಟೇ ಅಲ್ಲ ನಮ್ಮ ದೈನಂದಿನ ಜೀವನದ ಭಾಗವಾಗಿ ಆವರಿಸಿಕೊಂಡಿದೆ.

ಸ್ವಲ್ಪ ಯೋಚಿಸಿ - ನಾವು ಮಾಡಿದ ಸಣ್ಣ ಖರೀದಿಯು ಕುಶಲಕರ್ಮಿಗಳ ಮನೆಯಲ್ಲೂ ದೀಪವನ್ನು ಬೆಳಗಿಸಬಹುದು. ನಾವು ನೀಡುವ ಉಡುಗೊರೆಗಳು ಸ್ಥಳೀಯವಾಗಿರಲಿ; ನಮ್ಮ ಉಡುಪುಗಳನ್ನು ಭಾರತದಲ್ಲಿಯೇ ನೇಯಲಿ; ನಮ್ಮ ಅಲಂಕಾರಗಳು ಭಾರತೀಯ ನಿರ್ಮಿತ ಉತ್ಪನ್ನಗಳನ್ನು ಹೊಂದಿರಲಿ; ಮತ್ತು ಭಾರತೀಯ ನಿರ್ಮಿತ ಸಾಲು ದೀಪಗಳು ಮತ್ತು ಮೇಣದ ಬತ್ತಿಗಳ ಮೂಲಕ ನಮ್ಮ ದೀಪಗಳು ಬೆಳಗಲಿ. ನೀವು ದೇಶೀಯ ಉಡುಗೊರೆಯನ್ನು ನೀಡಿದಾಗ, ನೀವು ಮಾಧುರ್ಯವನ್ನು ಮಾತ್ರವಲ್ಲದೆ ನಿಮ್ಮ ಪ್ರೀತಿಪಾತ್ರರೊಂದಿಗೆ ಆತ್ಮೀಯತೆ ಮತ್ತು ಸಂಪರ್ಕದ ಭಾವನೆಯನ್ನು ಸಹ ಹಂಚಿಕೊಳ್ಳುತ್ತೀರಿ.

ನಾವು ನಮ್ಮ ದೇಹ, ಮನಸ್ಸು ಮತ್ತು ನಮ್ಮ ಅಸ್ತಿತ್ವದ ಪ್ರತಿಯೊಂದು ಎಳೆಯನ್ನು ಸ್ವದೇಶಿ ಮನೋಭಾವದಿಂದ ತುಂಬಬೇಕು. ಈ ಹಬ್ಬದ ಋತುವನ್ನು ಹೆಮ್ಮೆಯಿಂದ ಹೀಗೆ ಘೋಷಿಸೋಣ, "ಇದು ಸ್ವದೇಶಿ". ಒಂದು ಮಂತ್ರ - 'ಸ್ಥಳೀಯತೆಗೆ ಧ್ವನಿ- ವೋಕಲ್ ಫಾರ್ ಲೋಕಲ್'; ಒಂದು ಮಾರ್ಗ - 'ಸ್ವಾವಲಂಬನೆ'; ಒಂದು ಗುರಿ - ವಿಕಸಿತ ಭಾರತ. ಅದಕ್ಕಾಗಿಯೇ, ಈ ಸಂಚಿಕೆಯಲ್ಲಿ, 'ವೋಕಲ್ ಫಾರ್ ಲೋಕಲ್' ಈ ಹಬ್ಬದ ತಿಂಗಳ ಮುಖಪುಟ ಲೇಖನವಾಗಿದೆ.

ಜನಸೇವೆಯಿಂದ ರಾಷ್ಟ್ರ ಸೇವೆಯವರೆಗಿನ ಪ್ರಧಾನಿ ಮೋದಿಯವರ 25 ವರ್ಷಗಳ ಪಯಣದ ಗಾಥೆಯು ಈ ಸಂಚಿಕೆಯ ಪ್ರಮುಖ ಮುಖ್ಯಾಂಶಗಳಲ್ಲಿ ಒಂದಾಗಿದೆ. 'ವ್ಯಕ್ತಿತ್ವ' ವಿಭಾಗದಲ್ಲಿ ಭಾರತದ ಮೊದಲ ಮಹಿಳಾ ಏರ್ ಮಾರ್ಷಲ್ ಡಾ. ಪದ್ಮಾವತಿ ಬಂಡೋಪಾಧ್ಯಾಯ ಕುರಿತ ಲೇಖನದೊಂದಿಗೆ ಕೇಂದ್ರ ಸಚಿವ ಸಂಪುಟದ ನಿರ್ಣಯಗಳು ಮತ್ತು ಕಳೆದ ಹದಿನೈದು ದಿನಗಳಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮಗಳ ಮುಖ್ಯಾಂಶಗಳಿವೆ. ರಕ್ಷಾಪುಟದ ಒಳ ಪುಟದಲ್ಲಿ ಯುನೆಸ್ಕೋ ವಿಶ್ವ ಪರಂಪರೆಯ ಸಂಭಾವ್ಯ ಪಟ್ಟಿ ಮತ್ತು ನವೆಂಬರ್ 12 ರಂದು ಆಚರಿಸಲಾಗುವ 'ಸಾರ್ವಜನಿಕ ಸೇವಾ ಪ್ರಸಾರ ದಿನ'ಕ್ಕೆ ಮೀಸಲಾದ ವಿಶೇಷ ವಸ್ತು ವಿಷಯವೂ ಈ ಸಂಚಿಕೆಯ ಭಾಗವಾಗಿದೆ.

ನಿಮ್ಮ ಸಲಹೆಗಳನ್ನು ನಮಗೆ ಕಳುಹಿಸುತ್ತಿರಿ.



(ಧೀರೇಂದ್ರ ಓಝಾ)



ಹಿಂದಿ, ಇಂಗ್ಲಿಷ್ ಮತ್ತು ಇತರ 11 ಭಾಷೆಗಳಲ್ಲಿ ಲಭ್ಯವಿರುವ ಪತ್ರಿಕೆಯನ್ನು ಇಲ್ಲಿ ಓದಿ/ಡೌನ್ಲೋಡ್ ಮಾಡಿ.
https://newindiasamachar.pib.gov.in/

ಅಂಚೆ ಪೆಟ್ಟಿಗೆ





'ನ್ಯೂ ಇಂಡಿಯಾ ಸಮಾಚಾರ' ನಿಯತಕಾಲಿಕ: ನವೀಕರಿಸಲು ಹೆಚ್ಚು ಉಪಯುಕ್ತ

ನಾನು 'ನ್ಯೂ ಇಂಡಿಯಾ ಸಮಾಚಾರ'ದ ನಿಯಮಿತ ಓದುಗ. ಭಾರತ ಸರ್ಕಾರದ ಯೋಜನೆಗಳು, ನೀತಿಗಳು ಮತ್ತು ಪ್ರಚಲಿತ ವಿದ್ಯಮಾನಗಳ ಬಗ್ಗೆ ತಿಳಿಯಲು ಈ ನಿಯತಕಾಲಿಕವು ಅತ್ಯಂತ ಉಪಯುಕ್ತವಾಗಿದೆ. ಇದು ದೇಶದ ಪ್ರಗತಿಯ ಬಗ್ಗೆ ನನ್ನ ಜ್ಞಾನವನ್ನು ಹೆಚ್ಚಿಸುತ್ತದೆ ಮತ್ತು ಸಮಸ್ಯೆಗಳನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಮತ್ತು ಜವಾಬ್ದಾರಿಯುತ ನಾಗರಿಕನಾಗಿ ಭಾಗವಹಿಸಲು ನನಗೆ ಸ್ಫೂರ್ತಿ ನೀಡುತ್ತದೆ.

ನಿವೇಶ್ ಗೋಯೆಲ್
goyalnivesh98@gmail.com

ಹೊಸ ಸಂಚಿಕೆಗಾಗಿ ಕುತೂಹಲದಿಂದ ಕಾಯುತ್ತಿದ್ದೇನೆ

ನಾನು 'ನ್ಯೂ ಇಂಡಿಯಾ ಸಮಾಚಾರ' ನಿಯತಕಾಲಿಕವನ್ನು ಓದುವುದನ್ನು ನಿಜವಾಗಿಯೂ ಆನಂದಿಸುತ್ತೇನೆ ಮತ್ತು ಪ್ರತಿ ಹೊಸ ಸಂಚಿಕೆಗಾಗಿ ಕುತೂಹಲದಿಂದ ಕಾಯುತ್ತೇನೆ. ನಾನು ಅದನ್ನು ಓದಿದಾಗಲೆಲ್ಲಾ ನಾನು ಭಾರತದ ಸಾಂಸ್ಕೃತಿಕ ಮತ್ತು ಧಾರ್ಮಿಕ ವೈವಿಧ್ಯತೆಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳುತ್ತೇನೆ. ಹೆಚ್ಚುವರಿಯಾಗಿ, ನಿಯತಕಾಲಿಕವು ಭಾರತದ ಅಭಿವೃದ್ಧಿ ಸಾಮರ್ಥ್ಯವನ್ನು ಎತ್ತಿ ತೋರಿಸುತ್ತದೆ ಮತ್ತು 'ವಿಕಸಿತ ಭಾರತ 2047' ಗುರಿಯನ್ನು ಸಾಧಿಸಲು ದೇಶವು ಎಲ್ಲಾ ಕ್ಷೇತ್ರಗಳಲ್ಲಿ ಹೇಗೆ ವೇಗವಾಗಿ ಮುನ್ನಡೆಯುತ್ತಿದೆ ಎಂಬುದನ್ನು ತೋರಿಸುತ್ತದೆ.

shivanshchouhan397@gmail.com

ಪ್ರಚಲಿತ ವಿದ್ಯಮಾನಗಳ ಬಗ್ಗೆ ಮಾಹಿತಿಗಾಗಿ ಅತ್ಯುತ್ತಮ ಮಾಧ್ಯಮ

ಒಬ್ಬ ಶಿಕ್ಷಕನಾಗಿ, ಕಲಿಯಲು ಉತ್ಸುಕರಾಗಿರುವ ವಿದ್ಯಾರ್ಥಿಗಳೊಂದಿಗೆ ನಿರಂತರವಾಗಿ ಜ್ಞಾನವನ್ನು ಹಂಚಿಕೊಳ್ಳುವ ಮಹತ್ವವನ್ನು ನಾನು ನಂಬುತ್ತೇನೆ. ನಾನು ನಿಯಮಿತವಾಗಿ 'ನ್ಯೂ ಇಂಡಿಯಾ ಸಮಾಚಾರ' ಡೌನ್ಲೋಡ್ ಮಾಡಿಕೊಳ್ಳುತ್ತೇನೆ. ಇದು ಸರ್ಕಾರದ ಉಪಕ್ರಮಗಳು, ಯೋಜನೆಗಳು ಮತ್ತು ಪ್ರಚಲಿತ ವಿದ್ಯಮಾನಗಳ ಬಗ್ಗೆ ಮಾಹಿತಿಯನ್ನು ಪ್ರಸಾರ ಮಾಡಲು ಅತ್ಯುತ್ತಮ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತದೆ, 'ನವ ಭಾರತ'ದಲ್ಲಿ ಆಗುತ್ತಿರುವ ಪ್ರಗತಿಯ ಬಗ್ಗೆ ದೃಢವಾದ ವಿವರಗಳನ್ನು ನೀಡುತ್ತದೆ.

ಪ್ರದೀಪ್ ಕುಮಾರ್ ಸಾಹು
pradeepgrasshopper@gmail.com

ಜ್ಞಾನ ಮತ್ತು ಕೌಶಲ್ಯಗಳನ್ನು ಬೆಳೆಸಲು ಸಹಕಾರಿ

ನಾನು 'ನ್ಯೂ ಇಂಡಿಯಾ ಸಮಾಚಾರ' ನಿಯತಕಾಲಿಕವನ್ನು ನಿಯಮಿತವಾಗಿ ಓದುತ್ತೇನೆ. ಇದು ಹೆಚ್ಚು ಮಾಹಿತಿಪೂರ್ಣವಾಗಿದೆ, ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ವಿವರಗಳನ್ನು ಒದಗಿಸುತ್ತದೆ. ಇದು ನನ್ನ ವೈಯಕ್ತಿಕ ಬೆಳವಣಿಗೆಗೆ ಸಹಾಯ ಮಾಡುತ್ತದೆ ಮತ್ತು ನನ್ನ ಜ್ಞಾನ ಮತ್ತು ಕೌಶಲ್ಯಗಳನ್ನು ಬೆಳೆಸುತ್ತದೆ. ನಿಯತಕಾಲಿಕವನ್ನು ಓದುವುದು ಮತ್ತು ಅದರಿಂದ ಕಲಿಯುವುದು ಎರಡನ್ನೂ ನಾನು ಆನಂದಿಸುತ್ತೇನೆ.

ಭಾಸ್ಕರ್ ಸಿಂಗ್ ಮಹಾರ್
bhaskarmahar65@gmail.com

Communication Address : Room No–1077, Soochna Bhawan, CGO Complex, New Delhi -110003

E-Mail: response-nis@pib.gov.in

ಸುದ್ದಿ ಮುಖ್ಯಾಂಶಗಳು

ವಿಬಿ-ಜಿ ರಾಮ್ ಜಿ ಅಡಿಯಲ್ಲಿ 375 ವಿಧದ ಕಾಮಗಾರಿಗಳನ್ನು ಕೈಗೊಳ್ಳಬಹುದು

ವಿಕಸಿತ ಭಾರತ - ರೋಜ್ಗಾರ್ ಗ್ಯಾರಂಟಿ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ) ಗೆ ಅಡಿಯಲ್ಲಿ – ಈ ಹಿಂದೆ ಮನ್ರೇಗಾ ಅಡಿಯಲ್ಲಿ ಅನುಮತಿಸಲಾಗಿದ್ದ 266 ಕಾಮಗಾರಿಗಳಿಗೆ ಹೋಲಿಸಿದರೆ ಇನ್ನೂ ಹೆಚ್ಚು ಅಂದರೆ ಒಟ್ಟು 375 ರೀತಿಯ ಕಾಮಗಾರಿಗಳನ್ನು ಕೈಗೊಳ್ಳಬಹುದು. 38 ವಿಶೇಷ ಕಾಮಗಾರಿಗಳನ್ನು ಒಳಗೊಂಡ ಹೊಸ ವರ್ಗವನ್ನು ಇದರಲ್ಲಿ ಪರಿಚಯಿಸಲಾಗಿದೆ; ಈ ಕಾರ್ಯಗಳನ್ನು ಹವಾಮಾನ ವೈಪರೀತ್ಯ ಘಟನೆಗಳು ಮತ್ತು ವಿಪತ್ತು ನಿರ್ವಹಣೆಯನ್ನು ಪರಿಹರಿಸಲು ಸಹ ವಿನ್ಯಾಸಗೊಳಿಸಲಾಗಿದೆ. ಹನಿ ನೀರಾವರಿ, ತುಂತುರು ನೀರಾವರಿ, ಮೇಲ್ಛಾವಣಿಯ ಮಳೆನೀರು ಕೊಯ್ಲು ಮತ್ತು ನೀರಿನ ಸಂರಕ್ಷಣೆಯಂತಹ ಹೊಸ ಕ್ರಮಗಳನ್ನು ಜಲ ಭದ್ರತಾ ವಿಭಾಗದಲ್ಲಿ ಸೇರಿಸಲಾಗಿದೆ. ವ್ಯಾಪ್ತಿಯು ಈಗ ಜಲ ಜೀವನ್ ಮಿಷನ್ ಅಡಿಯಲ್ಲಿ ಸ್ಥಾಪಿಸಲಾದ ನೀರು ಸರಬರಾಜು ಮೂಲಸೌಕರ್ಯಗಳ ದುರಸ್ತಿ ಮತ್ತು ನಿರ್ವಹಣೆಯನ್ನು ಸಹ ಒಳಗೊಂಡಿದೆ. ಹೊಸ ವೇಳಾಪಟ್ಟಿಯು ಸರ್ಕಾರಿ ಕಟ್ಟಡಗಳಲ್ಲಿ ಮೆಟ್ಟಿಲುಗಳು ಮತ್ತು ಇಳಿಜಾರುಗಳ ನಿರ್ಮಾಣ ಸೇರಿದಂತೆ ದಿವ್ಯಾಂಗರಿಗೆ ಪ್ರವೇಶಾವಕಾಶವನ್ನೂ ಒಳಗೊಂಡಿದೆ.

ಸಮಾಜದ ಎಲ್ಲಾ ವರ್ಗಗಳಿಗೂ ಕಾಮಗಾರಿಗಳ ಅನುಮೋದನೆ

ಹೊಸ ಅಧಿಸೂಚನೆಯು ರೈತರು, ದುರ್ಬಲ ಕುಟುಂಬಗಳು, ಮಹಿಳೆಯರು ಮತ್ತು ಗ್ರಾಮೀಣ ಯುವಕರಿಗೆ ವಿಶೇಷ ಒತ್ತು ನೀಡುತ್ತದೆ. ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ 181 ಕಾಮಗಾರಿಗಳನ್ನು ನಿಗದಿಪಡಿಸಲಾಗಿದೆ, ಇದರಲ್ಲಿ 52 ಕಾಮಗಾರಿಗಳು ವೈಯಕ್ತಿಕ ಫಲಾನುಭವಿಗಳಿಗೆ ಪ್ರಯೋಜನಕಾರಿಯಾಗಿವೆ. ಅಂತೆಯೇ, ಅಂತ್ಯೋದಯ ಅಥವಾ ದುರ್ಬಲ ಕುಟುಂಬಗಳಿಗಾಗಿ 107 ಕಾಮಗಾರಿಗಳನ್ನು ಮೀಸಲಿಡಲಾಗಿದೆ. ಈ ಪಟ್ಟಿಯಲ್ಲಿ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ 36 ಕಾಮಗಾರಿಗಳು ಮತ್ತು ಯುವಜನತೆ ಸಬಲೀಕರಣದ ಗುರಿಯನ್ನು ಹೊಂದಿರುವ 36 ಕಾಮಗಾರಿಗಳೂ ಸೇರಿವೆ.





ಭಾರತದಲ್ಲಿ ಬಡತನ ಮತ್ತಷ್ಟು ತಗ್ಗಲಿದೆ: ವಿಶ್ವಬ್ಯಾಂಕ್

ಭಾರತವು ಬಡತನವನ್ನು ಕಡಿಮೆ ಮಾಡುವಲ್ಲಿ ಕಳೆದ ದಶಕದಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ ಎಂದು ವಿಶ್ವಬ್ಯಾಂಕ್ ತನ್ನ ಅಕ್ಟೋಬರ್ ಸಾರ್ವಜನಿಕ ಪ್ರಕಟಣೆಯಲ್ಲಿ ತಿಳಿಸಿದೆ. ಜಾಗತಿಕವಾಗಿ ಬಡತನ ನಿವಾರಣೆಯ ವೇಗದ ದರವನ್ನು ಸಾಧಿಸುವ ದೇಶಗಳಲ್ಲಿ ಭಾರತವು ಸ್ಥಾನ ಪಡೆದಿದೆ. ಬಡತನದ ಪ್ರಮಾಣವು 2026 ರಲ್ಲಿ ಶೇಕಡಾ 14.2 ರಿಂದ 2028 ರ ವೇಳೆಗೆ ಶೇಕಡಾ 12.1 ಕ್ಕೆ ಇಳಿಯುತ್ತದೆ ಎಂದು ಅಂದಾಜಿಸಲಾಗಿದೆ.

2011 ಮತ್ತು 2023 ರ ನಡುವೆ, ದಿನಕ್ಕೆ ಸುಮಾರು 400 ರೂ.ಗಿಂತ ಕಡಿಮೆ ಆದಾಯದಲ್ಲಿ ವಾಸಿಸುತ್ತಿದ್ದ ಜನರ ಪ್ರಮಾಣವು 57.7% ರಿಂದ 16.1% ಕ್ಕೆ ಇಳಿದಿದೆ, ಇದು ಸುಮಾರು 496 ದಶಲಕ್ಷ ಜನರನ್ನು ಬಡತನದಿಂದ ಮೇಲೆತ್ತಿದೆ ಎಂದು ವಿಶ್ವಬ್ಯಾಂಕ್ ಗಮನಿಸಿದೆ. ಏತನ್ಮಧ್ಯೆ, ಕಡು ಬಡವರ ಶೇಕಡಾವಾರು ಪ್ರಮಾಣವು 27.1% ರಿಂದ 2.6% ಕ್ಕೆ ಇಳಿದಿದೆ. ಈ ಕಡಿತಕ್ಕೆ ಉಲ್ಲೇಖಿಸಲಾದ ಪ್ರಮುಖ ಕಾರಣ ಹೆಚ್ಚಿದ ಉದ್ಯೋಗ - ವಿಶೇಷವಾಗಿ ಮಹಿಳೆಯರ ಉದ್ಯೋಗ - ಜೊತೆಗೆ ಸರ್ಕಾರವು ಒದಗಿಸುವ ಸಬ್ಸಿಡಿ ಆಹಾರ ಧಾನ್ಯಗಳ ಲಭ್ಯತೆ ಮತ್ತು ಒಟ್ಟಾರೆ ವೆಚ್ಚ ಮತ್ತು ಬಳಕೆಯ ಹೆಚ್ಚಳ ಸೇರಿವೆ.

ಭಾರತದ ಉದಯೋನ್ಮುಖ ಸೂಪರ್ ಕಂಪ್ಯೂಟಿಂಗ್ ಪರಿಸರ ವ್ಯವಸ್ಥೆ

'ಡಿಜಿಟಲ್ ಇಂಡಿಯಾ' ಉಪಕ್ರಮದ ಜೊತೆಗೆ, ಭಾರತವು ತನ್ನ ಡೇಟಾ ಸೆಂಟರ್ ಮತ್ತು ಕೃತಕ ಬುದ್ಧಿಮತ್ತೆ ಪರಿಸರ ವ್ಯವಸ್ಥೆಗಳನ್ನು ಬಲಪಡಿಸುತ್ತಿದೆ. ಈ ಪರಿಸರ ವ್ಯವಸ್ಥೆಯು ದೇಶದೊಳಗೆ ಸುಧಾರಿತ ಕಂಪ್ಯೂಟಿಂಗ್ ಮೂಲಸೌಕರ್ಯಕ್ಕೆ ಬೇಡಿಕೆಯನ್ನು ಹೆಚ್ಚಿಸುತ್ತಿದೆ. ಭಾರತವು ವಿಶ್ವದ ಸರಿಸುಮಾರು 20 ಪ್ರತಿಶತದಷ್ಟು ಡೇಟಾವನ್ನು ಉತ್ಪಾದಿಸುತ್ತದೆ. ಕೃತಕ ಬುದ್ಧಿಮತ್ತೆ, ಹವಾಮಾನ ಮುನ್ಸೂಚನೆ ಮತ್ತು ಬಾಹ್ಯಾಕಾಶ ಸಂಶೋಧನೆಯಂತಹ ಕ್ಷೇತ್ರಗಳಿಗೆ ಗಮನಾರ್ಹ ಕಂಪ್ಯೂಟಿಂಗ್ ಸಾಮರ್ಥ್ಯಗಳು ಬೇಕಾಗುತ್ತವೆ; ಪರಿಣಾಮವಾಗಿ, ಕೇಂದ್ರ ಸರ್ಕಾರವು ಸಂಶೋಧನಾ ಸಂಸ್ಥೆಗಳಿಗೆ ಸೂಪರ್ ಕಂಪ್ಯೂಟಿಂಗ್ ಸೌಲಭ್ಯಗಳ ಪ್ರವೇಶವನ್ನು ವಿಸ್ತರಿಸುತ್ತಿದೆ. ರಾಷ್ಟ್ರೀಯ ಸೂಪರ್ ಕಂಪ್ಯೂಟಿಂಗ್ ಮಿಷನ್ ನ ಪರಿಣಾಮವಾಗಿ, ಭಾರತವು ಸೆಪ್ಟೆಂಬರ್ 2026 ರ ವೇಳೆಗೆ 68 ಪೆಟಾಫ್ಲಾಪ್ ಗಳ ಸಂಯೋಜಿತ ಸಾಮರ್ಥ್ಯದ 40 ಸೂಪರ್ ಕಂಪ್ಯೂಟರ್ ಗಳನ್ನು ನಿಯೋಜಿಸಿದೆ. 123 ಪೆಟಾಫ್ಲಾಪ್ ಗಳನ್ನು ಮೀರಿದ ಒಟ್ಟು ಸಾಮರ್ಥ್ಯದ 50 ವ್ಯವಸ್ಥೆಗಳನ್ನು ನಿಯೋಜಿಸುವುದು ಅಂತಿಮ ಗುರಿಯಾಗಿದೆ.





ಕ್ಯಾನ್ಸರ್ ಔಷಧಿಗಳು ಅಗ್ಗ;

ವಾರ್ಷಿಕ 2,500 ಕೋಟಿ ರೂ. ಉಳಿತಾಯದ ನಿರೀಕ್ಷೆ

ಪಟ್ಟಿಯಲ್ಲಿಲ್ಲದ ಕ್ಯಾನ್ಸರ್ ನಿಗ್ರಹ ಔಷಧಗಳ ವರ್ಗಕ್ಕೆ ಸೇರಿದ ಔಷಧಗಳ ಪೂರೈಕೆ ಮತ್ತು ಚಿಲ್ಲರೆ ಮಾರಾಟದ ನಡುವಿನ ಬೆಲೆಯ ಲಾಭದ ಅಂತರವನ್ನು ಗರಿಷ್ಠ ಚಿಲ್ಲರೆ ಬೆಲೆಯ (MRP) ಶೇಕಡಾ 30ಕ್ಕೆ ಮಿತಿಗೊಳಿಸಲು ಸರ್ಕಾರ ಅನುಮೋದನೆ ನೀಡಿದೆ. ಈ ಕ್ರಮವು ಕೆಲವು ಔಷಧಿಗಳ ಬೆಲೆಯನ್ನು 70% ರಷ್ಟು ತಗ್ಗಿಸಲಿದ್ದು, ಇದರ ಪರಿಣಾಮವಾಗಿ ವಾರ್ಷಿಕ ಸುಮಾರು 2,500 ಕೋಟಿ ರೂ. ಉಳಿತಾಯ ನಿರೀಕ್ಷಿಸಲಾಗಿದೆ. ಪ್ರಸ್ತುತ, ಸರ್ಕಾರವು ಅಗತ್ಯ 'ನಿಗದಿತ ಕ್ಯಾನ್ಸರ್ ಔಷಧಿಗಳ ಬೆಲೆಗಳನ್ನು ನಿಯಂತ್ರಿಸುತ್ತದೆ. ಈ ನಿಯಂತ್ರಕ ಚೌಕಟ್ಟನ್ನು ಈಗ ಆ ಪಟ್ಟಿಯಿಂದ ಹೊರಗಿರುವ ಕ್ಯಾನ್ಸರ್ ಔಷಧಿಗಳಿಗೂ ವಿಸ್ತರಿಸಲಾಗುವುದು. ಈ ವ್ಯಾಪ್ತಿಯು ಬ್ರಾಂಡೆಡ್ ಮತ್ತು ಜೆನೆರಿಕ್, ದೇಶೀಯವಾಗಿ ಉತ್ಪಾದಿಸಿದ ಮತ್ತು ಆಮದು ಮಾಡಿಕೊಳ್ಳುವ ಮತ್ತು ಪೇಟೆಂಟ್ ಪಡೆದ ಮತ್ತು ಪೇಟೆಂಟ್ ಪಡೆಯದ ಔಷಧಿಗಳು ಸೇರಿದಂತೆ ವ್ಯಾಪಕ ಶ್ರೇಣಿಯ ಔಷಧಿಗಳನ್ನು ಒಳಗೊಂಡಿದೆ. ಸರ್ಕಾರದ ಪ್ರಕಾರ, ಅಂತಹ ಔಷಧಿಗಳ ಬೆಲೆಯು ಪೂರೈಕೆ ಸರಪಳಿಯಲ್ಲಿ ಸರಾಸರಿ 170% ರಷ್ಟು ಹೆಚ್ಚಾಗುತ್ತದೆ, ಕೆಲವು ನಿದರ್ಶನಗಳಲ್ಲಿ 700% ಕ್ಕಿಂತ ಅಧಿಕ ಹೆಚ್ಚಳವಾಗಿದೆ. 2019 ರಲ್ಲಿ 42 ಪರಿಶಿಷ್ಟದಲ್ಲಿಲ್ಲದ ಕ್ಯಾನ್ಸರ್ ಔಷಧಿಗಳ ಮೇಲೆ ಲಾಭದ ಅಂತರದ ಮಿತಿ ವಿಧಿಸುವುದರಿಂದ 526 ಬ್ರ್ಯಾಂಡ್ ಗಳ ಎಂಆರ್. ಪಿ.ಯಲ್ಲಿ ಶೇ.91 ರಷ್ಟು ಇಳಿಕೆಯಾಗಿದೆ, ಇದರ ಪರಿಣಾಮವಾಗಿ ರೋಗಿಗಳಿಗೆ ವಾರ್ಷಿಕ 984 ಕೋಟಿ ರೂ. ಉಳಿತಾಯವಾಗಲಿದೆ.

ಜಾಗೃತಿ ಮೂಡಿಸುವ 'ಸಂಚಾರ ಸಾಥಿ'...

5,000 ಕೋಟಿ ರೂ.ಗಳ ವಂಚನೆಗೆ ತಡೆ

ಸೈಬರ್ ಅಪರಾಧ ಮತ್ತು ಆರ್ಥಿಕ ವಂಚನೆಗಾಗಿ ದೂರಸಂಪರ್ಕ ಸಂಪನ್ಮೂಲಗಳ ದುರುಪಯೋಗವನ್ನು ತಡೆಯಲು ಪ್ರಾರಂಭಿಸಲಾದ 'ಸಂಚಾರ್ ಸಾಥಿ' ಪೋರ್ಟಲ್ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಮಾತ್ರವಲ್ಲದೆ ₹5,000 ಕೋಟಿಗೂ ಹೆಚ್ಚು ವಂಚನೆಯನ್ನು ತಡೆಗಟ್ಟಿದೆ. ಮೇ 2023 ರಲ್ಲಿ ಪ್ರಾರಂಭವಾದಾಗಿನಿಂದ, ಪೋರ್ಟಲ್ಗೆ 300 ದಶಲಕ್ಷಕ್ಕೂ ಹೆಚ್ಚು ಜನರ ಭೇಟಿ ದಾಖಲಾಗಿದೆ. 40 ದಶಲಕ್ಷ ಜನರು ತಮ್ಮ ಹೆಸರಿನಲ್ಲಿ ನೋಂದಾಯಿಸಲಾದ ಮೊಬೈಲ್ ಸಂಪರ್ಕಗಳಿಗೆ ಸಂಬಂಧಿಸಿದ ವಿವರಗಳನ್ನು ಪರಿಶೀಲಿಸಲು ಈ ಸೇವೆಯನ್ನು ಪ್ರವೇಶಿಸಿದ್ದಾರೆ.

ನಾಗರಿಕರಿಗಾಗಿ ಸೇವೆಗಳು

- ಕಳೆದುಹೋದ ಅಥವಾ ಕಳವಾದ ಫೋನ್: ಎಲ್ಲಾ ನೆಟ್ ವರ್ಕ್ ಗಳಲ್ಲಿ ಫೋನ್ ಗಳನ್ನು ನಿರ್ಬಂಧಿಸಬಹುದು ಮತ್ತು ಟ್ರ್ಯಾಕ್ ಮಾಡಬಹುದು. ಇಲ್ಲಿಯವರೆಗೆ, 1.4 ದಶಲಕ್ಷಕ್ಕೂ ಹೆಚ್ಚು ಹ್ಯಾಂಡ್ ಸೆಟ್ ಗಳನ್ನು ವಶಪಡಿಸಿಕೊಳ್ಳಲಾಗಿದೆ.
- ನಿಮ್ಮ ಹೆಸರಿನಲ್ಲಿ ಮೊಬೈಲ್ ಸಂಪರ್ಕಗಳು: ನಾಗರಿಕರು ತಮ್ಮ ಹೆಸರಿನಲ್ಲಿ ನೀಡಲಾದ ಮೊಬೈಲ್ ಸಂಪರ್ಕಗಳ ಸಂಖ್ಯೆಯನ್ನು ವೀಕ್ಷಿಸಬಹುದು ಮತ್ತು ಯಾವುದೇ ಅನಧಿಕೃತ ಸಂಪರ್ಕಗಳನ್ನು ವರದಿ ಮಾಡಬಹುದು.
- ಅನುಮಾನಾಸ್ಪದ ಕರೆಗಳು ಅಥವಾ ಸಂದೇಶಗಳು: ಮೋಸದ ಕರೆಗಳು, ಎಸ್ಎಂಎಸ್ ಮತ್ತು ವಾಟ್ಸಾಪ್ ಸಂದೇಶಗಳನ್ನು ವರದಿ ಮಾಡಲು 'ಚಕ್ಷು' ಸೌಲಭ್ಯವು ಬಳಕೆದಾರರಿಗೆ ಅನುಮತಿಸುತ್ತದೆ.





ಸಚಿವ ಸಂಪುಟದ ನಿರ್ಣಯಗಳು

ಎಸ್‌ಎಂಇಗಳಿಗೆ 10,000 ಕೋಟಿ ರೂ. ನಿಧಿ

ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮದ ವಿಸ್ತರಣೆ

ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳಲ್ಲಿ ನೇರ ಈಕ್ವಿಟಿ ಹೂಡಿಕೆಗಾಗಿ 'ಎಸ್‌ಎಂಇ ವೃದ್ಧಿ ನಿಧಿ' ಸ್ಥಾಪಿಸುವ ಪ್ರಸ್ತಾಪಕ್ಕೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ, ಇದು ಈ ವಲಯಗಳಿಗೆ ಹೊಸ ಚೈತನ್ಯವನ್ನು ತುಂಬುತ್ತದೆ. ಈ ನಿಧಿಯು ಕೈಗಾರಿಕಾ ವಿಸ್ತರಣೆ, ತಂತ್ರಜ್ಞಾನದ ಅಳವಡಿಕೆ ಮತ್ತು ಜಾಗತಿಕ ಮಾರುಕಟ್ಟೆಗಳಿಗೆ ಸುಧಾರಿತ ಪ್ರವೇಶವನ್ನು ಸುಗಮಗೊಳಿಸುತ್ತದೆ, ಜೊತೆಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ. ಇದಲ್ಲದೆ, ಮುಂದಿನ ಐದು ವರ್ಷಗಳವರೆಗೆ ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮದ ಮುಂದುವರಿಕೆ ಮತ್ತು ಸಮಗ್ರ ಸಾರಿಗೆ ಮತ್ತು ಸಾಗಣೆ ಪ್ರಾಧಿಕಾರದ ರಚನೆ ಸೇರಿದಂತೆ ಹಲವಾರು ಇತರ ಪ್ರಸ್ತಾಪಗಳಿಗೆ ಅನುಮೋದನೆ ನೀಡಲಾಗಿದೆ.

ನಿರ್ಣಯ: ಸಣ್ಣ ಮತ್ತು ಮಧ್ಯಮ ಉದ್ಯಮಗಳಲ್ಲಿ (ಎಸ್‌ಎಂಇ) ನೇರ ಈಕ್ವಿಟಿ ಹೂಡಿಕೆಗೆ ಅನುಕೂಲವಾಗುವಂತೆ ಎಸ್‌ಎಂಇ ವೃದ್ಧಿ ನಿಧಿ ಸ್ಥಾಪನೆಗೆ 10,000 ಕೋಟಿ ರೂ.

ಪರಿಣಾಮ: ಈ ಉಪಕ್ರಮವು ಉದ್ಯಮಿಗಳನ್ನು ಸಬಲೀಕರಣಗೊಳಿಸುವ ಮತ್ತು ಹೊಸ ಪೀಳಿಗೆಯ ಸ್ಪರ್ಧಾತ್ಮಕ ಉದ್ಯಮಗಳನ್ನು ಬೆಳೆಸುವ ಸರ್ಕಾರದ ಬದ್ಧತೆಯನ್ನು ಪುನರುಚ್ಚರಿಸುತ್ತದೆ. ಹೆಚ್ಚಿನ ಬೆಳವಣಿಗೆಯ ಎಸ್‌ಎಂಇಗಳಲ್ಲಿ ಹೂಡಿಕೆಯನ್ನು ಉತ್ತೇಜಿಸುವ ಮೂಲಕ, ಈ ನಿಧಿಯು ಪ್ರಮುಖ ಉದ್ಯಮಿಗಳನ್ನು ಬೆಳೆಸಲು, ನಾವೀನ್ಯತೆ-ಚಾಲಿತ ಕೈಗಾರಿಕೀಕರಣವನ್ನು ವೇಗಗೊಳಿಸಲು ಮತ್ತು ದೇಶಾದ್ಯಂತ ಗುಣಮಟ್ಟದ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ. ಈ ಉಪಕ್ರಮವು 2047 ರ ವೇಳೆಗೆ 'ವಿಕಸಿತ ಭಾರತ'ದ ಗುರಿಯನ್ನು ಮುನ್ನಡೆಸುವಲ್ಲಿ ಪ್ರಮುಖ ಆಧಾರಸ್ತಂಭವಾಗಿ ಕಾರ್ಯನಿರ್ವಹಿಸುತ್ತದೆ.

- ಕೈಗಾರಿಕಾ ಕ್ಲಸ್ಟರ್ ಗಳಲ್ಲಿನ ಹೂಡಿಕೆಗಳು - ಶ್ರೇಣಿ -II ಮತ್ತು ಶ್ರೇಣಿ - III ನಗರಗಳು - ಪ್ರಾದೇಶಿಕ ಕೈಗಾರಿಕಾ ಅಭಿವೃದ್ಧಿಯನ್ನು ಉತ್ತೇಜಿಸುತ್ತವೆ.
- ಸ್ಥಳೀಯ ಪೂರೈಕೆ ಸರಪಳಿಗಳನ್ನು ಬಲಪಡಿಸಿ, ಉತ್ತಮ ಗುಣಮಟ್ಟದ ಉದ್ಯೋಗಗಳನ್ನು ಸೃಷ್ಟಿಸಲಾಗುವುದು.

ನಿರ್ಣಯ: ಸಾರಿಗೆ ಮತ್ತು ಸಾಗಣೆಯ ವಿಶಾಲ ವಲಯಗಳಲ್ಲಿ ಸಂಶೋಧನೆ, ಯೋಜನೆ, ಮೌಲ್ಯಮಾಪನ, ಮೇಲ್ವಿಚಾರಣೆ ಮತ್ತು ಪರಿಣಾಮದ ನಿರ್ಧರಣೆಯನ್ನು ಬಲಪಡಿಸಲು ಸಮಗ್ರ ಸಾರಿಗೆ ಮತ್ತು ಸಾಗಣೆ ಪ್ರಾಧಿಕಾರ (ಐಟಿಎಲ್‌ಎ) ಹೆಸರಿನ ವಿಶೇಷ ಉದ್ದೇಶದ ಯೋಜನೆ (ಎಸ್ ಪಿ ವಿ) ಸ್ಥಾಪನೆಗೆ ಅನುಮೋದನೆ.

ಪರಿಣಾಮ: ವಿಭಜಿತ ಸ್ವರೂಪದ ಯೋಜನೆಗಳು ಮತ್ತು ವಿವಿಧ ಸಾರಿಗೆ ಸಂಬಂಧಿತ ಸಚಿವಾಲಯಗಳು ಮತ್ತು ಏಜೆನ್ಸಿಗಳಲ್ಲಿ ಅನುಷ್ಠಾನದಿಂದ ಉದ್ಭವಿಸುವ ದೀರ್ಘಕಾಲೀನ ಸವಾಲುಗಳನ್ನು ಎದುರಿಸುವ ಗುರಿಯನ್ನು ಇದು ಹೊಂದಿದೆ.

- ಐಟಿಎಲ್‌ಎ ಮೂಲಕ ಉತ್ತಮ ಸಮನ್ವಯ ಮತ್ತು ಬಹು-ಮಾದರಿ ಏಕೀಕರಣವನ್ನು ಉತ್ತೇಜಿಸುವುದರಿಂದ ಭಾರತದಲ್ಲಿ ಸಾರಿಗೆ ಮೂಲಸೌಕರ್ಯ ಅಭಿವೃದ್ಧಿಯ ದಕ್ಷತೆ, ಸುಸ್ಥಿರತೆ ಮತ್ತು ಪರಿಣಾಮಕಾರಿತ್ವವನ್ನು ಹೆಚ್ಚಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.
- ಐಟಿಎಲ್‌ಎ ಸ್ಥಾಪನೆಯು ಭಾರತದ ವಿಷನ್ 2047 ಅನ್ನು ಸಾಕಾರಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.
- ಇದು ಬಹು-ಮಾದರಿ ಸಂಪರ್ಕವನ್ನು ಬಲಪಡಿಸಲು, ಮೂಲಸೌಕರ್ಯ ದಕ್ಷತೆಯನ್ನು ಸುಧಾರಿಸಲು, ಸಾಗಣೆ ವೆಚ್ಚವನ್ನು ತಗ್ಗಿಸಲು ಮತ್ತು ಭಾರತದ ಜಾಗತಿಕ ಸಾಗಣೆ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.
- ಐಟಿಎಲ್‌ಎ ಸಂಶೋಧನೆ, ಯೋಜನೆ, ಬೃಹತ್ ದತ್ತಾಂಶ ಏಕೀಕರಣ ಮತ್ತು ಯೋಜನಾ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕಾಗಿ ಸಾಂಸ್ಥಿಕ ಸಾಮರ್ಥ್ಯವನ್ನು ನಿರ್ಮಿಸುತ್ತದೆ.
- ಇದು ಸಾಮರ್ಥ್ಯ ವೃದ್ಧಿಗೆ ಮತ್ತು ಅಂತಾರಾಷ್ಟ್ರೀಯ ಉತ್ತಮ ರೂಢಿಗಳನ್ನು ಅಳವಡಿಸಿಕೊಳ್ಳಲು ಅನುಕೂಲ ಮಾಡಿಕೊಡುತ್ತದೆ.

ಸಂಪುಟದ ನಿರ್ಣಯಗಳ ಮಾಧ್ಯಮಗೋಷ್ಠಿಯನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.



निर्णय: राष्ट्रीय सामाजिक नेरवु कार्यक्रमवन्नु 2026-27 रिंद 2030-31 रवरेगे ऐदु वर्षगळ अवधिगे मुंदुवरिसलु अनुमोदने नीडलागिदे.

परिणाम: पिंचणि अर्हतेगागि कनिष्ठ अंगवैकल्यद मितियन्नु शे.80 रिंद शे.40 क्के इळिसलागिदे, इदु हेच्चिन विकलचेतनरु योजनेय प्रयोजनगळन्नु पडेयलु अनुवु माडिकोडुत्तदे.

- विशेषचेतनरु ईग हुट्टिनिंदलेय पिंचणि योजनेय व्याप्तिगे बरुत्तारे.
- ई बदलावणेगळु हेच्चिन संख्येय विशेषचेतनरिगे सामाजिक सुरक्षा प्रयोजनगळन्नु विस्तरिसुत्तवे मत्तु पिंचणि योजनेय व्याप्तियन्नु विस्तरिसुत्तवे.
- ई योजने मत्तु अदर उप योजनेगळ मरुनामकरण माडलागुवुदु.
- ई उद्देशक्कागि ऒट्टु 53,428 कोटि रू.गळ आयव्यय मीसलिडलागिदे.
- 36 राज्यगळु/केंद्राडळित प्रदेशगळल्लि ऒट्टु 3.20 कोटि फलानुभविगळु इदर प्रयोजन पडेयलिद्दारे.
- अंगवैकल्य-संबंधित बेंबलक्कागि ऒदगिसलाद नेरवु यावागलू इतर वर्गगळिगे इदे रीतिय योजनेगळ अडियल्लि नीडलागुव नेरविगिंत शे.25 रष्टु हेच्चागिरबेकु एंबुदन्नु कड्डायगॊळिसलागिदे.

संपुटद निर्णयगळ माध्यमगोष्ठियन्नु वीक्षिसलु क्यूआर् कोड् अन्नु स्कॅन् माडि.

निर्णय: सुमारु 11.40 लक्ष रैल्वे उद्योगिगळिगे 78 दिनगळ उत्पादकते आधारित बोनस् (पि एल् बि) नीडलु अनुमोदने

परिणाम: इदु हगलिरुळु श्रमिसुव श्रद्धेयुळ्ळ रैल्वे नौकररिगे दीपावळि उडुगॊरेयागिदे. ऒट्टु 2,009.61 कोटि रू.गळ बोनस् मॊत्तवन्नु मंजूरु माडलागिदे.

प्रति वर्ष दुर्गा पूजे/दसरा रजादिनगळिगे मॊदलु अर्ह रैल्वे उद्योगिगळिगे 'पि एल् बि' पावतिसलागुत्तदे.

निर्णय: ऐडिबिऐ बॅन्क् लिमिटेड् न व्यूहात्मक पुनारचनेगे आर्थिक व्यवहारगळ कुरितद संपुट समिति तन्न अनुमोदने नीडिदे.

परिणाम: बॅन्किन ऒट्टु 60.72% ईक्विटि पालन्नु कार्यतंत्रद ख़रीदिदारररिगे मारaट माडलागुत्तदे. इदु भारत सर्कारद 30.48% पालन्नु मत्तु भारतीय जीव विमा निगम (एल्ऐसि) हॊंदिरुव 30.24% पालन्नू ऒळगॊंडिदे.

- ऐडिबिऐ बॅन्क् लिमिटेड् नल्लि भारत सर्कार शे.15रष्टु पालन्नु उळिसिकॊळ्ळलिदे मत्तु एल्ऐसि शे.19रष्टु पालन्नु उळिसिकॊळ्ळलिदे.







'ನಾವು ಅದನ್ನು ಮಾಡುತ್ತೇವೆ'

ನವ ಭಾರತದ ಸಾಮೂಹಿಕ ಶಕ್ತಿಯ ಸಂಕೇತ

ಗುಜರಾತ್ ಮುಖ್ಯಮಂತ್ರಿಯಿಂದ ಭಾರತದ ಪ್ರಧಾನಮಂತ್ರಿಯವರೆಗೆ, ನರೇಂದ್ರ ಮೋದಿಯವರ 25 ವರ್ಷಗಳ ಪಯಣವು ನೀತಿ ನಿರ್ಧಾರಗಳು, ಸಾರ್ವಜನಿಕ ಕಲ್ಯಾಣ ಉಪಕ್ರಮಗಳು, ರಾಷ್ಟ್ರೀಯ ಅಭಿಯಾನಗಳು ಮತ್ತು ಸುಧಾರಣೆಗಳನ್ನು ಒಳಗೊಂಡ ಮಹತ್ವದ ಮೈಲಿಗಲ್ಲುಗಳಿಂದ ಗುರುತಿಸಲ್ಪಟ್ಟಿದೆ. ಅವರ ದೃಷ್ಟಿಕೋನವು ನೀತಿ ನಿರೂಪಣೆಯಿಂದ ಸರತಿಸಾಲಿನಲ್ಲಿ ನಿಂತಿರುವ ಕಟ್ಟಕಡೆಯ ವ್ಯಕ್ತಿಯನ್ನು ತಲುಪುವವರೆಗೆ, ಸ್ವಾವಲಂಬನೆಯಿಂದ ತಂತ್ರಜ್ಞಾನಕ್ಕೆ ಮತ್ತು ರಾಷ್ಟ್ರೀಯ ಭದ್ರತೆಯಿಂದ ಸಾಂಸ್ಥಿಕ ಸುಧಾರಣೆಗಳವರೆಗೆ ಪರಿವರ್ತನೆಯನ್ನು ಉತ್ತೇಜಿಸಿದೆ.

ಕೇಂದ್ರ ಸಚಿವ ಸಂಪುಟವು ಕೃತಜ್ಞತೆಯನ್ನು ವ್ಯಕ್ತಪಡಿಸಲು, ಅಕ್ಟೋಬರ್ 6 ರಂದು ಪ್ರಧಾನಿಯವರ 25 ವರ್ಷಗಳ ನಿರಂತರ, ಅಖಂಡ ನಾಯಕತ್ವವನ್ನು ಅಭಿನಂದಿಸುವ ನಿರ್ಣಯವನ್ನು ಅಂಗೀಕರಿಸಿತು. ತರುವಾಯ, 25 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ಅಂಗವಾಗಿ ಅಕ್ಟೋಬರ್ 7 ರಂದು ನಡೆದ ಕಾರ್ಯಕ್ರಮದಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ನವ ಭಾರತದ ಸಾಮೂಹಿಕ ಶಕ್ತಿಯ ಸಂಕೇತವಾಗಿ "ನಾವು ಅದನ್ನು ಮಾಡುತ್ತೇವೆ" ಎಂಬ ಘೋಷಣೆಯನ್ನು ಮೊಳಗಿಸಿದರು.

ಇದು 25 ವರ್ಷಗಳ ಸಾರ್ವಜನಿಕ ಸೇವೆಯ ಪಯಣವಾಗಿದೆ - ಜನರ ನಡುವೆ ಮತ್ತು ದೇಶಕ್ಕಾಗಿ ಬದುಕಿದ್ದೇನೆ - ರಾಷ್ಟ್ರ ನಿರ್ಮಾಣಕ್ಕೆ ಸಂಕಲ್ಪ ಮತ್ತು ಸಮರ್ಪಣೆಯಿಂದ ಪ್ರೇರಿತವಾಗಿದೆ. ಈ 25 ವರ್ಷಗಳ ಸೇವೆಯಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿರುವುದು ಮಾತ್ರವಲ್ಲದೆ ಹೊಸ ಮನಃಸ್ಥಿತಿಗೆ ಅಡಿಪಾಯ ಹಾಕಿದ್ದಾರೆ. ಅಕ್ಟೋಬರ್ 7 ರಂದು, ಅವರು ತಮ್ಮ 25 ವರ್ಷಗಳ ಪ್ರಯಾಣಕ್ಕೆ ನಾಗರಿಕರ ನಂಬಿಕೆಯ ಸಾಮೂಹಿಕ ಬಂಡವಾಳ ಮತ್ತು ಪಕ್ಷದ ಕಾರ್ಯಕರ್ತರ ಕಠಿಣ ಪರಿಶ್ರಮಕ್ಕೆ ಕಾರಣ ಎಂದು ಹೇಳಿದರು. ಜನರ ಸಾಮೂಹಿಕ ಶಕ್ತಿಯನ್ನು ತಮ್ಮ ದೊಡ್ಡ ಶಕ್ತಿ ಎಂದು ಬಣ್ಣಿಸಿದ ಅವರು, ವಿಕಸಿತ ಭಾರತದ ಸಂಕಲ್ಪವನ್ನು ಹೊಸ ಶಕ್ತಿಯೊಂದಿಗೆ ಮುನ್ನಡೆಸುವಂತೆ ಕರೆ ನೀಡಿದರು.

ಶ್ರೀ ವಿನಾಯಕ ದೇವಾಲಯದಲ್ಲಿ ಪ್ರಾರ್ಥನೆ

ಅಕ್ಟೋಬರ್ 7 ರಂದು ಬೆಳಗ್ಗೆ ಪ್ರಧಾನಿ ಮೋದಿ ಶ್ರೀ ವಿನಾಯಕ ದೇವಾಲಯದಲ್ಲಿ ಪ್ರಾರ್ಥನೆ ಸಲ್ಲಿಸಿದರು ಮತ್ತು ದೇಶದ 1.4 ಶತಕೋಟಿ ನಾಗರಿಕರ ಯೋಗಕ್ಷೇಮಕ್ಕಾಗಿ ಪ್ರಾರ್ಥಿಸಿದರು. ಇನ್ನೂ ಹೆಚ್ಚಿನ ಹುರುಪಿನಿಂದ ರಾಷ್ಟ್ರ ಸೇವೆ ಮಾಡುವ ಶಕ್ತಿಯನ್ನು ಅವರು ಕೋರಿದರು. ತಮ್ಮ ಪ್ರಸ್ತುತ ಸ್ಥಾನ ಮತ್ತು ಜವಾಬ್ದಾರಿಗಳು ಹೆಚ್ಚಾಗಿ ಜನರ ನಂಬಿಕೆ ಮತ್ತು ಕಠಿಣ ಪರಿಶ್ರಮದ ಫಲವಾಗಿದೆ ಎಂದು ಅವರು ಒಪ್ಪಿಕೊಂಡರು.



ಈಗಲೂ ತಮ್ಮನ್ನು ವಿದ್ಯಾರ್ಥಿ ಎಂದು ಪರಿಗಣಿಸುವ ಪ್ರಧಾನಿ ಮೋದಿ

ತಮ್ಮ ವಿದ್ಯಾರ್ಥಿ ದಿನಗಳನ್ನು ಪ್ರತಿಬಿಂಬಿಸಿದ ಪ್ರಧಾನಮಂತ್ರಿಯವರು, ಕಲಿಕೆಯ ಉತ್ಸಾಹವು ಯಾವಾಗಲೂ ತಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ ಮತ್ತು ನಾನು ಇನ್ನೂ ತಮ್ಮನ್ನು ವಿದ್ಯಾರ್ಥಿ ಎಂದು ಪರಿಗಣಿಸುತ್ತೇನೆ ಎಂದು ಹೇಳಿದರು. ಹಿಂತಿರುಗಿ ನೋಡುವುದು ತಮ್ಮಲ್ಲಿ ಕೃತಜ್ಞತೆಯ ಭಾವನೆಯನ್ನು ತುಂಬುತ್ತದೆ ಎಂದು ಅವರು ವ್ಯಕ್ತಪಡಿಸಿದರು. ತಮಗೆ ಯಶಸ್ವಿಯಾಗಲು ಸಹಾಯ ಮಾಡಿದವರು ನಮ್ರತೆಯನ್ನು ಕಲಿಸಿದರು, ಆದರೆ ಎಡವಿ ಬೀಳುವಂತೆ ಮಾಡಿದವರು ಮತ್ತೆ ಹೇಗೆ ಮೇಲೇಳಬೇಕೆಂದು ಕಲಿಸಿದರು ಎಂದು ಅವರು ಹೇಳಿದರು. ಪ್ರತಿ ಪಕ್ಷಗಳು ಪ್ರಜಾಪ್ರಭುತ್ವದ ಶಕ್ತಿಯನ್ನು ಕಲಿಸಿದವು ಮತ್ತು ಪ್ರತಿ ಬಿಕ್ಕಟ್ಟು ತಾಳ್ಮೆಯನ್ನು ಪರೀಕ್ಷಿಸಿತು ಎಂದರು.

ಕನಸುಗಳು ದೊಡ್ಡದಾಗಿರಬೇಕು ಮತ್ತು ಉತ್ಸಾಹ ಹೆಚ್ಚಿರಬೇಕು

ಹಳ್ಳಿಗಳಲ್ಲಿನ ಜನರ ಜೀವನ ಮತ್ತು ಬಡವರ ಅನುಭವಗಳು ಸಂಪನ್ಮೂಲಗಳು ಸೀಮಿತವಾಗಿದ್ದರೂ, ಒಬ್ಬರ ಕನಸುಗಳು ಭವ್ಯವಾಗಿರಬೇಕು ಮತ್ತು ಒಬ್ಬರ ಚೈತನ್ಯವು ಅದಮ್ಯ ಚೈತನ್ಯವಾಗಿರಬೇಕು ಎಂದು ಕಲಿಸಿದೆ ಎಂದು ಪ್ರಧಾನಿ ಹೇಳಿದರು. ದೇಶದ ಸಾಂಸ್ಕೃತಿಕ ಪರಂಪರೆ ಮತ್ತು ಸ್ವಯಂಸೇವಕರ ಕೊಡುಗೆಗಳಿಗೆ ಗೌರವ ಸಲ್ಲಿಸಿದ ಅವರು, ಭಾರತ ಮಾತೆಯ ಸೇವೆ ಮಾಡುವ ಸಂಕಲ್ಪದಿಂದ ಪ್ರೇರಿತವಾದ ಲಕ್ಷಾಂತರ ಸ್ವಯಂಸೇವಕರು ಮತ್ತು ಕಾರ್ಯಕರ್ತರ ಬೆಂಬಲವು ತಮ್ಮ ಪ್ರಯಾಣದುದ್ದಕ್ಕೂ ದೊಡ್ಡ ಶಕ್ತಿಯ ಮೂಲವಾಗಿದೆ ಎಂದು ಹೇಳಿದರು.

'ನಾವು ಅದನ್ನು ಮಾಡುತ್ತೇವೆ'

ಪ್ರಧಾನಮಂತ್ರಿಯವರು ತಮ್ಮ ಭಾಷಣದಲ್ಲಿ, ನವ ಭಾರತದ ಸಾಮೂಹಿಕ ಶಕ್ತಿಯ ಸಂಕೇತವಾಗಿ 'ನಾವು ಅದನ್ನು ಮಾಡುತ್ತೇವೆ' ಎಂಬ ಘೋಷಣೆಯನ್ನು ಮೊಳಗಿಸಿದರು. ಅಭಿವೃದ್ಧಿ ಹೊಂದಿದ ಭಾರತದ ಗುರಿ ಕೇವಲ ಸ್ಮರಣೆಯ ವಿಷಯವಲ್ಲ, ಆದರೆ ನಮ್ಮ ನಿರ್ಣಯಗಳಿಗೆ ಹೊಸ ಶಕ್ತಿಯನ್ನು ತುಂಬುವ ಅವಕಾಶವಾಗಿದೆ ಎಂದು ಅವರು

> **ನನಗೆ ಗೆಲ್ಲಲು ಸಹಾಯ ಮಾಡಿದವರು... ನನಗೆ ನಮ್ರತೆಯನ್ನು ಕಲಿಸಿದರು. ನನ್ನನ್ನು ಬೀಳುವಂತೆ ಮಾಡಿದವರು... ಮತ್ತೆ ಏಳಲು ಕಲಿಸಿದರು. ನನ್ನ ಪಕ್ಕದಲ್ಲಿ ನಿಂತವರು... ನನಗೆ ನಂಬಿಕೆಯ ಶಕ್ತಿಯನ್ನು ತೋರಿಸಿದರು. ನನ್ನನ್ನು ವಿರೋಧಿಸಿದವರು.. ಪ್ರಜಾಪ್ರಭುತ್ವದ ಶಕ್ತಿಯನ್ನು ನನಗೆ ಕಲಿಸಿದರು.**
>
> *- ನರೇಂದ್ರ ಮೋದಿ, ಪ್ರಧಾನಮಂತ್ರಿ*

ಹೇಳಿದರು. ಸಾರ್ವಜನಿಕ ಜೀವನದಲ್ಲಿ ತಮ್ಮ 25 ವರ್ಷಗಳ ಪಯಣವನ್ನು ವೈಯಕ್ತಿಕ ವೈಭವೀಕರಣದ ಸಾಧನವಾಗಿ ತಾವು ನೋಡುವುದಿಲ್ಲ ಎಂದು ಪ್ರಧಾನಿ ಹೇಳಿದರು. ಅವರ ಪಾಲಿಗೆ ಜೀವನದ ಉದ್ದೇಶವು ಒಂದು ಸ್ಥಾನ ಅಥವಾ ರಾಜಕೀಯ ಮಹತ್ವಾಕಾಂಕ್ಷೆಯಲ್ಲ, ಆದರೆ ಒಂದು ಧ್ಯೇಯವಾಗಿದೆ.

ಜನಶಕ್ತಿಯಿಂದ ಪ್ರೇರಿತವಾದ ಅಭಿವೃದ್ಧಿಯಲ್ಲಿ ಗುಜರಾತ್ ಹೊಸ ಎತ್ತರವನ್ನು ಏರಿದೆ

ಗುಜರಾತ್ ಮುಖ್ಯಮಂತ್ರಿಯಾಗಿದ್ದ ತಮ್ಮ ಅನುಭವಗಳನ್ನು ಸ್ಮರಿಸಿದ ಪ್ರಧಾನಮಂತ್ರಿಯವರು, ಆ ಸಮಯದಲ್ಲಿ ವ್ಯಾಪಕ



25 ವರ್ಷಗಳ ನಿರಂತರ, ಅಖಂಡ ನಾಯಕತ್ವಕ್ಕಾಗಿ ಪ್ರಧಾನಮಂತ್ರಿಯವರಿಗೆ ಅಭಿನಂದನೆ ಸಲ್ಲಿಸುವ ನಿರ್ಣಯಕ್ಕೆ ಸಂಪುಟದ ಅಂಗೀಕಾರ

ಅಕ್ಟೋಬರ್ 6 ರಂದು, ಕೇಂದ್ರ ಸಚಿವ ಸಂಪುಟವು ಸರ್ಕಾರದ ಮುಖ್ಯಸ್ಥರಾಗಿ 25 ವರ್ಷಗಳ ನಿರಂತರ ನಾಯಕತ್ವವನ್ನು ಪೂರ್ಣಗೊಳಿಸಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಭಿನಂದಿಸುವ ನಿರ್ಣಯವನ್ನು ಅಂಗೀಕರಿಸಿತು. ಇದು ಔಪಚಾರಿಕ ಗೌರವಕ್ಕಿಂತ ಹೆಚ್ಚಿನದು; ಇದು 'ರಾಷ್ಟ್ರ ಮೊದಲು' ಮತ್ತು 'ನಾಗರಿಕ ಮೊದಲು' ತತ್ವಗಳಿಂದ ಮಾರ್ಗದರ್ಶಿತವಾದ ಪ್ರಧಾನಿ ಮೋದಿಯವರ ಅಸಾಧಾರಣ ಪಯಣದ ಆಚರಣೆಯಾಗಿದೆ. ಗುಜರಾತ್ ನಲ್ಲಿ ಮೂರು ಅಗಾಧ ಜನಾದೇಶಗಳು ಮತ್ತು ಸತತ ಮೂರು ಲೋಕಸಭಾ ಚುನಾವಣೆಗಳಲ್ಲಿನ ಬೆಂಬಲವು ಪ್ರಧಾನಿ ನರೇಂದ್ರ ಮೋದಿ ಅವರ ಮೇಲೆ ಸಾರ್ವಜನಿಕರು ಇಟ್ಟಿರುವ ನಿರಂತರ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ.

ಈ ಹತ್ತು ಪ್ರಮುಖ ಲಕ್ಷಣಗಳು ಗುಜರಾತ್ ನ ಅವರ ನಾಯಕತ್ವವನ್ನು ಭಾರತದ ಅವರ ನಾಯಕತ್ವದೊಂದಿಗೆ ಸಂಪರ್ಕಿಸುವ ಅವಿಚ್ಛಿನ್ನ ಎಳೆಯನ್ನು ಸೆರೆಹಿಡಿಯುತ್ತವೆ. ನಿರ್ಣಯದ ಪ್ರಮುಖ ಆಯ್ದ ಭಾಗಗಳನ್ನು ಓದಿ...

1. ಗುಜರಾತ್ ನಿಂದ ಭಾರತದವರೆಗೆ: ಅಭಿವೃದ್ಧಿಯ ದೃಷ್ಟಿಕೋನ ಬೆಳೆಯುತ್ತದೆ

ಪ್ರಧಾನಿ ಮೋದಿ ಅವರು ಗುಜರಾತ್ ನ ಯಶಸ್ವಿ ಉಪಕ್ರಮಗಳನ್ನು ರಾಷ್ಟ್ರೀಯ ವೇದಿಕೆಗೆ ಹೇಗೆ ಕೊಂಡೊಯ್ದರು ಎಂಬುದನ್ನು ನಿರ್ಣಯವು ಗುರುತಿಸುತ್ತದೆ. ನಾಗರಿಕರ ಕುಂದುಕೊರತೆಗಳನ್ನು ವೈಯಕ್ತಿಕವಾಗಿ ಆಲಿಸಿದ ಸ್ವಾಗತ್ 2010 ರಲ್ಲಿ ವಿಶ್ವಸಂಸ್ಥೆಯ ಸಾರ್ವಜನಿಕ ಸೇವಾ ಪ್ರಶಸ್ತಿಯನ್ನು ಪಡೆದಿತು. ಇದು ನಂತರ ಪ್ರಗತಿಗೆ ಸ್ಫೂರ್ತಿ ನೀಡಿತು, ಸ್ಥಗಿತಗೊಂಡ ಯೋಜನೆಗಳನ್ನು ಪರಿಶೀಲಿಸಲು, ಅಡೆತಡೆಗಳನ್ನು ಪರಿಹರಿಸಲು ಮತ್ತು ಪೂರ್ಣಗೊಳಿಸುವಿಕೆಯನ್ನು ತ್ವರಿತಗೊಳಿಸಲು ಸರ್ಕಾರಗಳನ್ನು ಒಟ್ಟುಗೂಡಿಸಿತು. ಜ್ಯೋತಿಗ್ರಾಮದ ಪ್ರತ್ಯೇಕ ಕೃಷಿ ವಿದ್ಯುತ್ ಫೀಡರ್ ಗಳು ಅದೇ ರೀತಿ ರಾಷ್ಟ್ರೀಯ ವಿಧಾನವಾಯಿತು, ಗುಜರಾತ್ ನ ಅನುಭವವನ್ನು ಭಾರತದಾದ್ಯಂತ ವಿಸ್ತರಿಸಿತು.

2. ಬಡವರ ಮೇಲಿನ ಸಹಾನುಭೂತಿ ಘನತೆಯನ್ನು ಹೆಚ್ಚಿಸುತ್ತದೆ

ಬಡತನದ ಬಗ್ಗೆ ಪ್ರಧಾನಿ ಮೋದಿಯವರ ಸಂವೇದನಾಶೀಲತೆಯು ತಮ್ಮ ತಾಯಿ ದೈನಂದಿನ ಕಷ್ಟಗಳೊಂದಿಗೆ ಹೋರಾಡುತ್ತಿರುವುದನ್ನು ನೋಡುವುದರಿಂದ ಮತ್ತು ಅವರ ಪ್ರಯಾಣದ ಸಮಯದಲ್ಲಿ ಅಭಾವವನ್ನು ಎದುರಿಸುವುದನ್ನು ನೋಡುವುದರಿಂದ ಬೆಳೆಯಿತು. ನಿರ್ಣಯವು ಈ ಅನುಭವಗಳನ್ನು ಮನೆಗಳು, ನೀರು, ಬ್ಯಾಂಕಿಂಗ್ ಮತ್ತು ಆರೋಗ್ಯ ರಕ್ಷಣೆಯನ್ನು ತಲುಪಿಸುವ ಕಾರ್ಯಕ್ರಮಗಳೊಂದಿಗೆ ಸಂಪರ್ಕಿಸುತ್ತದೆ. ಸುಮಾರು 60 ಕೋಟಿ ಜನ್ ಧನ್ ಖಾತೆಗಳು, 4 ಕೋಟಿಗೂ ಹೆಚ್ಚು ಮನೆಗಳು ಮತ್ತು 25 ಕೋಟಿ ಜನರು ಬಡತನದಿಂದ ಹೊರಬರುವುದು ವೈಯಕ್ತಿಕ ತಿಳಿವಳಿಕೆಯು ಹೇಗೆ ಸಾರ್ವಜನಿಕ ಉಪಕ್ರಮವಾಯಿತು ಎಂಬುದನ್ನು ತೋರಿಸುತ್ತದೆ, ಇದು ಕುಟುಂಬಗಳಿಗೆ ಘನತೆಯನ್ನು ತರುತ್ತದೆ.

ಆಡಳಿತಾತ್ಮಕ ಅನುಭವದ ಕೊರತೆಯಿದ್ದರೂ, ಅವರು ಜನರ ಮೇಲೆ ನಂಬಿಕೆ ಹೊಂದಿದ್ದರು ಎಂದು ಹೇಳಿದರು. ನಿರ್ಧಾರಗಳನ್ನು ತೆಗೆದುಕೊಳ್ಳುವುದು, ನೀತಿಗಳನ್ನು ರೂಪಿಸುವುದು ಮತ್ತು ಸಾರ್ವಜನಿಕರ ಸಹಯೋಗದೊಂದಿಗೆ ಅವುಗಳನ್ನು ಕಾರ್ಯಗತಗೊಳಿಸುವ ರೂಢಿನ್ನು ಅವರು ತಮ್ಮ ಕಾರ್ಯಶೈಲಿಯ ಮೂಲಾಧಾರವನ್ನಾಗಿ ಮಾಡಿಕೊಂಡರು. ಈ 'ಜನಶಕ್ತಿ'ಯ ಮೂಲಕವೇ ಗುಜರಾತ್ ಅಭಿವೃದ್ಧಿಯ ಹೊಸ ಎತ್ತರವನ್ನು ಸಾಧಿಸಿತು. 2014 ರಲ್ಲಿ ರಾಷ್ಟ್ರದ 'ಪ್ರಧಾನ ಸೇವಕ'ರಾಗಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿತು ಎಂದು ಪ್ರಧಾನಿ ಒತ್ತಿ ಹೇಳಿದರು. ಆ ಸಮಯದಲ್ಲಿ, ದೇಶವು

3. ಸಬಲೀಕರಣವು ಸಮಾಜದಾದ್ಯಂತ ಬಾಗಿಲು ತೆರೆಯುತ್ತದೆ

ಜನರು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಸಹಾಯ ಮಾಡುವ ಪ್ರಧಾನಿ ಮೋದಿಯವರ ದೃಢ ನಿಶ್ಚಯವು ಸಂಕಲ್ಪದ ಮೂಲಕ ಸಾಗುತ್ತದೆ. ಸರಿಸುಮಾರು 3.5 ಕೋಟಿ ಮಹಿಳೆಯರು ಲಕ್ಷಾಧಿಪತಿ ದೀದಿಗಳಾದರೆ, ನಾರಿ ಶಕ್ತಿ ವಂದನ್ ಅಧಿನಿಯಮ ಮಹಿಳಾ ಮೀಸಲಾತಿಯನ್ನು ಒದಗಿಸಿತು. ಸ್ಟಾರ್ಟ್‌ಅಪ್ ಗಳು, ಕೌಶಲ್ಯಗಳು ಮತ್ತು ಶಿಕ್ಷಣ ಸುಧಾರಣೆಗಳು ಯುವಕರ ಅವಕಾಶಗಳನ್ನು ವಿಸ್ತರಿಸಿದವು. ಪಿಎಂ-ಕಿಸಾನ್ ವರ್ಗಾವಣೆಗಳು 4 ಲಕ್ಷ ಕೋಟಿ ರೂ.ಗಳನ್ನು ಮೀರಿದರೆ, ಪಿಎಂ-ಜನ್ಮನ್ ವಿಶೇಷವಾಗಿ ದುರ್ಬಲ ಬುಡಕಟ್ಟು ಸಮುದಾಯಗಳಿಗೆ ಕೇಂದ್ರೀಕೃತ ಬೆಂಬಲವನ್ನು ತಂದಿತು, ಐತಿಹಾಸಿಕವಾಗಿ ಹಿಂದುಳಿದವರಿಗೆ ಅಭಿವೃದ್ಧಿಯನ್ನು ವಿಸ್ತರಿಸಿತು.

4. ಸುಧಾರಣೆಗೆ ಅಚಲ ಬದ್ಧತೆ

ರಾಜಕೀಯ ಅಪಾಯಗಳ ನಡುವೆಯೂ ಸುಧಾರಣೆಯನ್ನು ಮುಂದುವರಿಸುವ ಪ್ರಧಾನಿ ಮೋದಿಯವರ ಇಚ್ಛೆಗೆ ನಿರ್ಣಯವು ನಿರ್ದಿಷ್ಟ ಒತ್ತು ನೀಡುತ್ತದೆ. ಜಿಎಸ್ಟಿ, ಕಲ್ಯಾಣ ವಿತರಣಾ ಸುಧಾರಣೆಗಳು ಮತ್ತು ವಸಾಹತುಶಾಹಿ ಕಾನೂನುಗಳ ಬದಲಿಯು ದೀರ್ಘಕಾಲದ ಸವಾಲುಗಳನ್ನು ಎದುರಿಸುವ ಅವರ ದೃಢ ನಿಶ್ಚಯವನ್ನು ಪ್ರದರ್ಶಿಸುತ್ತದೆ. ಸ್ವಚ್ಛತೆ, ಡಿಜಿಟಲ್ ಪಾವತಿಗಳು ಮತ್ತು ಸ್ಥಳೀಯ ಉತ್ಪನ್ನಗಳ ಬಗ್ಗೆ ಅವರ ಮನವಿಗಳು ನಾಗರಿಕರನ್ನು ಬದಲಾವಣೆಯತ್ತ ಸೆಳೆದವು. ಸುಧಾರಣೆಯು ಅವರ ನಾಯಕತ್ವದ ನಿರಂತರ ಬದ್ಧತೆಯಾಗಿ ಹೊರಹೊಮ್ಮುತ್ತದೆ, ದೃಢನಿಶ್ಚಯ, ಸಾರ್ವಜನಿಕ ಭಾಗವಹಿಸುವಿಕೆ ಮತ್ತು ರಾಷ್ಟ್ರೀಯ ಉದ್ದೇಶದಿಂದ ಬಲಗೊಂಡಿದೆ.

5. ಸ್ವಾವಲಂಬಿ ಭಾರತದ ಅಡಿಪಾಯ ಹಾಕುವುದು

ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ, ಹೆದ್ದಾರಿ ವಿಸ್ತರಣೆ ಮತ್ತು ರೈಲ್ವೆ ವಿದ್ಯುದ್ದೀಕರಣದ ಜೊತೆಗೆ ಸಾರ್ವಜನಿಕ ಬಂಡವಾಳ ವೆಚ್ಚವು ₹2 ಲಕ್ಷ ಕೋಟಿಯಿಂದ ₹12 ಲಕ್ಷ ಕೋಟಿಗೆ ಏರಿತು. ಎಲೆಕ್ಟ್ರಾನಿಕ್ಸ್ ಉತ್ಪಾದನೆಯು ಸುಮಾರು ₹2 ಲಕ್ಷ ಕೋಟಿಯಿಂದ ₹13 ಲಕ್ಷ ಕೋಟಿಗೆ ಏರಿದೆ. ರಕ್ಷಣಾ ಉತ್ಪಾದನೆ ಮತ್ತು ಸೆಮಿಕಂಡಕ್ಟರ್ ಉತ್ಪಾದನೆಯು ತನ್ನ ಅಗತ್ಯಗಳನ್ನು ಪೂರೈಸುವ ಭಾರತದ ಸಾಮರ್ಥ್ಯವನ್ನು ಬಲಪಡಿಸುವ ಅವರ ದೃಢ ನಿಶ್ಚಯವನ್ನು ಮತ್ತಷ್ಟು ಪ್ರತಿಬಿಂಬಿಸುತ್ತದೆ.

6. ತಂತ್ರಜ್ಞಾನವು ನಾಗರಿಕರಿಗೆ ಸೇವೆ ಸಲ್ಲಿಸುತ್ತದೆ ಮತ್ತು ರಾಷ್ಟ್ರೀಯ ಮಹತ್ವಾಕಾಂಕ್ಷೆಯನ್ನು ವಿಸ್ತರಿಸುತ್ತದೆ

ತಂತ್ರಜ್ಞಾನದ ಮೇಲಿನ ಪ್ರಧಾನಿ ಮೋದಿಯವರ ನಂಬಿಕೆಯು ದೈನಂದಿನ ಸೇವೆಗಳು ಮತ್ತು ವೈಜ್ಞಾನಿಕ ಗಡಿಗಳನ್ನು ವ್ಯಾಪಿಸಿರುವ ಸಾಧನೆಗಳ ಮೂಲಕ ಹೊರಹೊಮ್ಮುತ್ತದೆ. ಜನ್ ಧನ್, ಆಧಾರ್ ಮತ್ತು ಮೊಬೈಲ್ ಸಂಪರ್ಕವು ಕಲ್ಯಾಣ ಕಾರ್ಯಕ್ರಮಗಳ ವಿತರಣೆಯನ್ನು ಸುಧಾರಿಸಿದೆ, ಆದರೆ ಯುಪಿಐ ಪಾವತಿಗಳನ್ನು ಪರಿವರ್ತಿಸಿದೆ. ಭಾರತದ ಸ್ವಂತ ಕೋವಿಡ್ ಲಸಿಕೆಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಚಂದ್ರಯಾನ -3 ಅನ್ನು ಚಂದ್ರನ ದಕ್ಷಿಣ ಧ್ರುವದ ಬಳಿ ಇಳಿಸುವುದು ವೈಜ್ಞಾನಿಕವಾಗಿ ಸಮರ್ಥ, ಸ್ವಾವಲಂಬಿ, ಆತ್ಮನಿರ್ಭರ ಭಾರತದ ಪ್ರಧಾನಿ ಮೋದಿಯವರ ದೃಷ್ಟಿಕೋನವನ್ನು ಪ್ರದರ್ಶಿಸಿತು. ಖಾಸಗಿ ವಲಯದ ಬಾಹ್ಯಾಕಾಶ ಕಾರ್ಯಕ್ರಮದಲ್ಲಿನ ಭಾಗವಹಿಸುವಿಕೆ ಮತ್ತು ಕೃತಕ ಬುದ್ಧಿಮತ್ತೆ, ಕ್ವಾಂಟಮ್ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದಲ್ಲಿನ ಕಾರ್ಯವು ಸಂಕಲ್ಪದೊಂದಿಗೆ ಆಚರಿಸಲಾದ ದೃಷ್ಟಿಕೋನವನ್ನು ಮುಂದಕ್ಕೆ ಕೊಂಡೊಯ್ಯುತ್ತದೆ: ತಂತ್ರಜ್ಞಾನವು ರಾಷ್ಟ್ರೀಯ ಸಾಧ್ಯತೆಗಳನ್ನು ವಿಸ್ತರಿಸುವಾಗ ಜೀವನವನ್ನೂ ಸುಧಾರಿಸುತ್ತದೆ.

7. ಪ್ರಕ್ಷುಬ್ಧ ಸಮಯದಲ್ಲಿ ದೃಢವಾದ ನಾಯಕತ್ವ

ಜಾಗತಿಕ ಕ್ರಾಂತಿಯ ಮೂಲಕ ಭಾರತಕ್ಕೆ ದಿಕ್ಕು ತೋರಿಸುವ ಪ್ರಧಾನಿ ಮೋದಿಯವರ ಸಾಮರ್ಥ್ಯವನ್ನು ನಿರ್ಣಯವು ಎತ್ತಿ ತೋರಿಸುತ್ತದೆ. ಕೋವಿಡ್ ಸಮಯದಲ್ಲಿ, ಅವರು ದೇಶವನ್ನು ಒಂದುಗೂಡಿಸಿದರು, ದೇಶೀಯ ಲಸಿಕೆ ಅಭಿವೃದ್ಧಿಯನ್ನು ಬೆಂಬಲಿಸಿದರು ಮತ್ತು ತ್ವರಿತ ವ್ಯಾಕ್ಸಿನೇಷನ್ ಅನ್ನು ಸಕ್ರಿಯಗೊಳಿಸಿದರು. ಪಶ್ಚಿಮ ಏಷ್ಯಾದ ಬಿಕ್ಕಟ್ಟಿನ ಸಮಯದಲ್ಲಿ, ಸಮಯೋಚಿತ ನಿರ್ಧಾರಗಳು ಮತ್ತು ಇಂಧನ ಭದ್ರತಾ ಕ್ರಮಗಳು ಭಾರತಕ್ಕೆ ಅಡಚಣೆಯನ್ನು ತಡೆದುಕೊಳ್ಳಲು ಸಹಾಯ ಮಾಡಿತು. ಅವರ ನಾಯಕತ್ವವು ತಕ್ಷಣದ ಪ್ರತಿಕ್ರಿಯೆಗಳನ್ನು ವರ್ಷಗಳಿಂದ ನಿರ್ಮಿಸಿದ ಸಾಮರ್ಥ್ಯಗಳೊಂದಿಗೆ ಸಂಯೋಜಿಸಿತು, ಇದು ಕಷ್ಟದ ಸಮಯದಲ್ಲಿ ದೇಶಕ್ಕೆ ಚೇತರಿಕೆ ಮತ್ತು ವಿಶ್ವಾಸವನ್ನು ನೀಡಿತು.

8. ನಿರ್ಣಾಯಕ ನಾಯಕತ್ವವು ಶಾಂತಿ ಮತ್ತು ವಿಶ್ವಾಸವನ್ನು ಕಾಪಾಡುತ್ತದೆ

2016ರ ನಿರ್ದಿಷ್ಟ ತಾಣ ದಾಳಿ, 2019ರ ಬಾಲಕೋಟ್ ವಾಯು ದಾಳಿ ಮತ್ತು 2025ರ ಆಪರೇಷನ್ ಸಿಂಧೂರ ಪ್ರಧಾನಿ ಮೋದಿಯವರ ಅಡಿಯಲ್ಲಿ ಸ್ಥಾಪಿಸಲಾದ ರಾಷ್ಟ್ರೀಯ ಭದ್ರತೆಯ ಕೆಂಪು ರೇಖೆಗಳನ್ನು ವಿವರಿಸುತ್ತದೆ. ಇದರ ಜೊತೆಗೆ 370ನೇ ವಿಧಿಯನ್ನು ತೆಗೆದುಹಾಕುವ, ಒಂದು ಶ್ರೇಣಿ ಒಂದು ಪಿಂಚಣಿ ಮತ್ತು ರಕ್ಷಣಾ ಪಡೆಗಳ ಮುಖ್ಯಸ್ಥರ ಹುದ್ದೆಯನ್ನು ರಚಿಸುವ ನಿರ್ಣಯವು ಇವುಗಳ ಸಾಲಿಗೆ ಸೇರುತ್ತದೆ. ಈಶಾನ್ಯದಲ್ಲಿ ಮಾವೋವಾದಿ ಭಯೋತ್ಪಾದನೆ ಮತ್ತು ಶಾಂತಿ ಪ್ರಯತ್ನಗಳ ವಿರುದ್ಧದ ಕ್ರಮಗಳು ರಾಷ್ಟ್ರೀಯ ಸಂಕಲ್ಪವನ್ನು ಅಭಿವೃದ್ಧಿ, ಸ್ಥಿರತೆ ಮತ್ತು ಸಾರ್ವಜನಿಕ ನಂಬಿಕೆಯೊಂದಿಗೆ ಸಂಯೋಜಿಸುವ ನಾಯಕತ್ವವನ್ನು ಹೊರತರುತ್ತವೆ.

9. ವಿಶ್ವ ವೇದಿಕೆಯಲ್ಲಿ ಭಾರತದ ಧ್ವನಿ ಬಲವಾಗಿ ಬೆಳೆಯುತ್ತಿದೆ

ಈ ನಿರ್ಣಯವು ಭಾರತದ ಹೆಚ್ಚುತ್ತಿರುವ ಸ್ಥಾನಮಾನವನ್ನು ವಿಭಜನೆಗಳಾದ್ಯಂತ ಸಹಕಾರವನ್ನು ನಿರ್ಮಿಸುವ ಪ್ರಧಾನಿ ಮೋದಿಯವರ ಸಾಮರ್ಥ್ಯದೊಂದಿಗೆ ಸಂಪರ್ಕಿಸುತ್ತದೆ. ಜಿ 20 ಮತ್ತು ಬ್ರಿಕ್ಸ್ ನಲ್ಲಿನ ಒಮ್ಮತ, ಜಾಗತಿಕ ದಕ್ಷಿಣದ ವಕಾಲತ್ತು ಮತ್ತು ಆಫ್ರಿಕನ್ ಒಕ್ಕೂಟದ ಜಿ 20 ಸೇರ್ಪಡೆ ಅವರ ರಾಜತಾಂತ್ರಿಕ ನಾಯಕತ್ವವನ್ನು ಪ್ರತಿಬಿಂಬಿಸುತ್ತದೆ. ಭಾರತದ ಸಾಮರ್ಥ್ಯಗಳು ಇತರರಿಗೆ ಹೇಗೆ ಸೇವೆ ಸಲ್ಲಿಸಬಹುದು ಎಂಬುದನ್ನು ಲಸಿಕೆ ಮೈತ್ರಿ ತೋರಿಸಿದೆ. 36 ದೇಶಗಳಿಂದ ಲಭಿಸಿರುವ ಗೌರವಗಳು, ಪ್ರಧಾನಮಂತ್ರಿ ಮೋದಿ ಹಾಗೂ ಭಾರತದ ಬಗ್ಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚುತ್ತಿರುವ ಗೌರವ ಹಾಗೂ ಸಮಸ್ಯೆಗಳಿಗೆ ಹಂಚಿತ ಪರಿಹಾರದ ಕೊಡುಗೆಯನ್ನು ಒತ್ತಿ ಹೇಳಿದೆ.

ಆರ್ಥಿಕ ಸವಾಲುಗಳು, ಹಣದುಬ್ಬರ ಮತ್ತು ಹತಾಶೆಯ ಭಾವನೆಯೊಂದಿಗೆ ಹೋರಾಡುತ್ತಿತ್ತು. ನಾನು ಮತ್ತೊಮ್ಮೆ ಜನರ ಶಕ್ತಿಗೆ ಕರೆ ನೀಡಿದ್ದೇನೆ ಮತ್ತು "ನಾವು ಅದನ್ನು ಮಾಡುತ್ತೇವೆ" ಎಂಬ ವಿಶ್ವಾಸವನ್ನು ತುಂಬಿದ್ದೇನೆ ಎಂದು ಪ್ರಧಾನಿ ಹೇಳಿದರು. ಇಂದು ಸುಧಾರಣೆಯ ವೇಗದ ಮೇಲೆ ಗಮನ ಕೇಂದ್ರೀಕರಿಸಿ ಭಾರತದ ಆರ್ಥಿಕತೆ, ಉತ್ಪಾದನೆ, ರಫ್ತು, ಮೊಬೈಲ್ ಉತ್ಪಾದನೆ ಮತ್ತು ಸೌರಶಕ್ತಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಕಂಡುಬಂದ ಪರಿವರ್ತನೆಗಳನ್ನು ಪ್ರಧಾನಿ ಮೋದಿ ಎತ್ತಿ ತೋರಿಸಿದರು. ಬಿಕ್ಕಟ್ಟಿನ ಸಮಯದಲ್ಲಿ ಚರ್ಚೆಗಳು ಈ ಹಿಂದೆ ಭಾರತೀಯ ಆರ್ಥಿಕತೆಯ ದುರ್ಬಲತೆಗಳ ಮೇಲೆ



10. ಪರಂಪರೆ ಮತ್ತು ಜವಾಬ್ದಾರಿಯಿಂದ ಪ್ರಗತಿಯು ಬಲ ಪಡೆಯುತ್ತದೆ

ಪ್ರಧಾನಮಂತ್ರಿ ಮೋದಿಯವರ ಮುನ್ನೋಟವು ಅಭಿವೃದ್ಧಿ, ಸಾಂಸ್ಕೃತಿಕ ಆತ್ಮವಿಶ್ವಾಸ ಮತ್ತು ಪರಿಸರ ಜವಾಬ್ದಾರಿಯನ್ನು ಒಗ್ಗೂಡಿಸುತ್ತದೆ. ಹವಮಾನ ಬದಲಾವಣೆಗಾಗಿನ ಕ್ರಿಯೆಯು ಗುಜರಾತ್ ನ ಪ್ರತ್ಯೇಕ ಇಲಾಖೆಯಿಂದ ಆರಂಭವಾಗಿ ನವೀಕರಿಸಬಹುದಾದ ಇಂಧನದ ವಿಸ್ತರಣೆ ಹಾಗೂ ಅಂತಾರಾಷ್ಟ್ರೀಯ ಪಾಲುದಾರಿಕೆಗಳತ್ತ ಮುನ್ನಡೆದಿದೆ. ಯೋಗಾಭ್ಯಾಸ, ಸಿರಿಧಾನ್ಯಗಳು, ಕಾಶಿ ವಿಶ್ವನಾಥ ಧಾಮ ಮತ್ತು ರಾಮ ಲಲ್ಲಾನ ಪ್ರತಿಷ್ಠಾಪನೆಯೊಂದಿಗೆ ಭಾರತದ ಪರಂಪರೆಯ ನಂಟು ಬಲಗೊಂಡಿದೆ. 2047ರ ವೇಳೆಗೆ ಸಮೃದ್ಧ, ಸ್ವಾವಲಂಬಿ ಮತ್ತು ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸುವ ನಿಟ್ಟಿನಲ್ಲಿ ಸಾಮೂಹಿಕ ಪ್ರಯತ್ನವಾಗಬೇಕು ಎಂಬ ಅವರ ದೂರದೃಷ್ಟಿಗೆ ಈ ನಿರ್ಣಯವು ಪುನರ್ ಬದ್ಧತೆಯಾಗಿದೆ.

ಸಂಪುಟ ಮೌಖಿಕವಾಗಿ ಅಂಗೀಕರಿಸಿದ ಪ್ರಸ್ತಾವನೆಯನ್ನು ಓದಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ

ಕೇಂದ್ರೀಕೃತವಾಗಿದ್ದರೂ, ಇಂದಿನ ಸಂಭಾಷಣೆಯು ಭಾರತದ ಚೇತರಿಕೆಯ ಮೇಲೆ ಕೇಂದ್ರೀಕರಿಸಿದೆ ಎಂದು ಅವರು ಹೇಳಿದರು. ಕೃಷಿ ಕ್ಷೇತ್ರವನ್ನು ಉಲ್ಲೇಖಿಸಿದ ಪ್ರಧಾನಮಂತ್ರಿಯವರು, 2015 ರಿಂದ 2025ರ ದಶಕದಲ್ಲಿ ಈ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಲಾಗಿದೆ ಎಂದರು.

'ಸಬ್ಕಾ ಸಾಥ್, ಸಬ್ಕಾ ವಿಕಾಸ್': ಉತ್ತಮ ಆಡಳಿತದ ಅಡಿಪಾಯ

'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಉತ್ತಮ ಆಡಳಿತದ ಅಡಿಪಾಯವಾಗಿದೆ ಎಂದು ಪ್ರಧಾನಿ ಹೇಳಿದರು. ಉತ್ತಮ ಆಡಳಿತವನ್ನು 'ಪರಿಪೂರ್ಣತೆ' ಪರಿಕಲ್ಪನೆಯೊಂದಿಗೆ ಜೋಡಿಸಿದ ಅವರು, ಯೋಜನೆಗಳ ಪ್ರಯೋಜನಗಳು ಪ್ರತಿಯೊಬ್ಬ ಅರ್ಹ ಫಲಾನುಭವಿಯನ್ನು ತಲುಪುವುದನ್ನು ಖಚಿತಪಡಿಸಿಕೊಳ್ಳುವುದು ಎಂದರ್ಥ ಎಂದು ವಿವರಿಸಿದರು. ಯಾವುದೇ ಅರ್ಹ ವ್ಯಕ್ತಿ ಹಿಂದೆ ಉಳಿಯುವುದಿಲ್ಲ ಮತ್ತು ಯಾರೂ ಇತರರ ಹಕ್ಕುಗಳನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದರು.

ಯುವಭಾರತದ ಅತಿ ದೊಡ್ಡ ಶಕ್ತಿ

ಪ್ರವಾಸೋದ್ಯಮ, ಶಿಕ್ಷಣ, ಮನರಂಜನೆ, ಆರೋಗ್ಯ ಮತ್ತು ಕ್ಷೇಮ, ಕ್ರೀಡೆ, ನಾವಿನ್ಯತೆ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಭಾರತವನ್ನು ಜಾಗತಿಕ ನಾಯಕನನ್ನಾಗಿ ಮಾಡುವ ಮುನ್ನೋಟವನ್ನು ಪ್ರಧಾನಿ ಮೋದಿ ವಿವರಿಸಿದರು. ಯುವಜನರು ಭಾರತದ ದೊಡ್ಡ ಶಕ್ತಿ ಎಂದು ಬಣ್ಣಿಸಿದ ಅವರು, ದೇಶದ ಯುವ ಜನಸಂಖ್ಯೆಯು ಇತಿಹಾಸ ನೀಡಿದ ಅಸಾಧಾರಣ ಅವಕಾಶವನ್ನು ಪ್ರತಿನಿಧಿಸುತ್ತದೆ ಎಂದರು. ಭವಿಷ್ಯದ ಪೀಳಿಗೆಯು ಹಿಂದಿನ ಪೀಳಿಗೆಗಳು ಅನುಭವಿಸಿದ ಕಷ್ಟಗಳನ್ನು ಎದುರಿಸಬೇಕಾಗಿಲ್ಲ

25 ವರ್ಷಗಳ ಉತ್ತಮ ಆಡಳಿತ

ಅಧ್ಯಕ್ಷರು, ಜಾಗತಿಕ ನಾಯಕರು ಮತ್ತು ಸಹವರ್ತಿಗಳಿಂದ ಪ್ರಶಂಸೆ

ಅಕ್ಟೋಬರ್ 7, 2026 ರಂದು, ಸರ್ಕಾರಗಳ ಮುಖ್ಯಸ್ಥರಾಗಿ ಐತಿಹಾಸಿಕ 25 ವರ್ಷಗಳ ಅಧಿಕಾರಾವಧಿಯನ್ನು ಪೂರ್ಣಗೊಳಿಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಜಾಗತಿಕ ನಾಯಕರು ತಮ್ಮ ಶುಭಾಶಯಗಳು ಮತ್ತು ಅಭಿನಂದನೆಗಳನ್ನು ತಿಳಿಸಿದರು. 2001 ರಲ್ಲಿ ಮೊದಲ ಬಾರಿಗೆ ಗುಜರಾತ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು 2014 ರಲ್ಲಿ ಭಾರತದ ಪ್ರಧಾನಮಂತ್ರಿಯಾದ ನಂತರ 25 ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ, ಜಾಗತಿಕ ನಾಯಕರು ಅವರ ಪರಿವರ್ತಕ ನಾಯಕತ್ವ, ಉತ್ತಮ ಆಡಳಿತಕ್ಕೆ ಸಮರ್ಪಣೆ ಮತ್ತು ಜಾಗತಿಕ ಶಾಂತಿ, ಒಳಗೊಳ್ಳುವಿಕೆ ಮತ್ತು ಸುಸ್ಥಿರ ಅಭಿವೃದ್ಧಿಗೆ ಬದ್ಧತೆಯನ್ನು ಶ್ಲಾಘಿಸಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ತಮ್ಮ ಸಂದೇಶದಲ್ಲಿ, ಈ ಮಹತ್ವದ ಮೈಲಿಗಲ್ಲು ಜನರ ಕಲ್ಯಾಣಕ್ಕಾಗಿ ಅಚಲ ಬದ್ಧತೆ ಮತ್ತು ಭಾರತದ ಪ್ರಗತಿಯನ್ನು ಮುನ್ನಡೆಸುವ ದೃಢ ಸಂಕಲ್ಪವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಲ್ಲದೆ, ಮಾಜಿ ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ಮತ್ತು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಸೇರಿದಂತೆ ಭಾರತ ಮತ್ತು ವಿದೇಶಗಳ ಗಣ್ಯರು ಸಹ ತಮ್ಮ ಅಭಿನಂದನೆಗಳನ್ನು ತಿಳಿಸಿದರು. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಭೂತಾನ್ ಪ್ರಧಾನಮಂತ್ರಿ ಶೆರಿಂಗ್ ಟೊಬ್ಗೆ, ನೈಜೀರಿಯಾದ ಅಧ್ಯಕ್ಷ ಬೋಲಾ ಅಹ್ಮದ್ ಟಿನುಬು ಮತ್ತು ಫಿಲಿಪ್ಪೀನ್ಸ್ ಅಧ್ಯಕ್ಷರಂತಹ ವಿಶ್ವ ನಾಯಕರಿಂದ ಅಭಿನಂದನಾ ಸಂದೇಶಗಳನ್ನು ಸ್ವೀಕರಿಸಿದರು. ಹೆಚ್ಚುವರಿಯಾಗಿ, ನೇಪಾಳ, ಬೆಲ್ಜಿಯಂ, ಜಪಾನ್ ಮತ್ತು ಕಾಮನ್ವೆಲ್ತ್ ಆಫ್ ಡೊಮಿನಿಕಾ ಪ್ರಧಾನಿಗಳು ಮತ್ತು ಬೋಟ್ಸ್ವಾನಾ ಗಣರಾಜ್ಯದ ಅಧ್ಯಕ್ಷರು ತಮ್ಮ ಅಭಿನಂದನೆಗಳನ್ನು ಕಳುಹಿಸಿದರು.

ಎಲ್.ಕೆ. ಅಡ್ವಾಣಿ ಅವರನ್ನು ಭೇಟಿ ಮಾಡಿ ಆಶೀರ್ವಾದ ಕೋರಿದ ಪ್ರಧಾನಿ

25 ವರ್ಷಗಳ ಸೇವೆಯ ಸಂದರ್ಭದಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ಮಾಜಿ ಉಪ ಪ್ರಧಾನಿ ಎಲ್.ಕೆ.ಅಡ್ವಾಣಿ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ ಆಶೀರ್ವಾದ ಕೋರಿದರು. ಅಡ್ವಾಣಿ ಅವರ ದಶಕಗಳ ಸಾರ್ವಜನಿಕ ಸೇವೆ ಮತ್ತು ರಾಷ್ಟ್ರೀಯ ಜೀವನಕ್ಕೆ ಮಹತ್ವದ ಕೊಡುಗೆಗಳನ್ನು ಶ್ಲಾಘಿಸಿದ ಮೋದಿ, ಅವರ ಪ್ರಯತ್ನಗಳು ರಾಷ್ಟ್ರದ ಪ್ರಗತಿಯ ಮೇಲೆ ಅಳಿಸಲಾಗದ ಛಾಪು ಮೂಡಿಸಿವೆ ಎಂದು ಹೇಳಿದರು.



ಎಂದು ಖಚಿತಪಡಿಸಿಕೊಳ್ಳುವ ಪ್ರಯತ್ನಗಳ ಮೂಲಕ ಈ ಸಾಮರ್ಥ್ಯವನ್ನು ಬಳಸಿಕೊಳ್ಳುವ ಅಗತ್ಯವನ್ನು ಅವರು ಒತ್ತಿ ಹೇಳಿದರು.

ಜೀವನದ ಪ್ರತಿಯೊಂದು ಕಣ ಮತ್ತು ಕ್ಷಣ ಭಾರತದ ಮಣ್ಣಿಗೆ ಸಮರ್ಪಣೆ

ರಾಷ್ಟ್ರವೇ ಮೊದಲು ಬರುತ್ತದೆ, ರಾಷ್ಟ್ರೀಯ ಸಮೃದ್ಧಿ ತಮ್ಮ ಪ್ರತಿಜ್ಞೆ ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸುವುದು ತಮ್ಮ ಗುರಿ ಎಂಬ ಪ್ರತಿಜ್ಞೆಯೊಂದಿಗೆ ಮುಂದುವರಿಯುವ ತಮ್ಮ ಸಂಕಲ್ಪವನ್ನು ಪ್ರಧಾನಿ ಘೋಷಿಸಿದರು. ಕ್ರಿಯೆಯೇ ತಮ್ಮ ಧರ್ಮ ಮತ್ತು ಕರ್ತವ್ಯದ ಈಡೇರಿಕೆಯೇ ತಮ್ಮ ಗಂಭೀರ ಬದ್ಧತೆ ಎಂದು ಅವರು ದೃಢಪಡಿಸಿದರು. ವ್ಯಕ್ತಿಯಿಂದ ಸಾಮೂಹಿಕತೆಯವರೆಗೆ - 'ನಾನು' ನಿಂದ 'ನಾವು' ವರೆಗೆ - ಅವರ ಜೀವನದ ಪ್ರತಿಯೊಂದು ಕಣ ಮತ್ತು ಪ್ರತಿ ಕ್ಷಣವೂ ಭಾರತದ ಮಣ್ಣಿಗೆ ಸಮರ್ಪಿತವಾಗಿರುತ್ತದೆ. ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವವರೆಗೆ, ತಾವು ನಿಲ್ಲುವುದಿಲ್ಲ ಅಥವಾ ಆಯಾಸಗೊಳ್ಳುವುದಿಲ್ಲ ಅಥವಾ ತನ್ನ ಹಾದಿಯಿಂದ ವಿಚಲಿತರಾಗುವುದಿಲ್ಲ ಎಂದು ಅವರು ಪ್ರತಿಜ್ಞೆ ಮಾಡಿದರು. ●

ಮುಖಪುಟ ಲೇಖನ

ವೋಕಲ್ ಫಾರ್ ಲೋಕಲ್

'ವೋಕಲ್ ಫಾರ್ ಲೋಕಲ್' ಭಾರತೀಯರ ಮನಸ್ಸುಗಳನ್ನು ಬೆಸೆದ ಒಂದು ಕರೆ











ಈ ವರ್ಷದ ದೀಪಾವಳಿಯ ದೀಪಗಳ ಬೆಳಕು ವಿಶೇಷವಾಗಿದೆ. ಏಕೆಂದರೆ, ಅವು ಸ್ವಾವಲಂಬನೆಯ ಬೆಳಕಿನಿಂದ ಪ್ರಜ್ವಲಿಸುತ್ತಿವೆ. 'ಮನ್ ಕಿ ಬಾತ್' ಕಾರ್ಯಕ್ರಮದ ಮೂಲಕ ಮೊಳಗಿದ 'ವೋಕಲ್ ಫಾರ್ ಲೋಕಲ್' (ಸ್ಥಳೀಯ ಉತ್ಪನ್ನಗಳಿಗೆ ಧ್ವನಿಯಾಗೋಣ) ಎಂಬ ಕರೆ ಇಂದು ಹೆಮ್ಮರವಾಗಿ ಬೆಳೆದಿದೆ. ಸಣ್ಣ ಹೆಜ್ಜೆಯೊಂದಿಗೆ ಆರಂಭವಾದ ಈ ಪಯಣ, ಇಂದು ಸೆಮಿಕಂಡಕ್ಟರ್ ಚಿಪ್‌ಗಳು ಮತ್ತು ಪರಮಾಣು ಇಂಧನ ಕ್ಷೇತ್ರಗಳಲ್ಲಿನ ಸ್ವದೇಶಿ ಸಾಧನೆಗಳವರೆಗೆ ತಲುಪಿದೆ. ಖಾದಿಯಿಂದ ರಕ್ಷಣಾ ಉತ್ಪನ್ನಗಳ ರಫ್ತಿನವರೆಗೆ, ಆಟಿಕೆ ಉದ್ಯಮದಿಂದ ಕೃಷಿ ಮತ್ತು ಇತರ ರಫ್ತು ಕ್ಷೇತ್ರಗಳವರೆಗೆ ಭಾರತೀಯತೆಯ ಕಂಪು ಜಗತ್ತಿನಾದ್ಯಂತ ಹರಡುತ್ತಿದೆ. 'ಆಪರೇಷನ್ ಸಿಂಧೂರ' ಕೂಡ ಸ್ವದೇಶಿ ಎಂಬುದು ಕೇವಲ ಮಾರುಕಟ್ಟೆಗೆ ಸಂಬಂಧಿಸಿದ ಪರಿಕಲ್ಪನೆಯಲ್ಲ; ಅದು ರಾಷ್ಟ್ರೀಯ ಭದ್ರತೆಯ ಬಲವಾದ ರಕ್ಷಾಕವಚ ಎಂಬುದನ್ನು ತೋರಿಸಿಕೊಟ್ಟಿದೆ. ತಮ್ಮ ಕುಶಲಕರ್ಮಿಗಳ ಕೌಶಲದ ಬಗ್ಗೆ ಹೆಮ್ಮೆಪಡುತ್ತಿರುವ ಭಾರತವು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಅಡಿಪಾಯವನ್ನು ಹಾಕುತ್ತಿರುವ ಮಹತ್ವದ ಘಟ್ಟದಲ್ಲಿ ಈ ಬಾರಿಯ ದೀಪಾವಳಿ ಬಂದಿದೆ. ಆದ್ದರಿಂದ ಈ ದೀಪಾವಳಿ ವಿಶೇಷವಾಗಿದೆ. ದೀಪಾವಳಿ ಮತ್ತು ಛತ್ ನಂತಹ ಹಬ್ಬಗಳ ಶುಭ ಸಂದರ್ಭದಲ್ಲಿ, ಪ್ರತಿಯೊಂದು ದೀಪ, ಪ್ರತಿಯೊಂದು ಉಡುಗೊರೆ ಮತ್ತು ಪ್ರತಿಯೊಂದು ಖರೀದಿಯೂ ಕೇವಲ ಹಬ್ಬದ ಸಂಭ್ರಮದ ಸಂಕೇತವಲ್ಲ ಎಂಬುದನ್ನು ನಾವು ಅರಿತುಕೊಳ್ಳಬೇಕು. ಅವು 140 ಕೋಟಿ ಭಾರತೀಯರ ಒಗ್ಗಟ್ಟಿನ ಸಂಕಲ್ಪವನ್ನು ಪ್ರತಿನಿಧಿಸುತ್ತವೆ. ಅದು ಸ್ವದೇಶಿ, ಸ್ವಾವಲಂಬನೆ ಮತ್ತು ಸಮೃದ್ಧ ಭಾರತದ ನಿರ್ಮಾಣದ ಸಂಕಲ್ಪವಾಗಿದೆ.









ಮುಖಪುಟ ಲೇಖನ

ವೋಕಲ್ ಫಾರ್ ಲೋಕಲ್

ಭಾರತವು ಹಬ್ಬಗಳ ನಾಡು. ಇಲ್ಲಿ ಪ್ರತಿಯೊಂದು ಧರ್ಮ ಮತ್ತು ಸಮುದಾಯದ ಆಚರಣೆಗಳು ಸಂತೋಷವನ್ನು ಮಾತ್ರವಲ್ಲದೆ, ಒಂದು ಸಂಕಲ್ಪದ ಮನೋಭಾವವನ್ನೂ ಹೊತ್ತು ತರುತ್ತವೆ. ಪ್ರತಿಯೊಂದು ಸಂಕಲ್ಪಕ್ಕೂ ತನ್ನದೇ ಆದ ಮಹತ್ವ ಮತ್ತು ಆಳವಾದ ಅರ್ಥವಿದೆ. ದೀಪಾವಳಿ ಕತ್ತಲೆಯ ಮೇಲೆ ಬೆಳಕಿನ ವಿಜಯವನ್ನು ಸಾರಿದರೆ, ಈದ್ ಸಹೋದರತ್ವ ಮತ್ತು ಒಗ್ಗಟ್ಟಿನ ಸಂದೇಶವನ್ನು ನೀಡುತ್ತದೆ. ಕ್ರಿಸ್‌ಮಸ್ ಪ್ರೀತಿ ಮತ್ತು ಕರುಣೆಯ ಪಾಠ ಕಲಿಸುತ್ತದೆ. ಗುರುಪರ್ಬ್ ಸೇವೆ ಮತ್ತು ತ್ಯಾಗದ ಮಾರ್ಗವನ್ನು ತೋರಿಸುತ್ತದೆ. ಬುದ್ಧ ಪೂರ್ಣಿಮೆ ಕರುಣೆ ಮತ್ತು ಅಹಿಂಸೆಯ ಮೌಲ್ಯಗಳನ್ನು ತಿಳಿಸುತ್ತದೆ. ರಕ್ಷಾ ಬಂಧನವು ಸಹೋದರ-ಸಹೋದರಿಯರ ನಡುವಿನ ಪ್ರೀತಿಯನ್ನು ಒಂದೇ ದಾರದಲ್ಲಿ ಬೆಸೆಯುತ್ತದೆ. ಮಕರ ಸಂಕ್ರಾಂತಿ ದಾನ ಮತ್ತು ಸಾಮಾಜಿಕ ಸಾಮರಸ್ಯದ ಸಂದೇಶವನ್ನು ಸಾರುತ್ತದೆ. ಭವ್ಯವಾದ ಛತ್ ಹಬ್ಬವು ಸೂರ್ಯ ಮತ್ತು ಜಲದ ಬಗ್ಗೆ ಕೃತಜ್ಞತೆ ಸಲ್ಲಿಸುವ ಸಂದರ್ಭವಾಗಿದೆ. ಜೊತೆಗೆ, ಶಿಸ್ತು ಮತ್ತು ತಪಸ್ಸಿನ ಆಚರಣೆಯೂ ಆಗಿದೆ. ನೀರು ಕುಡಿಯದೆ ಉಪವಾಸ ಮಾಡುವ 'ನಿರ್ಜಲ ವ್ರತ' ಮತ್ತು ಉದಯಿಸುವ ಹಾಗೂ ಅಸ್ತಮಿಸುವ ಸೂರ್ಯನಿಗೆ ಅರ್ಘ್ಯ ಅರ್ಪಿಸುವ ಪದ್ಧತಿಯು ಪ್ರಕೃತಿಯ ಬಗ್ಗೆ ಗೌರವ ತೋರುವ ಪ್ರಾಚೀನ ಸಂಪ್ರದಾಯವನ್ನು ಜೀವಂತವಾಗಿರಿಸಿದೆ. ನವರಾತ್ರಿ, ಓಣಂ, ಪೊಂಗಲ್, ಬೈಸಾಖಿ ಮತ್ತು ಬಿಹು ಹಬ್ಬಗಳು ತಮ್ಮದೇ ಆದ ವಿಶಿಷ್ಟ ಸಂಪ್ರದಾಯ ಮತ್ತು ಕಥೆಗಳನ್ನು ಹೊಂದಿವೆ. ಆದರೆ, ಇವೆಲ್ಲವನ್ನೂ ಒಂದು ಸಾಮಾನ್ಯ ಭಾವನೆ ಒಗ್ಗೂಡಿಸುತ್ತದೆ. ಅದುವೇ ಒಟ್ಟಾಗಿ ಹಬ್ಬ ಆಚರಿಸುವ ಒಗ್ಗಟ್ಟಿನ ಮನೋಭಾವ. ಇತ್ತೀಚಿನ ವರ್ಷಗಳಲ್ಲಿ ಈ ಒಗ್ಗಟ್ಟಿನ ಮನೋಭಾವದೊಂದಿಗೆ ಹೊಸ ಸಂಕಲ್ಪವೊಂದು ಬೆಸೆದುಕೊಂಡಿದೆ. ಅದು ಎಲ್ಲ ಸಮುದಾಯಗಳು, ಧರ್ಮಗಳು ಮತ್ತು ಪ್ರದೇಶಗಳ ಹಬ್ಬಗಳನ್ನು ಒಂದೇ ದಾರದಲ್ಲಿ ಜೋಡಿಸಿದೆ. ಆ ಸಂಕಲ್ಪವೇ 'ವೋಕಲ್ ಫಾರ್ ಲೋಕಲ್' (ಸ್ಥಳೀಯ ಉತ್ಪನ್ನಗಳಿಗೆ ಧ್ವನಿಯಾಗೋಣ) ಎಂಬುದು.

ಈ ಮನೋಭಾವದ ಅತ್ಯಂತ ಸಹಜ ಮತ್ತು ಜೀವಂತ ಅಭಿವ್ಯಕ್ತಿಯಾಗಿ ಛತ್ ಹಬ್ಬವನ್ನು ಕಾಣಬಹುದು. ಛತ್ ಪೂಜೆಯಲ್ಲಿ ಬಳಸುವ ಬಿದಿರಿನ ಮೊರ ಮತ್ತು ದೊಡ್ಡ ಬಿದಿರಿನ ಬುಟ್ಟಿಗಳನ್ನು ತಯಾರಿಸುವುದರಿಂದ ಬಿಹಾರ ಹಾಗೂ ಪೂರ್ವಾಂಚಲದ ಸಾವಿರಾರು ಬಿದಿರು ಕುಶಲಕರ್ಮಿಗಳಿಗೆ ಜೀವನೋಪಾಯ ದೊರೆಯುತ್ತದೆ. ಪೂಜೆಗೆ ಬಳಸುವ ಬುಟ್ಟಿಗಳು, ಮಣ್ಣಿನ ದೀಪಗಳು ಮತ್ತು ಒಲೆಗಳ ಮೂಲಕ ಹಳ್ಳಿಗಳ ಕುಂಬಾರರ ಕೈಚಳಕ ಪ್ರತಿಯೊಂದು ಮನೆಗೂ ತಲುಪುತ್ತದೆ. ಪ್ರಸಾದವಾಗಿ ಅರ್ಪಿಸುವ ಥೇಕುವಾ ಸ್ಥಳೀಯ ಗೋಧಿ ಮತ್ತು ಬೆಲ್ಲದಿಂದ ತಯಾರಾಗುತ್ತದೆ. ಪೂಜೆಯ ಬುಟ್ಟಿಯಲ್ಲಿರುವ ಕಬ್ಬು, ತೆಂಗಿನಕಾಯಿ, ಸಿಹಿ ಗೆಣಸು, ಬಾಳೆಹಣ್ಣು ಮತ್ತು ಅಡಕೆ ಮುಂತಾದವು ಸ್ಥಳೀಯ ರೈತರ ಹೊಲಗಳಿಂದ ನೇರವಾಗಿ ಬರುತ್ತವೆ. ಅರಿಶಿನದ ಗಿಡದಿಂದ ಹಿಡಿದು ದೀಪಗಳನ್ನು ಬೆಳಗಿಸಲು ಬಳಸುವ ಮಣ್ಣಿನ ತಟ್ಟೆಯವರೆಗೆ, ನದಿಯ ದಡದಲ್ಲಿ ಹಾಸುವ ಚಾಪೆಯಿಂದ ಹಿಡಿದು ಛತ್ ಹಬ್ಬಕ್ಕೆ ಸಂಬಂಧಿಸಿದ ಪ್ರತಿಯೊಂದು ವಸ್ತುವಿನಲ್ಲೂ ಸ್ವದೇಶಿ ಉತ್ಪನ್ನಗಳ ಮಹತ್ವ ಕಾಣುತ್ತದೆ. ಪ್ರತಿಯೊಂದು ವಸ್ತುವೂ ಕುಶಲಕರ್ಮಿಗಳು, ನೇಕಾರರು ಮತ್ತು ರೈತರ ಪರಿಶ್ರಮದ ಕಥೆಯನ್ನು ಹೇಳುತ್ತದೆ. ಇದೇ ಕಾರಣಕ್ಕೆ, ಯಾವುದೇ ಅಧಿಕೃತ ಕರೆ ಇಲ್ಲದಿದ್ದರೂ ಛತ್ ಹಬ್ಬವು ಹಲವು ವರ್ಷಗಳಿಂದ ಸಹಜವಾಗಿಯೇ 'ವೋಕಲ್ ಫಾರ್ ಲೋಕಲ್' ಎಂಬ ಪರಿಕಲ್ಪನೆಯನ್ನು ಪ್ರತಿಬಿಂಬಿಸುತ್ತ ಬಂದಿದೆ.ಇಂದು ಈ ಹಬ್ಬವು ತನ್ನ ಪ್ರಾದೇಶಿಕ ಗಡಿಗಳನ್ನು ಮೀರಿ ಜಾಗತಿಕ ಆಯಾಮವನ್ನು ಪಡೆದುಕೊಂಡಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಕಾರ್ಯಕ್ರಮಗಳಲ್ಲಿ ಇದರ ಮಹತ್ವವನ್ನು ಆಗಾಗ್ಗೆ ಉಲ್ಲೇಖಿಸುತ್ತಾರೆ.

ಮುಖಪುಟ ಲೇಖನ

ವೋಕಲ್ ಫಾರ್ ಲೋಕಲ್

'ವೋಕಲ್ ಫಾರ್ ಲೋಕಲ್', 'ಮೇಡ್ ಇನ್ ಇಂಡಿಯಾ' ಮತ್ತು 'ಆತ್ಮನಿರ್ಭರ ಭಾರತ'ದ ಹಿಂದಿನ ದೂರದೃಷ್ಟಿಯ ನೇರ ಫಲಿತಾಂಶವಾಗಿ, ನವರಾತ್ರಿಯಿಂದ ದೀಪಾವಳಿಯ ಅವಧಿಯಲ್ಲಿ ದೇಶದಲ್ಲಿ ವ್ಯಾಪಾರ ವಹಿವಾಟು 7 ಲಕ್ಷ ಕೋಟಿ ರೂ.ಗಳನ್ನು ದಾಟಲಿದೆ ಎಂದು ಅಖಿಲ ಭಾರತ ವ್ಯಾಪಾರಿಗಳ ಒಕ್ಕೂಟ (CAIT) ಅಂದಾಜಿಸಿದೆ.

ಭಾರತೀಯತೆಯ ಸಾರವನ್ನು ಒಳಗೊಂಡಿರುವ ಈ ಹಬ್ಬಗಳ ಸಂದರ್ಭದಲ್ಲಿ ನಾವು ವಸ್ತುಗಳನ್ನು ಖರೀದಿಸುವಾಗ ಅಥವಾ ಉಡುಗೊರೆಗಳನ್ನು ವಿನಿಮಯ ಮಾಡಿಕೊಳ್ಳುವಾಗ, ಅವುಗಳನ್ನು ಭಾರತೀಯ ಕುಶಲಕರ್ಮಿಗಳು ತಯಾರಿಸಿದ್ದರೆ ಆ ಹಬ್ಬವು ಕೇವಲ ಧಾರ್ಮಿಕ ಆಚರಣೆಯಾಗಿ ಉಳಿಯುವುದಿಲ್ಲ. ಅದು ರಾಷ್ಟ್ರ ನಿರ್ಮಾಣಕ್ಕೆ ನಾಗರಿಕರು ನೇರವಾಗಿ ನೀಡುವ ಕೊಡುಗೆಯಾಗುತ್ತದೆ. ವೈವಿಧ್ಯಗಳ ನಡುವೆಯೂ 140 ಕೋಟಿ ಭಾರತೀಯರನ್ನು ಒಗ್ಗೂಡಿಸುವುದು ಇದೇ ಮನೋಭಾವ. ಸ್ವಾವಲಂಬಿ ಭಾರತವನ್ನು ನಿರ್ಮಿಸುವ ಸಾಮೂಹಿಕ ಸಂಕಲ್ಪವೂ ಇದೇ ಆಗಿದೆ.

ಈ ವರ್ಷವೂ ದೀಪಾವಳಿ ಮತ್ತು ಛತ್ ಹಬ್ಬಗಳು ನಮಗೆ ವಿಶೇಷ ಅವಕಾಶವನ್ನು ಒದಗಿಸಿವೆ. ಸ್ಥಳೀಯ ಉತ್ಪನ್ನಗಳಿಗೆ ಬೆಂಬಲ ನೀಡುವ, ಸ್ವದೇಶಿ ಉತ್ಪನ್ನಗಳನ್ನು ಜಾಗತಿಕ ವೇದಿಕೆಗೆ ಕೊಂಡೊಯ್ಯುವ ಮತ್ತು 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಪರಿವರ್ತಿಸುವ ಸಂಕಲ್ಪವನ್ನು ಕೈಗೊಳ್ಳುವ ಅವಕಾಶ ಇದಾಗಿದೆ. ಈ ಹಿನ್ನೆಲೆಯಲ್ಲಿ ಹಬ್ಬಗಳು ಈಗ ಕೇವಲ ಸಂಪ್ರದಾಯಗಳ ಆಚರಣೆಯಾಗಿ ಉಳಿದಿಲ್ಲ; ಅವು ನಮ್ಮ ಸ್ವಾವಲಂಬನೆಯ ಸಂಭ್ರಮವಾಗಿವೆ. ಇಂದು ಜನಾಂದೋಲನವಾಗಿ ಬೆಳೆದಿರುವ ಈ ಅಭಿಯಾನವು 2014ರಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮೊದಲ 'ಮನ್ ಕಿ ಬಾತ್' ರೇಡಿಯೊ ಕಾರ್ಯಕ್ರಮದೊಂದಿಗೆ ಆರಂಭವಾಯಿತು. ಆ ಕಾರ್ಯಕ್ರಮದಲ್ಲಿ ಖಾದಿ ಉತ್ಪನ್ನಗಳನ್ನು ಬಳಸುವಂತೆ ಅವರು ನೀಡಿದ ಕರೆ ಜನರ ಮನಸ್ಸಿನಲ್ಲಿ ಅಚ್ಚಳಿಯದ ಗುರುತು ಮೂಡಿಸಿತು. ನಂತರ, ಇಡೀ ಜಗತ್ತು ಕೋವಿಡ್-19 ಸಾಂಕ್ರಾಮಿಕದ ಸಂಕಷ್ಟವನ್ನು ಎದುರಿಸುತ್ತಿದ್ದ 2020ರ ಜೂನ್ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಪ್ರಧಾನಮಂತ್ರಿ ಮೋದಿ ಅವರು ಮತ್ತೊಮ್ಮೆ ಸ್ಥಳೀಯ ಉತ್ಪನ್ನಗಳನ್ನು ಬಳಸುವಂತೆ ಮತ್ತು ಸ್ಥಳೀಯ ಕುಶಲಕರ್ಮಿಗಳು, ನೇಕಾರರು ಹಾಗೂ ಕರಕುಶಲ ವಸ್ತುಗಳ ತಯಾರಕರ ಕೌಶಲವನ್ನು ಗುರುತಿಸುವಂತೆ ಜನರಿಗೆ ಕರೆ ನೀಡಿದರು. ಈ ಮನವಿ ಕೇವಲ ಘೋಷಣೆಯಾಗಿರಲಿಲ್ಲ. ಬಿಕ್ಕಟ್ಟನ್ನೇ ಅವಕಾಶವನ್ನಾಗಿ ಪರಿವರ್ತಿಸುವ ದೂರದೃಷ್ಟಿಯನ್ನು ಅದು ಒಳಗೊಂಡಿತ್ತು. ಮುಂದಿನ ವರ್ಷಗಳಲ್ಲಿ ಭಾರತದ ಆರ್ಥಿಕ ಚಿಂತನೆಯನ್ನೇ ಈ ದೃಷ್ಟಿಕೋನ ಗಣನೀಯವಾಗಿ ಬದಲಿಸಿತು. ಪ್ರಧಾನಮಂತ್ರಿಯವರ ಈ ಕರೆಗಳಿಂದಾಗಿ 'ವೋಕಲ್ ಫಾರ್ ಲೋಕಲ್' ಎಂಬುದು ಕೇವಲ ಸರ್ಕಾರಿ ಯೋಜನೆಯಾಗಿ ಉಳಿಯದೆ, 140 ಕೋಟಿ ಭಾರತೀಯರ ಸಾಮೂಹಿಕ ಮನೋಭಾವದ ಅವಿಭಾಜ್ಯ ಅಂಗವಾಗಿದೆ. ಪ್ರತಿಯೊಂದು



"ಇತ್ತೀಚಿನ ವರ್ಷಗಳಲ್ಲಿ ಭಾರತವು ಇತರ ದೇಶಗಳನ್ನು ಅವಲಂಬಿಸಿ ಬದುಕಬಾರದು; ನಾವು ಸ್ವಾವಲಂಬಿಗಳಾಗಬೇಕು ಎಂಬ ದೃಢ ನಂಬಿಕೆ ನಮ್ಮಲ್ಲಿ ಬೆಳೆದಿದೆ. ಜಗತ್ತಿನಲ್ಲಿ ಹಲವು ವಸ್ತುಗಳು ಕಡಿಮೆ ಬೆಲೆಗೆ ಮತ್ತು ಬೇಗನೆ ದೊರೆಯಬಹುದು. ಆದರೆ, ಅವುಗಳನ್ನು ಅವಲಂಬಿಸುವುದರಿಂದ ನಮ್ಮ ಸ್ವಂತ ಸಾಮರ್ಥ್ಯ ಬೆಳೆಯುವುದಿಲ್ಲ; ನಮ್ಮ ಸಾಮರ್ಥ್ಯದ ಬಲವನ್ನು ಪರೀಕ್ಷಿಸಲು ಕೂಡ ಸಾಧ್ಯವಾಗುವುದಿಲ್ಲ. ಆದ್ದರಿಂದ ನಮ್ಮ ಸಾಮರ್ಥ್ಯವನ್ನು ಬಲಪಡಿಸಿಕೊಳ್ಳಬೇಕು ಮತ್ತು ನಮ್ಮ ಹಿತಾಸಕ್ತಿಗಳನ್ನು ನಾವೇ ರಕ್ಷಿಸಿಕೊಳ್ಳಬೇಕು. ಈ ಕಾರಣಕ್ಕಾಗಿಯೇ ನಾವು 'ಆತ್ಮನಿರ್ಭರ ಭಾರತ'ದ ಸಂಕಲ್ಪದೊಂದಿಗೆ ಮುನ್ನಡೆಯುತ್ತಿದ್ದೇವೆ. 'ಮೇಕ್ ಇನ್ ಇಂಡಿಯಾ', ಸ್ವದೇಶಿ ಮತ್ತು 'ವೋಕಲ್ ಫಾರ್ ಲೋಕಲ್' ಮುಂತಾದ ಉಪಕ್ರಮಗಳೊಂದಿಗೆ ಭಾರತೀಯರ ಮನಸ್ಸುಗಳು ಬೆಸೆದುಕೊಳ್ಳುತ್ತಿವೆ.

- ನರೇಂದ್ರ ಮೋದಿ, ಪ್ರಧಾನಮಂತ್ರಿ

ಹಳ್ಳಿಯ ಅಂಗಡಿಗಳಲ್ಲಿ, ಪ್ರತಿಯೊಂದು ಮನೆಯ ಮಕ್ಕಳ ಆಲೋಚನೆಗಳಲ್ಲಿ ಮತ್ತು ಪ್ರತಿಯೊಂದು ಮಾರುಕಟ್ಟೆಯ ವಹಿವಾಟಿನಲ್ಲಿ ಈ ಮನೋಭಾವ ಪ್ರತಿಫಲಿಸುತ್ತಿದೆ.

ಜನಾಂದೋಲನವಾಗಿ ಬೆಳೆದ ಮಂತ್ರ

'ವೋಕಲ್ ಫಾರ್ ಲೋಕಲ್' ಎಂಬ ಪರಿಕಲ್ಪನೆಯ ವ್ಯಾಪ್ತಿ ಮಣ್ಣಿನ ದೀಪಗಳು ಅಥವಾ ಪೂಜಾ ಸಾಮಗ್ರಿಗಳನ್ನು ಖರೀದಿಸುವುದಕ್ಕೆ ಮಾತ್ರ ಸೀಮಿತವಲ್ಲ ಎಂದು ಪ್ರಧಾನಮಂತ್ರಿ ಮೋದಿ ಅವರು ಹಲವು ಬಾರಿ ಸ್ಪಷ್ಟಪಡಿಸಿದ್ದಾರೆ. ನಾವು



ಮನೆಗೆ ಅಥವಾ ದೈನಂದಿನ ಜೀವನಕ್ಕೆ ಬೇಕಾದ ವಸ್ತುಗಳನ್ನು ಖರೀದಿಸುವಾಗ ಅವು ಭಾರತದಲ್ಲಿ ತಯಾರಾಗಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಎಂಬುದೇ ಇದರ ಸರಳ ಅರ್ಥ. ಕಂಪನಿ ಯಾವ ದೇಶಕ್ಕೆ ಸೇರಿದೆ ಅಥವಾ ಬ್ರ್ಯಾಂಡ್‌ನ ಹೆಸರು ಯಾವ ಭಾಷೆಯಲ್ಲಿದೆ ಎಂಬುದು ಮುಖ್ಯವಲ್ಲ. ಭಾರತೀಯ ಕುಶಲಕರ್ಮಿಗಳ ಪರಿಶ್ರಮದಿಂದ ಆ ಉತ್ಪನ್ನವು ಭಾರತದಲ್ಲೇ ತಯಾರಾಗಿರಬೇಕು. ಪ್ರಧಾನಮಂತ್ರಿಯವರು ದೇಶಕ್ಕೆ ನಿರಂತರವಾಗಿ ತಿಳಿಸುತ್ತಿರುವ ಸ್ವದೇಶಿಯ ಸರಳ ವ್ಯಾಖ್ಯಾನ ಇದೇ ಆಗಿದೆ. ಈ ಮನೋಭಾವವು ಸರ್ಕಾರಿ ಉಪಕ್ರಮದ ಗಡಿಯನ್ನು ಮೀರಿ ಬೆಳೆದಿದೆ. ಮಾಧ್ಯಮಗಳು, ಸೃಜನಶೀಲ ಉದ್ಯಮಗಳು, ಸಾಮಾಜಿಕ ಮಾಧ್ಯಮದ ಪ್ರಭಾವಿಗಳು ಮತ್ತು ಚಲನಚಿತ್ರ ಕ್ಷೇತ್ರದ ಗಣ್ಯರು ಈ ಅಭಿಯಾನಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ. ಪ್ರಭಾವಿಗಳು ಮತ್ತು ಪ್ರಸಿದ್ಧ ವ್ಯಕ್ತಿಗಳು ತಾವೂ 'ವೋಕಲ್ ಫಾರ್ ಲೋಕಲ್' ಎಂಬ ಮನೋಭಾವವನ್ನು ಅಳವಡಿಸಿಕೊಳ್ಳಬೇಕು ಹಾಗೂ ತಮ್ಮ ಲಕ್ಷಾಂತರ ಅನುಯಾಯಿಗಳಿಗೂ ಅದನ್ನು ಅನುಸರಿಸಲು ಪ್ರೇರಣೆ ನೀಡಬೇಕು ಎಂದು ಪ್ರಧಾನಮಂತ್ರಿಯವರು ಆಗಾಗ್ಗೆ ಕರೆ ನೀಡಿದ್ದಾರೆ.

ಸ್ವಾವಲಂಬನೆಯ ಕಥೆ ಹೇಳುವ ಅಂಕಿ-ಅಂಶಗಳು

ಯಾವುದೇ ಯೋಜನೆಯ ಯಶಸ್ಸನ್ನು ಅಳೆಯಲು ಅಂಕಿ-ಅಂಶಗಳು ವಿಶ್ವಾಸಾರ್ಹ ಪುರಾವೆಗಳನ್ನು ಒದಗಿಸುತ್ತವೆ. 'ವೋಕಲ್ ಫಾರ್ ಲೋಕಲ್' ಅಭಿಯಾನದ ಅಂಕಿ-ಅಂಶಗಳು ಆಶಾದಾಯಕವಾಗಿವೆ. ಕಳೆದ 12 ವರ್ಷಗಳಲ್ಲಿ ರಕ್ಷಣಾ ಉತ್ಪಾದನೆಯು ಸುಮಾರು ನಾಲ್ಕು ಪಟ್ಟು ಹೆಚ್ಚಾಗಿದೆ. ಖಾದಿ ಮತ್ತು ಗ್ರಾಮೋದ್ಯೋಗ ವಲಯದಲ್ಲಿನ ಉತ್ಪಾದನೆಯು ಸುಮಾರು ಆರು ಪಟ್ಟು ಬೆಳೆದಿದೆ, ಎಲೆಕ್ಟ್ರಾನಿಕ್ಸ್ ಉತ್ಪಾದನೆಯು ಸುಮಾರು ಏಳು ಪಟ್ಟು ಏರಿದೆ, ಆಧುನಿಕ ರೈಲು ಕೋಚ್‌ಗಳ ಉತ್ಪಾದನೆಯು ಇಪ್ಪತ್ತೊಂದು ಪಟ್ಟು ಹೆಚ್ಚಾಗಿದೆ, ಮತ್ತು ಮೊಬೈಲ್ ಫೋನ್ ಉತ್ಪಾದನೆಯು ಮೂವತ್ತೈದು ಪಟ್ಟು ಹೆಚ್ಚಾಗಿದೆ. ಡಿಜಿಟಲ್ ತಂತ್ರಜ್ಞಾನ ಮತ್ತು ನಾವೀನ್ಯತೆಯ

“

'ವೋಕಲ್ ಫಾರ್ ಲೋಕಲ್' ಎಂದರೆ ಕೇವಲ ಮಣ್ಣಿನ ದೀಪಗಳನ್ನು ಖರೀದಿಸುವುದಲ್ಲ. ನಿಮ್ಮ ಪ್ರದೇಶದಲ್ಲಿ ತಯಾರಾಗುವ ಸ್ಥಳೀಯ ಉತ್ಪನ್ನಗಳನ್ನು ಸಾಧ್ಯವಾದಷ್ಟು ಸಕ್ರಿಯವಾಗಿ ಪ್ರೋತ್ಸಾಹಿಸಬೇಕು. ಭಾರತೀಯ ಕುಶಲಕರ್ಮಿಯ ಬೆವರಿನಿಂದ, ನಮ್ಮ ನೆಲದ ಸಂಪನ್ಮೂಲಗಳಿಂದ ತಯಾರಾದ ಪ್ರತಿಯೊಂದು ಉತ್ಪನ್ನವೂ ನಮಗೆ ಹೆಮ್ಮೆಯ ವಿಷಯವಾಗಿದೆ. ಈ ಹೆಮ್ಮೆಯನ್ನು ನಾವು ಇನ್ನಷ್ಟು ಹೆಚ್ಚಿಸಬೇಕು ಮತ್ತು ಸಂಭ್ರಮಿಸಬೇಕು.

- ನರೇಂದ್ರ ಮೋದಿ, ಪ್ರಧಾನಮಂತ್ರಿ

ಕ್ಷೇತ್ರಗಳಲ್ಲಿಯೂ ಭಾರತ ಜಾಗತಿಕ ಮಟ್ಟದಲ್ಲಿ ತನ್ನ ಛಾಪು ಮೂಡಿಸಿದೆ. ಇಂಟರ್ನೆಟ್ ಬಳಕೆದಾರರ ಸಂಖ್ಯೆ ಸುಮಾರು ನಾಲ್ಕು ಪಟ್ಟು ಹೆಚ್ಚಾಗಿದೆ. ಮಂಜೂರಾದ ಪೇಟೆಂಟ್‌ಗಳ ಸಂಖ್ಯೆ ನಾಲ್ಕು ಪಟ್ಟು ಹೆಚ್ಚಾಗಿದೆ. ಡಿಜಿಟಲ್ ವಹಿವಾಟುಗಳು ನೂರು ಪಟ್ಟು ಹೆಚ್ಚಾಗಿವೆ.

ಅದೇ ಸಮಯದಲ್ಲಿ, ಸಾಮಾನ್ಯ ನಾಗರಿಕರಿಗೆ ಸೌಲಭ್ಯಗಳನ್ನು ಸುಧಾರಿಸಲು ಕೇಂದ್ರ ಸರ್ಕಾರವು ಅಷ್ಟೇ ಸಮರ್ಪಣಾ ಭಾವದಿಂದ ಕೆಲಸ ಮಾಡಿದೆ; ನಲ್ಲಿ ನೀರಿನ ಸಂಪರ್ಕಗಳನ್ನು ಒದಗಿಸುವ ವೇಗವು ಸರಾಸರಿ ಹದಿನೈದು ಪಟ್ಟು ಹೆಚ್ಚಾಗಿದೆ. ಹಿಂದೆಂದಿಗಿಂತಲೂ ಆರು ಪಟ್ಟು ವೇಗವಾಗಿ ಜನರಿಗೆ ಅನಿಲ ಸಂಪರ್ಕಗಳನ್ನು (ಗ್ಯಾಸ್ ಕನೆಕ್ಷನ್) ಒದಗಿಸಲಾಗಿದೆ. ಬಡವರಿಗಾಗಿ ಶೌಚಾಲಯಗಳನ್ನು ಹಿಂದಿನ ವೇಗಕ್ಕಿಂತ ನಾಲ್ಕು ಪಟ್ಟು ಹೆಚ್ಚು ವೇಗವಾಗಿ ನಿರ್ಮಿಸಲಾಗಿದೆ. ಬಡವರಿಗೆ ವಸತಿ ಸೌಲಭ್ಯವನ್ನು ಮೂರು ಪಟ್ಟು ವೇಗವಾಗಿ ತಲುಪಿಸಲಾಗಿದೆ. ಆಡಳಿತ ವ್ಯವಸ್ಥೆಯಲ್ಲಿಯೂ ಮಹತ್ವದ ಬದಲಾವಣೆಗಳಾಗಿವೆ. ಅನಗತ್ಯ ನಿಯಮಪಾಲನೆಯ ಸಾವಿರಾರು ಷರತ್ತುಗಳನ್ನು ತೆಗೆದುಹಾಕಲಾಗಿದೆ. ಬಳಕೆಯಲ್ಲಿಲ್ಲದ ನೂರಾರು ಕಾನೂನುಗಳನ್ನು ರದ್ದುಗೊಳಿಸಲಾಗಿದೆ. ಕಳೆದ ಶತಮಾನದ ಕಾನೂನುಗಳನ್ನು ಇಟ್ಟುಕೊಂಡು 21ನೇ ಶತಮಾನದ ಪಯಣವನ್ನು ಮುಂದುವರಿಸಲು ಸಾಧ್ಯವಿಲ್ಲ ಎಂಬುದನ್ನು ಗುರುತಿಸಲಾಗಿದೆ. ಆಧುನಿಕ ಮೂಲಸೌಕರ್ಯ ನಿರ್ಮಾಣಕ್ಕಾಗಿ ಮೆಟ್ರೋ ರೈಲು ಜಾಲವನ್ನು ವಿಸ್ತರಿಸಲಾಗಿದೆ ಮತ್ತು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಲಾಗಿದೆ. ಕಳೆದ ದಶಕದಲ್ಲಿ ಈ ಕಾರ್ಯಗಳ ವೇಗ, ವ್ಯಾಪ್ತಿ ಮತ್ತು ಯಶಸ್ಸು ಸ್ವಾತಂತ್ರ್ಯಾನಂತರ ಮೊದಲ ಬಾರಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಕಂಡುಬಂದಿದೆ ಎಂದು ಲೇಖನ ತಿಳಿಸುತ್ತದೆ. ಇಂತಹ ಸಾಧನೆಗಳು ಗೋಚರಿಸುತ್ತಿರುವಾಗ, ದೇಶದ ಪ್ರಗತಿ ವೇಗವಾಗಿ ಸಾಗುತ್ತಿರುವಾಗ ಮತ್ತು ನಾಗರಿಕರ ಸಾಮರ್ಥ್ಯ ನಿರಂತರವಾಗಿ ಹೆಚ್ಚುತ್ತಿರುವಾಗ, 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಸಂಕಲ್ಪ ಈಡೇರದೆ ಉಳಿಯಲು ಸಾಧ್ಯವಿಲ್ಲ. ಭಾರತ ಇನ್ನು ಮುಂದೆ ನಿಲ್ಲುವುದಿಲ್ಲ; ಅದು ಮುನ್ನಡೆಯುತ್ತಲೇ ಸಾಗಲಿದೆ ಎಂಬುದಕ್ಕೆ ಈ ಅಂಕಿ-ಅಂಶಗಳು ಸಾಕ್ಷಿಯಾಗಿವೆ.

ಸೆಮಿಕಂಡಕ್ಟರ್‌ಗಳಿಂದ ಪರಮಾಣು ಇಂಧನದವರೆಗೆ: ಸ್ವಾವಲಂಬನೆಯ ಹೊಸ ಪಯಣ

ಸ್ವಾವಲಂಬನೆಯತ್ತ ಸಾಗುತ್ತಿರುವ ಭಾರತದ ಪ್ರಯತ್ನಗಳಿಗೆ

ಮುಖಪುಟ ಲೇಖನ

ವೋಕಲ್ ಫಾರ್ ಲೋಕಲ್

ಆಂದೋಲನಕ್ಕೆ ಸ್ಪಷ್ಟ ಕರೆ

ಕಳೆದ 12 ವರ್ಷಗಳಲ್ಲಿ 'ವೋಕಲ್ ಫಾರ್ ಲೋಕಲ್' ನಿಂದ ಮೂಡಿಬಂದ ಸಪ್ತ ಧಾರೆಗಳು

ಕಳೆದ 12 ವರ್ಷಗಳಲ್ಲಿ, ಸ್ವದೇಶಿ ಮತ್ತು 'ವೋಕಲ್ ಫಾರ್ ಲೋಕಲ್' ಕರೆಯು ರಾಷ್ಟ್ರೀಯ ಅಭಿವೃದ್ಧಿಯ ಪ್ರಮುಖ ಚಾಲನಾ ಶಕ್ತಿಯಾಗಿ ರೂಪುಗೊಂಡಿದೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಚರಕ ಮತ್ತು ಖಾದಿ ಹೇಗೆ ಬಲವಾದ ಪ್ರತೀಕಗಳಾಗಿದ್ದವೋ ಮತ್ತು ಸ್ವಾತಂತ್ರ್ಯಾನಂತರದ ಯುಗದಲ್ಲಿ "ಜೈ ಜವಾನ್-ಜೈ ಕಿಸಾನ್" ಘೋಷಣೆಯು ಭಾರತದ ಆಹಾರ ಬಿಕ್ಕಟ್ಟನ್ನು ನಿವಾರಿಸುವ ಸಾಧನವಾಯಿತೋ, ಅದೇ ರೀತಿ 2014 ರಲ್ಲಿ ಪ್ರಾರಂಭಿಸಲಾದ 'ವೋಕಲ್ ಫಾರ್ ಲೋಕಲ್' ಉಪಕ್ರಮವು ಬಹುಮುಖಿ ಪರಿಣಾಮವನ್ನು ಬೀರಿದೆ. ಒಂದೇ ಒಂದು ಕರೆ ಅಭಿವೃದ್ಧಿಯ ಹಲವು ಸೆಲೆಗಳನ್ನು ಹುಟ್ಟುಹಾಕಿದೆ.



ಸೆಮಿಕಂಡಕ್ಟರ್ ಕ್ಷೇತ್ರ ಇತ್ತೀಚಿನ ಉದಾಹರಣೆಯಾಗಿದೆ. ಭಾರತ ಸ್ವಾತಂತ್ರ್ಯ ಪಡೆದ ಕಾಲದಲ್ಲೇ ಜಗತ್ತಿನಲ್ಲಿ ಸೆಮಿಕಂಡಕ್ಟರ್‌ಗಳ ಬಗ್ಗೆ ಚರ್ಚೆಗಳು ಆರಂಭವಾಗಿದ್ದರೂ, ಆ ಸಮಯದಲ್ಲಿ ಭಾರತದಲ್ಲಿ ಯಾವುದೇ ದೊಡ್ಡ ಯೋಜನೆಗಳು ಕಾರ್ಯರೂಪಕ್ಕೆ ಬರಲಿಲ್ಲ. ಇಂದಿನ ಡಿಜಿಟಲ್ ಮತ್ತು ತಂತ್ರಜ್ಞಾನ ಜಗತ್ತಿನಲ್ಲಿ ಚಿಪ್‌ಗಳ ಮಹತ್ವ ಎಷ್ಟಿದೆ ಎಂಬುದನ್ನು ಗಮನಿಸಬಹುದು. ಎಲೆಕ್ಟ್ರಾನಿಕ್ ಸಾಧನಗಳಿಂದ ವೈದ್ಯಕೀಯ ಉಪಕರಣಗಳವರೆಗೆ ಎಲ್ಲದರಲ್ಲೂ ಅವು ಅತ್ಯಗತ್ಯ. ಚಿಪ್‌ಗಳಿಲ್ಲದೆ ಜಗತ್ತಿನ ಅನೇಕ ವ್ಯವಸ್ಥೆಗಳು ಸ್ಥಗಿತಗೊಳ್ಳಬಹುದು. ಈ ಹಿನ್ನೆಲೆಯಲ್ಲಿ ಸ್ವಾವಲಂಬನೆ ಸಾಧಿಸಲು ಭಾರತ ತನ್ನದೇ ಸೆಮಿಕಂಡಕ್ಟರ್ ಘಟಕಗಳನ್ನು ಸ್ಥಾಪಿಸಿದೆ. ಮೂರು ಘಟಕಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದು, ಭಾರತ ರಫ್ತು ಮಾಡುವುದನ್ನೂ

“ಇಂದು ನಾವು ವಿಕಸಿತ ಭಾರತವನ್ನು ನಿರ್ಮಿಸಲು ಎಲ್ಲರೂ ಒಟ್ಟಾಗಿ ಶ್ರಮಿಸುತ್ತಿರುವಾಗ, ರಾಷ್ಟ್ರವು ನಮ್ಮಿಂದ ಕೆಲವು ನಿರೀಕ್ಷೆಗಳನ್ನು ಹೊಂದಿದೆ. ಆ ನಿರೀಕ್ಷೆಯೇ ಸ್ವಾವಲಂಬನೆಯಾಗಿದೆ. ಭಾರತವು ಸ್ವಾವಲಂಬಿಯಾದಾಗ ಮಾತ್ರ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುತ್ತದೆ. ಮತ್ತು ಭಾರತದ ಸ್ವಾವಲಂಬನೆಗೆ 'ಸ್ವದೇಶಿ'ಯ ಮಂತ್ರವು ಅತ್ಯಗತ್ಯವಾಗಿದೆ.

- ನರೇಂದ್ರ ಮೋದಿ, ಪ್ರಧಾನಮಂತ್ರಿ



ಮುಖಪುಟ ಲೇಖನ

ವೋಕಲ್ ಫಾರ್ ಲೋಕಲ್

ಸ್ವದೇಶಿಯ ಪಯಣ
ವಿಕಸಿತ ಭಾರತದತ್ತ ಪ್ರಮುಖ ಮೈಲುಗಲ್ಲುಗಳು

ವರ್ಷ	ಮೈಲಿಗಲ್ಲು
7 ಆಗಸ್ಟ್ 1905	ಬಂಗಾಳ ವಿಭಜನೆಯನ್ನು ವಿರೋಧಿಸಿ ಸ್ವದೇಶಿ ಚಳವಳಿ ಆರಂಭ
2014	'ಮೇಕ್ ಇನ್ ಇಂಡಿಯಾ' ಅಭಿಯಾನ ಆರಂಭ
ಅಕ್ಟೋಬರ್ 2014	'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಕನಿಷ್ಠ ಒಂದು ಖಾದಿ ಉತ್ಪನ್ನವನ್ನಾದರೂ ಖರೀದಿಸುವಂತೆ ಕರೆ
7 ಆಗಸ್ಟ್ 2015	ಮೊದಲ ರಾಷ್ಟ್ರೀಯ ಕೈಮಗ್ಗ ದಿನ ಆಚರಣೆ
ಜೂನ್–ಆಗಸ್ಟ್ 2020	'ಮನ್ ಕಿ ಬಾತ್' ಮೂಲಕ 'ವೋಕಲ್ ಫಾರ್ ಲೋಕಲ್' ಎಂಬ ಕರೆ; 'ಆತ್ಮನಿರ್ಭರ ಭಾರತ' ಅಭಿಯಾನ ಆರಂಭ
24 ಜೂನ್ 2021	'ಟಾಯ್‌ಕಥಾನ್–2021': ಸ್ವದೇಶಿ ಆಟಿಕೆಗಳಿಗೆ ಬೆಂಬಲ ನೀಡುವ ಕರೆ
27 ಫೆಬ್ರವರಿ–2 ಮಾರ್ಚ್ 2021	ಮೊದಲ 'ಖಿಲೋನಾ ಮೇಳ' ಆಯೋಜನೆ
ಡಿಸೆಂಬರ್ 2021	₹76,000 ಕೋಟಿ ವೆಚ್ಚದ 'ಸೆಮಿಕಾನ್ ಇಂಡಿಯಾ' ಕಾರ್ಯಕ್ರಮಕ್ಕೆ ಅನುಮೋದನೆ
ಆಗಸ್ಟ್ 2023	ಖಾದಿ ವಹಿವಾಟು ₹1.3 ಲಕ್ಷ ಕೋಟಿ ದಾಟಿತು ಎಂದು ರಾಷ್ಟ್ರೀಯ ಕೈಮಗ್ಗ ದಿನದ ಭಾಷಣದಲ್ಲಿ ಉಲ್ಲೇಖ
ಜನವರಿ 2024	ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರಾಣಪ್ರತಿಷ್ಠಾಪನೆ; ಸ್ವದೇಶಿ ವಸ್ತುಗಳು ಮತ್ತು ಕಲೆಯ ಬಳಕೆ
6–7 ಮೇ 2025	'ಆಪರೇಷನ್ ಸಿಂಧೂರ': ಸ್ವದೇಶಿ ಶಸ್ತ್ರಾಸ್ತ್ರಗಳ ಸಾಮರ್ಥ್ಯ ಪ್ರದರ್ಶನ
ಅಕ್ಟೋಬರ್ 2025	ಎನ್‌ಸಿಇಆರ್‌ಟಿ ವತಿಯಿಂದ 'ಸ್ವದೇಶಿ: ಸ್ಥಳೀಯ ಉತ್ಪನ್ನಗಳಿಗೆ ಧ್ವನಿಯಾಗೋಣ' ಪಠ್ಯಕ್ರಮದ ಘಟಕ
28 ಫೆಬ್ರವರಿ 2026	ದೇಶದ ಮೊದಲ ಸೆಮಿಕಂಡಕ್ಟರ್ ಘಟಕ ಉದ್ಘಾಟನೆ
31 ಮಾರ್ಚ್ 2026	ಎರಡನೇ ಸೆಮಿಕಂಡಕ್ಟರ್ ಘಟಕ ಉದ್ಘಾಟನೆ
ಜುಲೈ 2026	₹1,27,500 ಕೋಟಿ ವೆಚ್ಚದ 'ಸೆಮಿಕಾನ್ 2.0'ಗೆ ಅನುಮೋದನೆ
ಸೆಪ್ಟೆಂಬರ್ 2026	12 ಸೆಮಿಕಂಡಕ್ಟರ್ ಯೋಜನೆಗಳ ಪೈಕಿ ಐದರಲ್ಲಿ ವಾಣಿಜ್ಯ ಉತ್ಪಾದನೆ ಆರಂಭ

ಆರಂಭಿಸಿದೆ. ಮುಂದಿನ ಏಳೆಂಟು ವರ್ಷಗಳಲ್ಲಿ ಇನ್ನೂ ಐದರಿಂದ ಎಂಟು ಸೆಮಿಕಂಡಕ್ಟರ್ ಘಟಕಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ. ಸ್ವಾವಲಂಬನೆಯ ಅಡಿಪಾಯದ ಮೇಲೆ ವಿಕಸಿತ ಭಾರತವನ್ನು ನಿರ್ಮಿಸುವ ದಾರಿಯಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ.

ಇದಕ್ಕೂ ಮುನ್ನ ದಶಕಗಳ ಕಾಲ ಭಾರತ ಈ ಕ್ಷೇತ್ರದಲ್ಲಿ ಹಿಂದೆ ಉಳಿದಿತ್ತು. ಆದರೆ, 'ಆತ್ಮನಿರ್ಭರ ಭಾರತ'ದ ಸಂಕಲ್ಪವು ಈಗ ಈ ಕ್ಷೇತ್ರದ ಚಿತ್ರಣವನ್ನು ವೇಗವಾಗಿ ಬದಲಿಸುತ್ತಿದೆ. ಭಾರತ ಸೆಮಿಕಂಡಕ್ಟರ್ ಮಿಷನ್ ಅಡಿಯಲ್ಲಿ ಆರು ರಾಜ್ಯಗಳಲ್ಲಿ ಒಟ್ಟು 12 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಈ ಯೋಜನೆಗಳಿಗೆ ₹₹1.64 ಲಕ್ಷ ಕೋಟಿಗೂ ಅಧಿಕ ಹೂಡಿಕೆ ನಿಗದಿಯಾಗಿದೆ. 2026ರ ಫೆಬ್ರವರಿ 28ರಂದು ಪ್ರಧಾನಮಂತ್ರಿ ಮೋದಿ ದೇಶದ ಮೊದಲ ಸೆಮಿಕಂಡಕ್ಟರ್ ಘಟಕವನ್ನು ಉದ್ಘಾಟಿಸಿದರು. 2026ರ ಮಾರ್ಚ್ 31ರಂದು ಎರಡನೇ ಘಟಕವನ್ನು ಉದ್ಘಾಟಿಸಿದರು. 2026ರ ಸೆಪ್ಟೆಂಬರ್ ವೇಳೆಗೆ ಮೈಕ್ರಾನ್, ಕೇನ್ಸ್ ಸೆಮಿಕಾನ್, ಸಿಜಿ ಸೆಮಿ, ಸಿಡಿಐಎಲ್ ಸೆಮಿಕಂಡಕ್ಟರ್ ಮೊಹಾಲಿ ಮತ್ತು ಸುಚಿ ಸೆಮಿಕಾನ್ ಸೂರತ್ ಸೇರಿದಂತೆ ಐದು ಯೋಜನೆಗಳಲ್ಲಿ ವಾಣಿಜ್ಯ ಉತ್ಪಾದನೆ ಆರಂಭವಾಗಿತ್ತು ಎಂದು ಲೇಖನದಲ್ಲಿ ಉಲ್ಲೇಖಿಸಲಾಗಿದೆ. 2026ರ ಜುಲೈನಲ್ಲಿ ಸರ್ಕಾರವು ₹1,27,500 ಕೋಟಿ ವೆಚ್ಚದ 'ಸೆಮಿಕಾನ್ 2.0' ಕಾರ್ಯಕ್ರಮಕ್ಕೂ ಅನುಮೋದನೆ ನೀಡಿದೆ. ಚಿಪ್ ವಿನ್ಯಾಸ, ಉಪಕರಣಗಳು ಮತ್ತು ವಸ್ತುಗಳ ತಯಾರಿಕೆ ಹಾಗೂ ಅತ್ಯಾಧುನಿಕ ಪ್ಯಾಕೇಜಿಂಗ್ ಸಾಮರ್ಥ್ಯವನ್ನು ಹೆಚ್ಚಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಧೋಲೆರಾದಲ್ಲಿರುವ ಟಾಟಾ ಎಲೆಕ್ಟ್ರಾನಿಕ್ಸ್–ಪಿಎಸ್‌ಎಂಸಿ ಚಿಪ್ ತಯಾರಿಕಾ ಘಟಕದಲ್ಲಿಯೂ 2026ರ ಡಿಸೆಂಬರ್ ವೇಳೆಗೆ

ಮುಖಪುಟ ಲೇಖನ

ವೋಕಲ್ ಫಾರ್ ಲೋಕಲ್

ಈ ಅಂಕಿಅಂಶಗಳ ಮೂಲಕ ಸ್ವಾವಲಂಬಿ ಭಾರತದ ಪಯಣವನ್ನು ತಿಳಿಯಿರಿ

501%

ಮಾರಾಟದಲ್ಲಿ ಹೆಚ್ಚಳ

ಖಾದಿ







380%

ಉತ್ಪಾದನೆಯಲ್ಲಿ ಹೆಚ್ಚಳ

56%

ಉದ್ಯೋಗ ಸೃಷ್ಟಿಯಲ್ಲಿ ಹೆಚ್ಚಳ

2.04

ಕೋಟಿ ಜನರಿಗೆ ಉದ್ಯೋಗ ಒದಗಿಸಲಾಗಿದೆ







(2013-14ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ ಹಣಕಾಸು ವರ್ಷ 2025-26)

ಮೊದಲ ಸಿಲಿಕಾನ್ ಉತ್ಪಾದನೆ ಆರಂಭಿಸುವ ಗುರಿಯತ್ತ ಕೆಲಸ ಸಾಗುತ್ತಿದೆ. ಸೆಮಿಕಂಡಕ್ಟರ್ ಗಳು ಎಷ್ಟು ನಿರ್ಣಾಯಕವೋ, ಅದೇ ರೀತಿ ನಿರ್ಣಾಯಕ ಖನಿಜಗಳು ಕೂಡ ಸಮಾನ ಪ್ರಾಮುಖ್ಯತೆಯನ್ನು ಹೊಂದಿವೆ. ತಂತ್ರಜ್ಞಾನ ಕ್ಷೇತ್ರಕ್ಕೆ ಇಂಧನದ ಅಗತ್ಯ ದಿನೇದಿನೇ ಹೆಚ್ಚುತ್ತಿದೆ. ಇಂಧನವಿಲ್ಲದೆ ಹೊಸ ತಂತ್ರಜ್ಞಾನ ಜಗತ್ತನ್ನು ಮುನ್ನಡೆಸುವುದು ಕಷ್ಟ. ಚಿಪ್‌ಗಳು, ಕೃತಕ ಬುದ್ಧಿಮತ್ತೆ (ಎಐ) ಮತ್ತು ದತ್ತಾಂಶ ಕೇಂದ್ರಗಳು ಇವೆಲ್ಲಕ್ಕೂ ಅಪಾರ ಪ್ರಮಾಣದ ವಿದ್ಯುತ್ ಬೇಕಾಗುತ್ತದೆ. ಆದ್ದರಿಂದ ಇಂಧನ ಭದ್ರತೆ ಇಂದಿನ ತುರ್ತು ಅಗತ್ಯವಾಗಿದೆ. ಈ ದಿಕ್ಕಿನಲ್ಲಿ ಭಾರತ ಈಗಾಗಲೇ ಮಹತ್ವದ ಕ್ರಮಗಳನ್ನು ಕೈಗೊಂಡಿದೆ. ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾದ ರಾಷ್ಟ್ರೀಯ ನಿರ್ಣಾಯಕ ಖನಿಜಗಳ ಮಿಷನ್ ಮತ್ತು ನಿರ್ಣಾಯಕ ಖನಿಜ ಕಾರಿಡಾರ್‌ನಂತಹ ಉಪಕ್ರಮಗಳ ಮೂಲಕ ಭಾರತ ಸ್ಪಷ್ಟ ಕ್ರಮಗಳನ್ನು ತೆಗೆದುಕೊಂಡಿದೆ. ಈ ಕ್ಷೇತ್ರದಲ್ಲಿ ಜಗತ್ತಿನ ಹಲವು ರಾಷ್ಟ್ರಗಳು ಈಗ ಭಾರತದ ಮೇಲೆ ವಿಶ್ವಾಸವಿಡಲು ಆರಂಭಿಸಿವೆ. ತಂತ್ರಜ್ಞಾನ ಮತ್ತು ಸ್ವಾವಲಂಬನೆಯ ಪಯಣದಲ್ಲಿ ಇಂಧನ ಭದ್ರತೆಯೂ ಮತ್ತೊಂದು ಪ್ರಮುಖ ಆಧಾರಸ್ತಂಭವಾಗಿ ಹೊರಹೊಮ್ಮಿದೆ. ಪರಮಾಣು ಶಕ್ತಿ ವಲಯಕ್ಕಾಗಿ ಭಾರತವು ಮಹತ್ವಾಕಾಂಕ್ಷೆಯ ಗುರಿಯನ್ನು

“ಇತ್ತೀಚಿನ ವರ್ಷಗಳಲ್ಲಿ ನಮ್ಮ ಹಬ್ಬಗಳೊಂದಿಗೆ ಹೊಸ ಸಂಕಲ್ಪವೊಂದು ಬೆಸೆದುಕೊಂಡಿದೆ. ಅದುವೇ ‘ವೋಕಲ್ ಫಾರ್ ಲೋಕಲ್’ ಎಂಬುದು. ಈಗ ನಮ್ಮ ಹಬ್ಬಗಳ ಸಂಭ್ರಮದಲ್ಲಿ ಸ್ಥಳೀಯ ಕುಶಲಕರ್ಮಿಗಳು, ಕರಕುಶಲ ವಸ್ತುಗಳ ತಯಾರಕರು ಮತ್ತು ವ್ಯಾಪಾರಿಗಳನ್ನೂ ಸೇರಿಸಿಕೊಳ್ಳುತ್ತಿದ್ದೇವೆ. ಈ ಅಭಿಯಾನಕ್ಕೆ ನಾವು ಇನ್ನಷ್ಟು ವೇಗ ನೀಡಬೇಕು.

- ನರೇಂದ್ರ ಮೋದಿ, ಪ್ರಧಾನಮಂತ್ರಿ

ಎಲೆಕ್ಟ್ರಾನಿಕ್ಸ್

ಉತ್ಪಾದನಾ ಮೌಲ್ಯ
2025-26 ರಲ್ಲಿ

₹13.11

ಲಕ್ಷ ಕೋಟಿ (2014-15 ರಲ್ಲಿ ₹1.9 ಲಕ್ಷ ಕೋಟಿಗಳಿಗೆ ಹೋಲಿಸಿದರೆ); ಎಲೆಕ್ಟ್ರಾನಿಕ್ಸ್ ಉತ್ಪಾದನೆಯಲ್ಲಿ 7 ರಷ್ಟು ಹೆಚ್ಚಳ.



ಎಲೆಕ್ಟ್ರಾನಿಕ್ಸ್ ರಫ್ತಿನಲ್ಲಿ
2025-26 ರಲ್ಲಿ

₹4.24

ಲಕ್ಷ ಕೋಟಿ (2014-15 ರಲ್ಲಿ ₹38,000 ಕೋಟಿಗಳಿಗೆ ಹೋಲಿಸಿದರೆ); 11 ರಷ್ಟು ಹೆಚ್ಚಳ.

ಸೆಮಿಕಂಡಕ್ಟರ್‌ಗಳು

ಜುಲೈ 15, 2026 ರಂದು

₹1,27,500

ಕೋಟಿ ವೆಚ್ಚದಲ್ಲಿ 'ಸೆಮಿಕಾನ್ 2.0' ಅನುಮೋದಿಸಲಾಗಿದೆ.



ಹೂಡಿಕೆಯು

₹1.64

ಲಕ್ಷ ಕೋಟಿಗಳಿಗೂ ಅಧಿಕವಾಗಿದೆ. ಆರು ರಾಜ್ಯಗಳಲ್ಲಿ 12 ಸೆಮಿಕಂಡಕ್ಟರ್ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ



ನಿಗದಿಪಡಿಸಿದೆ: 2047 ರ ವೇಳೆಗೆ 100 ಗಿಗಾವ್ಯಾಟ್ ಪರಮಾಣು ವಿದ್ಯುತ್ ಸಾಮರ್ಥ್ಯವನ್ನು ಸಾಧಿಸುವುದು. ಸಂಸತ್ ನಲ್ಲಿ 'ಶಾಂತಿ ಕಾಯ್ದೆ' ಅಂಗೀಕಾರವಾಗುವ ಮೂಲಕ ಈ ಹೊಸ ಗುರಿಯ ಹಾದಿ ಸುಗಮವಾಗಿದೆ. ಈ ದಶಕದೊಳಗೆ ಐದು ಹೊಸ ಪರಮಾಣು ರಿಯಾಕ್ಟರ್ ಗಳನ್ನು ಕಾರ್ಯಗತಗೊಳಿಸುವ ಗುರಿಯನ್ನು ಸಹ ಹೊಂದಲಾಗಿದೆ. ಈ ವರ್ಷ, ಭಾರತವು ಫಾಸ್ಟ್ ಬ್ರೀಡರ್ ಪರಮಾಣು ತಂತ್ರಜ್ಞಾನದಲ್ಲಿ ಪರಿಣತಿ ಸಾಧಿಸುವ ಮೂಲಕ ಮಹತ್ವದ ಮೈಲಿಗಲ್ಲನ್ನು ಸಾಧಿಸಿದೆ, ಆ ಮೂಲಕ ಪರಮಾಣು ಇಂಧನದಲ್ಲಿ ಸ್ವಾವಲಂಬನೆ ಸಾಧಿಸುವ ದೇಶದ ಪ್ರಯತ್ನದಲ್ಲಿ ಯಶಸ್ಸು ಸಿಕ್ಕಿದೆ.

ಸ್ವದೇಶೀಕರಣದ ಶಕ್ತಿ: ಸ್ವಾವಲಂಬಿಯಾದ ರಾಷ್ಟ್ರೀಯ ಭದ್ರತಾ ವ್ಯವಸ್ಥೆ

ಸ್ವಾವಲಂಬನೆ ಆರ್ಥಿಕ ಸಮೃದ್ಧಿಯ ಅಡಿಪಾಯ ಮಾತ್ರವಲ್ಲ; ಅದು ರಾಷ್ಟ್ರೀಯ ಭದ್ರತೆಯ ಬೆನ್ನೆಲುಬೂ ಆಗಿದೆ. 'ಆಪರೇಷನ್ ಸಿಂಧೂರ' ಈ ವಿಷಯಕ್ಕೆ ಅತ್ಯಂತ ಪ್ರಬಲ ಸಾಕ್ಷಿಯಾಗಿದೆ. ಪಹಲ್ಗಾಮ್‌ನಲ್ಲಿ ನಿರಪರಾಧ ನಾಗರಿಕರನ್ನು ಕ್ರೂರವಾಗಿ ಹತ್ಯೆ ಮಾಡಿದ ಬಳಿಕ, ಭಾರತ ಭಯೋತ್ಪಾದನೆಯ ವಿರುದ್ಧ ನಿರ್ಣಾಯಕ ಕ್ರಮ ಕೈಗೊಂಡಿತು. 2025ರ ಮೇ 6–7ರ ರಾತ್ರಿ ಪಾಕಿಸ್ತಾನದೊಳಗಿನ ಭಯೋತ್ಪಾದಕ ನೆಲೆಗಳ ಮೇಲೆ ನಿಖರ ದಾಳಿಗಳನ್ನು ನಡೆಸಲು 'ಆಪರೇಷನ್ ಸಿಂಧೂರ' ಆರಂಭಿಸಲಾಯಿತು. ಈ ಕಾರ್ಯಾಚರಣೆಯಲ್ಲಿ ಭಾರತದ ಸ್ವದೇಶಿ ಶಸ್ತ್ರಾಸ್ತ್ರಗಳ ಸಾಮರ್ಥ್ಯವನ್ನು ಜಗತ್ತೇ ಕಂಡಿತು. ಭಾರತದ ವಾಯು ರಕ್ಷಣಾ ವ್ಯವಸ್ಥೆಗಳು, ಸ್ವದೇಶಿ ಕ್ಷಿಪಣಿಗಳು ಮತ್ತು ದೇಶದಲ್ಲೇ ತಯಾರಾದ ಡ್ರೋನ್‌ಗಳು 'ಆತ್ಮನಿರ್ಭರ ಭಾರತ' ಎಂಬುದು ಕೇವಲ ಆರ್ಥಿಕ ಘೋಷಣೆಯಲ್ಲ; ಅದು ರಾಷ್ಟ್ರೀಯ ಭದ್ರತೆಯ ಭರವಸೆ ಎಂಬುದನ್ನು ಪ್ರದರ್ಶಿಸಿದವು. ಬ್ರಹ್ಮೋಸ್‌ನಂತಹ ಸ್ವದೇಶಿ ಕ್ಷಿಪಣಿಗಳು

ಮುಖಪುಟ ಲೇಖನ

ವೋಕಲ್ ಫಾರ್ ಲೋಕಲ್

ಮೊಬೈಲ್ ಫೋನ್

ಮೊಬೈಲ್ ಉತ್ಪಾದನಾ ಮೌಲ್ಯ **₹6.27** ಲಕ್ಷ ಕೋಟಿ

2025-26 ನೇ ಹಣಕಾಸು ವರ್ಷದಲ್ಲಿ (2014-15 ರಲ್ಲಿ ₹18,000 ಕೋಟಿಗಳಿಗೆ ಹೋಲಿಸಿದರೆ); ಇದು 33 ರಷ್ಟು ಹೆಚ್ಚಳವನ್ನು ತೋರಿಸುತ್ತದೆ.



ರಫ್ತು ಮೌಲ್ಯ **₹2.60** ಲಕ್ಷ ಕೋಟಿ

2025-26 ನೇ ಹಣಕಾಸು ವರ್ಷದಲ್ಲಿ (2014-15 ರಲ್ಲಿ ₹1,566 ಕೋಟಿಗಳಿಗೆ ಹೋಲಿಸಿದರೆ); ಇದು 165 ರಷ್ಟು ಹೆಚ್ಚಳವಾಗಿದೆ.

ಮೊಬೈಲ್ ಉತ್ಪಾದನಾ ಘಟಕಗಳ ಸಂಖ್ಯೆ





ಮೊಬೈಲ್ ಉತ್ಪಾದನಾ ವಲಯದಲ್ಲಿರುವ ಒಟ್ಟು **12** ಲಕ್ಷ ಉದ್ಯೋಗಗಳಲ್ಲಿ ಸುಮಾರು 70% ರಷ್ಟು ಭಾಗ ಮಹಿಳೆಯರದ್ದಾಗಿದೆ.



ಭಾರತದಲ್ಲಿ ಬಳಸಲಾಗುವ ಮೊಬೈಲ್ ಫೋನ್‌ಗಳಲ್ಲಿ **99.2%** ರಷ್ಟು ಈಗ ದೇಶದಲ್ಲೇ ತಯಾರಿಸಲ್ಪಡುತ್ತಿವೆ.

ಉತ್ಪಾದನಾ ಪ್ರಮಾಣದ ದೃಷ್ಟಿಯಿಂದ, ಭಾರತವು ವಿಶ್ವದಲ್ಲೇ ಎರಡನೇ ಅತಿ ದೊಡ್ಡ ಮೊಬೈಲ್ ಫೋನ್ ತಯಾರಕ ರಾಷ್ಟ್ರವಾಗಿದೆ.

ಭಾರತದ ಎದುರಾಳಿಗಳಲ್ಲಿ ಭಯ ಮೂಡಿಸಿವೆ. ಈ ಕಾರ್ಯಾಚರಣೆಯು ಶತ್ರುಗಳ ಮನಸ್ಸಿನಲ್ಲಿ ಆತಂಕ ಮೂಡಿಸಿದೆ. ಪಾಕಿಸ್ತಾನದಲ್ಲಿ ಬ್ರಹ್ಮೋಸ್ ಕ್ಷಿಪಣಿಯ ಸದ್ದೇ ಅಲ್ಲಿನ ಜನರ ನಿದ್ದೆ ಕಸಿಯಲು ಸಾಕು ಎಂದು ಪ್ರಧಾನಮಂತ್ರಿ ಮೋದಿ ಆಗಾಗ್ಗೆ ಹೇಳುತ್ತಾರೆ.

ರಾಷ್ಟ್ರೀಯ ಭದ್ರತೆಯ ಈ ಸ್ವಾವಲಂಬನೆಯಲ್ಲಿ ಮಾನವೀಯ ದೃಷ್ಟಿಕೋನವೂ ಇದೆ. ಕಳೆದ 25 ವರ್ಷಗಳಿಂದ ಪ್ರಧಾನಮಂತ್ರಿ ಮೋದಿ ಅವರು ಪ್ರತಿವರ್ಷ ಸೈನಿಕರೊಂದಿಗೆ ದೀಪಾವಳಿ ಆಚರಿಸುತ್ತಿದ್ದಾರೆ. ಈ ನಡೆ ಭಾರತೀಯರ ಮನೋಬಲವನ್ನು ಹೆಚ್ಚಿಸುವುದರ ಜೊತೆಗೆ ದೇಶದ ಗಡಿಗಳ ಭದ್ರತೆಯ ಸಂದೇಶವನ್ನೂ ಸಾರುತ್ತದೆ.

“ಜಗತ್ತಿನಲ್ಲಿ ಅನೇಕ ವಸ್ತುಗಳು ಕಡಿಮೆ ಬೆಲೆಗೆ ಮತ್ತು ಬೇಗನೆ ದೊರೆಯಬಹುದು. ಆದರೆ, ಅವು ನಮ್ಮ ಸಾಮರ್ಥ್ಯವನ್ನು ಬೆಳೆಸುವುದಿಲ್ಲ; ಅದನ್ನು ಪರೀಕ್ಷಿಸುವುದೂ ಇಲ್ಲ. ಆದ್ದರಿಂದ ನಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು ಮತ್ತು ನಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಬೇಕು. ‘ಆತ್ಮನಿರ್ಭರ ಭಾರತ’ ನಿರ್ಮಿಸುವ ದೃಢ ಸಂಕಲ್ಪದೊಂದಿಗೆ ನಾವು ಮುನ್ನಡೆಯುತ್ತಿದ್ದೇವೆ.”

- ನರೇಂದ್ರ ಮೋದಿ, ಪ್ರಧಾನಮಂತ್ರಿ

ರಕ್ಷಣಾ ವಲಯ

ಉತ್ಪಾದನೆ

2025-26ನೇ ಹಣಕಾಸು ವರ್ಷದಲ್ಲಿ

₹1.78

ಲಕ್ಷ ಕೋಟಿ, 2014-15ನೇ ಹಣಕಾಸು ವರ್ಷದ ₹46,429 ಕೋಟಿಗಳಿಗೆ ಹೋಲಿಸಿದರೆ ಸುಮಾರು 16% ರಷ್ಟು ಹೆಚ್ಚಳವಾಗಿದೆ.





ಆಟಿಕೆಗಳು

2025-26 ನೇ ಹಣಕಾಸು ವರ್ಷದಲ್ಲಿ

$384.7

ಮಿಲಿಯನ್ ಮೌಲ್ಯದ ರಫ್ತು ದಾಖಲಾಗಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ರಫ್ತು

239%

ರಷ್ಟು ಬೆಳವಣಿಗೆ ಕಂಡಿದೆ.

ಭಾರತದಿಂದ ರಫ್ತುಗೊಳ್ಳುವ ಆಟಿಕೆಗಳು

50 ಕ್ಕೂ

ಹೆಚ್ಚು ದೇಶಗಳನ್ನು ತಲುಪುತ್ತಿವೆ.



ಶತಮಾನಗಳಷ್ಟು ಹಳೆಯ ಪರಂಪರೆ.... ಸ್ವದೇಶಿ

ಸ್ವದೇಶಿಯ ಮನೋಭಾವ ಭಾರತಕ್ಕೆ ಹೊಸದೇನಲ್ಲ. 1905ರ ಆಗಸ್ಟ್ 7ರಂದು ಬಂಗಾಳ ವಿಭಜನೆಯ ಘೋಷಣೆಯ ಬಳಿಕ ಸ್ವದೇಶಿ ಚಳವಳಿ ಆರಂಭವಾಯಿತು. ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ ಸ್ವದೇಶಿ ಉತ್ಪನ್ನಗಳನ್ನು ಬಳಸಲು ಭಾರತೀಯರು ಸಂಕಲ್ಪ ಮಾಡಿದರು. ಈ ಚಳವಳಿ ಕೇವಲ ರಾಜಕೀಯ ಚಳವಳಿಯಾಗಿರಲಿಲ್ಲ. ಅದು ಬ್ರಿಟಿಷರ ಆರ್ಥಿಕ ಹಿತಾಸಕ್ತಿಗಳಿಗೆ ಹೊಡೆತ ನೀಡಿತು. 1905ರಿಂದ 1908ರ ಅವಧಿಯಲ್ಲಿ ಆಮದು ಪ್ರಮಾಣ ಗಣನೀಯವಾಗಿ ಕುಸಿಯಿತು. ಜೊತೆಗೆ, ದೇಶದಲ್ಲಿ ಸ್ವದೇಶಿ ಜವಳಿ ಗಿರಣಿಗಳು, ಸಾಬೂನು ಮತ್ತು ಬೆಂಕಿಪೊಟ್ಟಣ ಕಾರ್ಖಾನೆಗಳು, ಚರ್ಮ ಹದಗೊಳಿಸುವ ಘಟಕಗಳು, ಬ್ಯಾಂಕುಗಳು ಮತ್ತು ವಿಮಾ ಕಂಪನಿಗಳು ಸ್ಥಾಪನೆಯಾಗಲು ಅಡಿಪಾಯ ಹಾಕಿತು. ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದ "ವೋಕಲ್ ಫಾರ್ ಲೋಕಲ್" (2014ರಿಂದ) ಮತ್ತು 'ಆತ್ಮನಿರ್ಭರ ಭಾರತ' ಅಭಿಯಾನಗಳು, ವಿಶೇಷವಾಗಿ ಕೋವಿಡ್-19 ಸಾಂಕ್ರಾಮಿಕದ ಅವಧಿಯಲ್ಲಿ, ಹೊಸ ಸ್ವದೇಶಿ ಚಳವಳಿಗೆ ಬಲ ನೀಡಿದವು. ಈ ದೂರದೃಷ್ಟಿಯಿಂದ ಪ್ರೇರಿತವಾಗಿ ಕೇಂದ್ರ ಸರ್ಕಾರವು 2015ರ ಆಗಸ್ಟ್ 7ರಂದು ರಾಷ್ಟ್ರೀಯ ಕೈಮಗ್ಗ ದಿನವನ್ನು ಆರಂಭಿಸಿತು. ಇತ್ತೀಚೆಗೆ ಎನ್‌ಸಿಇಆರ್‌ಟಿ 'ಸ್ವದೇಶಿ: ವೋಕಲ್ ಫಾರ್ ಲೋಕಲ್' ಎಂಬ ಶೀರ್ಷಿಕೆಯ ವಿಶೇಷ ಪಠ್ಯಕ್ರಮವನ್ನೂ ಸಿದ್ಧಪಡಿಸಿದೆ. ಕೆಂಪುಕೋಟೆಯ ಮೇಲಿನಿಂದ ಪ್ರಧಾನಮಂತ್ರಿ ಮೋದಿ ಅವರೇ ಈ ವಿಷಯವನ್ನು ಉಲ್ಲೇಖಿಸಿದ್ದಾರೆ.

ರಾಷ್ಟ್ರೀಯ ಪ್ರಗತಿಗೆ ಆತ್ಮವಿಶ್ವಾಸ ಮತ್ತು ರಾಷ್ಟ್ರೀಯ ಹೆಮ್ಮೆಯ ಭಾವನೆ ಅಗತ್ಯ. ಅದಕ್ಕಾಗಿಯೇ ಭಾರತವು

ಮುಖಪುಟ ಲೇಖನ

ವೋಕಲ್ ಫಾರ್ ಲೋಕಲ್

ವಿದೇಶಿ ನೇರ ಹೂಡಿಕೆ



2013-14 ನೇ ಹಣಕಾಸು ವರ್ಷದ 36.05 ಬಿಲಿಯನ್ ಯುಎಸ್ ಡಾಲರ್‌ಗಳಿಗೆ ಹೋಲಿಸಿದರೆ, 2024-25 ನೇ ಹಣಕಾಸು ವರ್ಷದಲ್ಲಿ

$81.04

ಬಿಲಿಯನ್ ಯುಎಸ್ ಡಾಲರ್ (ತಾತ್ಕಾಲಿಕ) ಹೂಡಿಕೆ ದಾಖಲಾಗಿದೆ.

ಕಳೆದ 11 ವರ್ಷಗಳಲ್ಲಿ

163%

ರಷ್ಟು ಹೆಚ್ಚಳ ದಾಖಲಾಗಿದೆ.

ಸುಲಭ ವ್ಯವಹಾರದ ಶ್ರೇಯಾಂಕ



63ನೇ ಸ್ಥಾನ
2019ನೇ ಹಣಕಾಸು ವರ್ಷ

142ನೇ ಸ್ಥಾನ
2014ನೇ ಹಣಕಾಸು ವರ್ಷ

ಜವಳಿ ರಫ್ತು

₹3,25,339

ಕೋಟಿ - 2025-26 ನೇ ಸಾಲಿಗೆ ಅಂದಾಜಿಸಲಾದ ಭಾರತದ ಜವಳಿ ಮತ್ತು ಉಡುಪುಗಳ ರಫ್ತು (ಕೈಮಗ್ಗ ಉತ್ಪನ್ನಗಳು ಸೇರಿದಂತೆ).



1.8%
ಬೆಳವಣಿಗೆ

2024-25 ನೇ ಹಣಕಾಸು ವರ್ಷದಲ್ಲಿ

₹3,19,573.2
ಕೋಟಿ.

ಇನ್ನು ಮುಂದೆ ಇತರ ರಾಷ್ಟ್ರಗಳನ್ನು ಅವಲಂಬಿಸಿ ಬದುಕದೆ ಸ್ವಾವಲಂಬಿಯಾಗಬೇಕು ಎಂಬ ಸಂಕಲ್ಪಕ್ಕೆ ಕೇಂದ್ರ ಸರ್ಕಾರ ಬದ್ಧವಾಗಿದೆ. ಜಗತ್ತಿನಲ್ಲಿ ಅನೇಕ ಉತ್ಪನ್ನಗಳು ಕಡಿಮೆ ಬೆಲೆಗೆ ಅಥವಾ ಬೇಗನೆ ದೊರೆಯಬಹುದು. ಆದರೆ ಅವುಗಳ ಮೇಲಿನ ಅವಲಂಬನೆಯು ದೇಶದ ಸ್ವಂತ ಸಾಮರ್ಥ್ಯವನ್ನು ಬೆಳೆಸುವುದಿಲ್ಲ; ನಾಗರಿಕರ ಸಾಮರ್ಥ್ಯವನ್ನು ಅಳೆಯುವ ಮಾನದಂಡವೂ ಆಗುವುದಿಲ್ಲ. ಪ್ರಧಾನಮಂತ್ರಿ ಮೋದಿ ಅವರು ಆಗಾಗ್ಗೆ ಹೇಳುವಂತೆ, ನಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು ಮತ್ತು ನಮ್ಮ ಹಿತಾಸಕ್ತಿಗಳನ್ನು ನಾವೇ ರಕ್ಷಿಸಿಕೊಳ್ಳಬೇಕು. ಈ ಕಾರಣಕ್ಕಾಗಿಯೇ 'ಆತ್ಮನಿರ್ಭರ ಭಾರತ'ದ ಸಂಕಲ್ಪದೊಂದಿಗೆ ಮುನ್ನಡೆಯಲಾಗುತ್ತಿದೆ. 'ಮೇಕ್ ಇನ್ ಇಂಡಿಯಾ', ಸ್ವದೇಶಿ ಮತ್ತು 'ವೋಕಲ್ ಫಾರ್ ಲೋಕಲ್' ಮುಂತಾದ ಉಪಕ್ರಮಗಳು ಈ ಸಮಗ್ರ ದೂರದೃಷ್ಟಿಯ ಫಲವಾಗಿವೆ. ಇಂದು ಪ್ರತಿಯೊಬ್ಬ ಭಾರತೀಯನೂ ಈ ಆಂದೋಲನಗಳೊಂದಿಗೆ ಭಾವನಾತ್ಮಕವಾಗಿ ಬೆಸೆದುಕೊಳ್ಳುತ್ತಿದ್ದಾನೆ.

ಇಂದು, ದೇಶದ 140 ಕೋಟಿ ಜನರ ಮುಂದಿರುವ ಏಕೈಕ ಮಂತ್ರ ಸಮೃದ್ಧ ಭಾರತ. ಅಮೃತ ಮಹೋತ್ಸವದ ವರ್ಷವನ್ನು ಮೀರಿಯೂ ಈ ಮನೋಭಾವ ಬೆಳೆದಿದೆ. ಅಸಂಖ್ಯಾತ ಜನರ ತ್ಯಾಗದಿಂದ ಭಾರತಕ್ಕೆ ಸ್ವಾತಂತ್ರ್ಯ ದೊರೆತಿದ್ದರೆ, ಅದೇ ಜನರ ಸಾಮೂಹಿಕ ಸಂಕಲ್ಪ ಮತ್ತು ಪರಿಶ್ರಮದಿಂದ, 'ವೋಕಲ್ ಫಾರ್ ಲೋಕಲ್' ಹಾಗೂ ಸ್ವದೇಶಿಯ ಮಂತ್ರವನ್ನು ಅಳವಡಿಸಿಕೊಳ್ಳುವ ಮೂಲಕ, ಭಾರತವನ್ನು ಸಮೃದ್ಧ ರಾಷ್ಟ್ರವನ್ನಾಗಿ ರೂಪಿಸಬಹುದು. ಸ್ವಾತಂತ್ರ್ಯಾನಂತರದ ಭಾರತವನ್ನು ನಿರ್ಮಿಸಿದ ಹಿಂದಿನ ಪೀಳಿಗೆಯು ಈಗ ದೇಶವನ್ನು ಸಮೃದ್ಧಿಯತ್ತ ಕೊಂಡೊಯ್ಯುವ ಹೊಸ ಹೆಜ್ಜೆಗಳನ್ನು ಇಡಬೇಕಾಗಿದೆ. ಇದು ಇಂದಿನ ಅಗತ್ಯವಾಗಿದೆ. ಕೆಂಪುಕೋಟೆಯ ಮೇಲಿನಿಂದ ಪ್ರಧಾನಮಂತ್ರಿ ಮೋದಿ ಅವರು 'ವೋಕಲ್ ಫಾರ್

ಮುಖಪುಟ ಲೇಖನ

ವೋಕಲ್ ಫಾರ್ ಲೋಕಲ್

ಪರಮಾಣು ಇಂಧನ

ಪರಮಾಣು ಶಕ್ತಿ ಮಿಷನ್

- 2047ರ ವೇಳೆಗೆ ಭಾರತವು ಪರಮಾಣು ಇಂಧನ ಸಾಮರ್ಥ್ಯವನ್ನು 100 ಗಿಗಾವ್ಯಾಟ್‌ಗೆ ಹೆಚ್ಚಿಸುವ ಗುರಿಯನ್ನು ಹೊಂದಿದೆ.

ಸ್ಥಾಪಿತ ಸಾಮರ್ಥ್ಯ

- ಜುಲೈ 31, 2026 ರ ವೇಳೆಗೆ 8.78 ಗಿಗಾವ್ಯಾಟ್ ಪರಮಾಣು ಇಂಧನ ಸಾಮರ್ಥ್ಯವನ್ನು ಹೊಂದಿದೆ.



ಪಿಎಲ್‌ಐ
(ಉತ್ಪಾದನೆ ಆಧಾರಿತ ಪ್ರೋತ್ಸಾಹ ಧನ)



₹2.40 ಲಕ್ಷ ಕೋಟಿಗೂ ಹೆಚ್ಚು ಹೂಡಿಕೆ ಮಾಡಲಾಗಿದೆ.



14.15 ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಿವೆ.

₹15.12 ಲಕ್ಷ ಕೋಟಿಗೂ ಹೆಚ್ಚು ರಫ್ತು ನಡೆದಿದೆ.

ಆಟೋಮೊಬೈಲ್

2021ರಲ್ಲಿ 22.65 ಮಿಲಿಯನ್ ಯುನಿಟ್‌ಗಳಿಗೆ ಹೋಲಿಸಿದರೆ, 2025ರಲ್ಲಿ


31.03

ಮಿಲಿಯನ್ ಯುನಿಟ್‌ಗಳ ವಾಹನ ಉತ್ಪಾದನೆ ಆಗಿದೆ.

ಆಟೋಮೊಬೈಲ್ ವಲಯದಿಂದ

3

ಕೋಟಿ ನೇರ ಮತ್ತು ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗಿವೆ.



ಲೋಕಲ್' ಎಂಬ ಮಂತ್ರವನ್ನು ಮುಂದಕ್ಕೆ ಕೊಂಡೊಯ್ಯುವಂತೆ ಕರೆ ನೀಡಿದರು: "ಇಂದು ನಾನು ಎಲ್ಲರಿಗೂ ಮನವಿ ಮಾಡುತ್ತೇನೆ. ವಿಶೇಷವಾಗಿ ದೇಶದ ಎಲ್ಲ ಪ್ರಭಾವಿ ವ್ಯಕ್ತಿಗಳನ್ನು ಉದ್ದೇಶಿಸಿ ಮಾತನಾಡಲು ಬಯಸುತ್ತೇನೆ. ಈ ಮಂತ್ರವನ್ನು ಮುಂದಕ್ಕೆ ಕೊಂಡೊಯ್ಯಲು ನನಗೆ ಸಹಕರಿಸಿ. ಎಲ್ಲ ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳಿಗೆ ನಾನು ಮನವಿ ಮಾಡುತ್ತೇನೆ: ಬನ್ನಿ, ನಾವೆಲ್ಲರೂ ಒಂದಾಗೋಣ. ಇದು ಯಾವುದೋ ಒಂದು ರಾಜಕೀಯ ಪಕ್ಷದ ಕಾರ್ಯಸೂಚಿಯಲ್ಲ. ಭಾರತ ನಮ್ಮೆಲ್ಲರ ದೇಶ. ಪ್ರತಿಯೊಬ್ಬ ನಾಗರಿಕನ ಜೀವನದಲ್ಲಿ 'ವೋಕಲ್ ಫಾರ್ ಲೋಕಲ್' ಎಂಬುದು ಮಾರ್ಗದರ್ಶಕ ತತ್ವವಾಗಲಿ. ಭಾರತೀಯ ನಾಗರಿಕರ ಪರಿಶ್ರಮದಿಂದ ತಯಾರಾದ, ಭಾರತದ ಮಣ್ಣಿನ ಪರಿಮಳವನ್ನು ಹೊಂದಿರುವ ಮತ್ತು ನಮ್ಮ ಸ್ವಾವಲಂಬನೆಯ ಸಂಕಲ್ಪವನ್ನು ಬಲಪಡಿಸುವ ಭಾರತದಲ್ಲೇ ತಯಾರಾದ ಉತ್ಪನ್ನಗಳನ್ನು ಮಾತ್ರ ಖರೀದಿಸಿ ಬಳಸುವ ಸಂಕಲ್ಪ ಮಾಡೋಣ. ಇದನ್ನು ನಮ್ಮ ಸಾಮೂಹಿಕ ಪ್ರತಿಜ್ಞೆಯನ್ನಾಗಿ ಮಾಡೋಣ. ಆಗ ನಾವು ಜಗತ್ತನ್ನೇ ಪರಿವರ್ತಿಸುವುದು ಸಾಧ್ಯವಾಗುತ್ತದೆ."

ಖಾದಿಯಿಂದ ಆಟಿಕೆಗಳವರೆಗೆ: ತಳಮಟ್ಟದ ಬದಲಾವಣೆಯ ಕಥೆಗಳು

ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಚರಕ ಮತ್ತು ಖಾದಿ ಜನಾಂದೋಲನದ ಸಂಕೇತಗಳಾಗಿದ್ದವು. ಪ್ರಧಾನಮಂತ್ರಿ ಮೋದಿ ಅವರ ಕರೆಯ ಬಳಿಕ ಖಾದಿ ಮತ್ತೊಮ್ಮೆ ರಾಷ್ಟ್ರೀಯ ಫ್ಯಾಷನ್‌ನ ಸಂಕೇತವಾಗಿ ಹೊರಹೊಮ್ಮಿದೆ. ಅದರ ವ್ಯಾಪ್ತಿ ಈಗ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ಮಹಾತ್ಮ ಗಾಂಧಿಯವರಿಂದ ಪ್ರೇರಿತರಾದ ಮೆಕ್ಸಿಕೊದ ಓವಾಕ್ಸಾಕಾ ಪ್ರದೇಶದ ಯುವಕನೊಬ್ಬ ಭಾರತಕ್ಕೆ ಭೇಟಿ ನೀಡಿದ್ದ. ತಾಯ್ನಾಡಿಗೆ ಹಿಂದಿರುಗಿದ ಬಳಿಕ

ಮುಖಪುಟ ಲೇಖನ

ವೋಕಲ್ ಫಾರ್ ಲೋಕಲ್



ಡಿಜಿಟಲ್ ಆರ್ಥಿಕತೆ

ಇದು ಭಾರತದ ಜಿಡಿಪಿಗೆ ಸರಿಸುಮಾರು

12-14%

ಕೊಡುಗೆ ನೀಡುತ್ತದೆ ಮತ್ತು ಮುಂದಿನ ದಶಕದಲ್ಲಿ ಈ ಪ್ರಮಾಣವು 20% ತಲುಪುವ ನಿರೀಕ್ಷೆಯಿದೆ.





'ಸ್ಟೇಟ್ ಆಫ್ ಇಂಡಿಯಾಸ್ ಡಿಜಿಟಲ್ ಎಕಾನಮಿ ರಿಪೋರ್ಟ್ 2026' ರ ಪ್ರಕಾರ, ಭಾರತವು ಈಗ ವಿಶ್ವದ ಐದನೇ ಅತಿ ದೊಡ್ಡ ಡಿಜಿಟಲ್ ಆರ್ಥಿಕತೆಯಾಗಿದೆ.

ಸ್ಥಳೀಯ ಗ್ರಾಮಸ್ಥರಿಗೆ ಖಾದಿ ತಯಾರಿಸುವ ವಿಧಾನವನ್ನು ಕಲಿಸಿದ. ಇಂದು 'ಓವಾಕ್ಸಾಕಾ ಖಾದಿ' ಒಂದು ಸ್ಥಾಪಿತ ಬ್ರ್ಯಾಂಡ್ ಆಗಿ ಬೆಳೆದಿದೆ.

ಆಟಿಕೆ ಉದ್ಯಮದ ಕಥೆಯೂ ಅಷ್ಟೇ ಸ್ಫೂರ್ತಿದಾಯಕವಾಗಿದೆ. ಭಾರತದ ಶ್ರೀಮಂತ ಆಟಿಕೆ ತಯಾರಿಕಾ ಪರಂಪರೆ ಮತ್ತು ರಾಷ್ಟ್ರೀಯ ಹೆಮ್ಮೆಗೆ ವೇದಿಕೆ ಒದಗಿಸಲು ಕೇಂದ್ರ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ.ಸಂಸ್ಕೃತಿ ಮತ್ತು ನಾವೀನ್ಯತೆಯನ್ನು ಒಟ್ಟುಗೂಡಿಸಿ, ಜಾಗತಿಕ ಮಾರುಕಟ್ಟೆಗೆ ವಿಸ್ತರಿಸುವ ಸ್ವಾವಲಂಬಿ ಆಟಿಕೆ ಉದ್ಯಮವನ್ನು ಉತ್ತೇಜಿಸಲು 2021ರ ಜನವರಿಯಲ್ಲಿ 'ಟಾಯ್‌ಕಥಾನ್' ಆಯೋಜಿಸಲಾಯಿತು. ಬಳಿಕ 2021ರ ಫೆಬ್ರವರಿ 27ರಿಂದ ಮಾರ್ಚ್ 2ರವರೆಗೆ ದೇಶದ ಮೊದಲ 'ಆಟಿಕೆ ಮೇಳ' ನಡೆಯಿತು. 2021ರಲ್ಲಿ ಪ್ರಧಾನಮಂತ್ರಿಯವರು ಹೇಳಿದಂತೆ, ಭಾರತವು ತನ್ನ ಆಟಿಕೆಗಳ ಅಗತ್ಯದ ಸುಮಾರು ಶೇ. 80ರಷ್ಟನ್ನು ಆಮದು ಮಾಡಿಕೊಳ್ಳುತ್ತಿತ್ತು. 100 ಶತಕೋಟಿ ಡಾಲರ್ ಮೌಲ್ಯದ ಜಾಗತಿಕ ಆಟಿಕೆ ಮಾರುಕಟ್ಟೆಯಲ್ಲಿ ಭಾರತದ ಪಾಲು ಕೇವಲ 1.5 ಶತಕೋಟಿ ಡಾಲರ್ ಆಗಿತ್ತು. ಆದರೆ ಕಳೆದ ಐದು ವರ್ಷಗಳಲ್ಲಿ ಪರಿಸ್ಥಿತಿ ಸಂಪೂರ್ಣವಾಗಿ ಬದಲಾಗಿದೆ. 2026ರ ಜುಲೈನಲ್ಲಿ ಪ್ರಕಟವಾದ ವರದಿಯ ಪ್ರಕಾರ, ಭಾರತದ ಪ್ರಮುಖ ಆಟಿಕೆ ವಿಭಾಗಗಳ ರಫ್ತು 2017–18ರಲ್ಲಿ 152.7 ಮಿಲಿಯನ್ ಡಾಲರ್‌ನಷ್ಟಿದ್ದರೆ, 2025–26ರಲ್ಲಿ 384.7 ಮಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. ಇದು ಸುಮಾರು ಶೇ. 152ರಷ್ಟು ಹೆಚ್ಚಳವಾಗಿದೆ. ಎಲೆಕ್ಟ್ರಾನಿಕ್ ಮತ್ತು ಎಲೆಕ್ಟ್ರಾನಿಕ್ ಅಲ್ಲದ ಆಟಿಕೆಗಳ ರಫ್ತು ಮಾತ್ರವೇ ಸುಮಾರು ಶೇ. 160ರಷ್ಟು ಹೆಚ್ಚಾಗಿದೆ. ವಿಶೇಷವಾಗಿ, 2017–18ರಲ್ಲಿ ಈ ಕ್ಷೇತ್ರದಲ್ಲಿ ಭಾರತಕ್ಕೆ 213 ಮಿಲಿಯನ್ ಡಾಲರ್ ವ್ಯಾಪಾರ ಕೊರತೆ ಇತ್ತು. ಆದರೆ 2025–26ರಲ್ಲಿ 152 ಮಿಲಿಯನ್

ಆತ್ಮನಿರ್ಭರ ಭಾರತದ ಐದು ಸ್ತಂಭಗಳು

1. ಆರ್ಥಿಕತೆ
ಹಂತ ಹಂತದ ಬದಲಾವಣೆಗಿಂತ ಗಮನಾರ್ಹ ಜಿಗಿತವನ್ನು ಗುರಿಯಾಗಿರಿಸಿಕೊಳ್ಳಲಾಗಿದೆ; ಭಾರತವನ್ನು 5 ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನಾಗಿ ಮಾಡುವುದು ಸರ್ಕಾರದ ಗುರಿಯಾಗಿದೆ.



2. ಮೂಲಸೌಕರ್ಯ
ಭಾರತದ ಹೊಸ ಗುರುತು. 5 ಟ್ರಿಲಿಯನ್ ಡಾಲರ್ ಆರ್ಥಿಕತೆಯ ಗುರಿಯನ್ನು ಸಾಧಿಸಲು, ಮುಂದಿನ ಐದು ವರ್ಷಗಳಲ್ಲಿ ಭಾರತದಲ್ಲಿ ಮೂಲಸೌಕರ್ಯ ಅಭಿವೃದ್ಧಿಗಾಗಿ ₹100 ಲಕ್ಷ ಕೋಟಿಗಳಿಗೂ ಹೆಚ್ಚು ಹೂಡಿಕೆ ಮಾಡಲು ಯೋಜಿಸಲಾಗಿದೆ.




3. ವ್ಯವಸ್ಥೆ
21ನೇ ಶತಮಾನದ ತಂತ್ರಜ್ಞಾನ ಆಧಾರಿತ ವ್ಯವಸ್ಥೆಗಳನ್ನು ಆಧರಿಸಿದೆ.

4. ಚೈತನ್ಯಶೀಲ ಜನಸಂಖ್ಯೆ
ಆತ್ಮನಿರ್ಭರ ಭಾರತಕ್ಕೆ ಸ್ಪರ್ಧಾತ್ಮಕ ಪ್ರಯೋಜನವನ್ನು ಸಾಬೀತುಪಡಿಸುವ ಅಂಶವಾಗಿದೆ.



5. ಬೇಡಿಕೆ
ಬೇಡಿಕೆ ಮತ್ತು ಪೂರೈಕೆ ಸರಪಳಿಯ ಸಾಮರ್ಥ್ಯವನ್ನು ಅದರ ಪೂರ್ಣ ಸಾಮರ್ಥ್ಯಕ್ಕೆ ಬಳಸಿಕೊಳ್ಳಬೇಕು.



ಡಾಲರ್ ವ್ಯಾಪಾರ ಮಿಗತೆ ದಾಖಲಾಗಿದೆ. ಗುಜರಾತ್‌ನ ರಾಜ್‌ಕೋಟ್‌ನಿಂದ ಕರ್ನಾಟಕದ ಚನ್ನಪಟ್ಟಣದವರೆಗೆ, ಆಂಧ್ರಪ್ರದೇಶದ ಕೊಂಡಪಲ್ಲಿ–ಎಟಿಕೊಪ್ಪಕದಿಂದ ಉತ್ತರ ಪ್ರದೇಶದ ವಾರಾಣಸಿಯವರೆಗೆ ಇರುವ ಸಾಂಪ್ರದಾಯಿಕ ಆಟಿಕೆ ತಯಾರಿಕಾ ಕೇಂದ್ರಗಳು ಈ ಬದಲಾವಣೆಯ ಪ್ರಮುಖ ಭಾಗವಾಗಿವೆ. ಭಾರತದ 12 ಸಾಂಪ್ರದಾಯಿಕ ಆಟಿಕೆ ಉತ್ಪಾದನಾ ಸಮೂಹಗಳಿಗೆ ಭೌಗೋಳಿಕ ಗುರುತಿನ (ಜಿಐ) ಮಾನ್ಯತೆ ಇದೆ. ಈ ಪರಂಪರೆಯು ಸುಮಾರು 5,000 ವರ್ಷಗಳಷ್ಟು ಹಳೆಯದು ಎಂದು ಹೇಳಲಾಗಿದೆ.

ಪ್ರತಿಯೊಂದು ಮನೆ ಮತ್ತು ಅಂಗಡಿಯಲ್ಲೂ ಸ್ವದೇಶಿಯ ಸಂಕಲ್ಪ

ದೊಡ್ಡ ಮತ್ತು ಸಣ್ಣ ವ್ಯಾಪಾರಿಗಳು ಹಾಗೂ ಅಂಗಡಿಯವರು ತಮ್ಮ ಅಂಗಡಿಗಳಲ್ಲಿ ಸ್ವದೇಶಿ ವಸ್ತುಗಳು ದೊರೆಯುತ್ತವೆ ಎಂದು ಹೆಮ್ಮೆಯಿಂದ ಫಲಕಗಳನ್ನು ಪ್ರದರ್ಶಿಸಬೇಕು ಎಂದು ಪ್ರಧಾನಮಂತ್ರಿ ಮೋದಿ ಅವರು ನಿರಂತರವಾಗಿ ಕರೆ ನೀಡಿದ್ದಾರೆ. ಸ್ವದೇಶಿ ಉತ್ಪನ್ನಗಳ ಬಳಕೆ ಬಲವಂತದಿಂದ ಬರಬಾರದು; ಅದು ನಮ್ಮ ಸಾಮರ್ಥ್ಯ ಮತ್ತು ಆತ್ಮವಿಶ್ವಾಸದಿಂದ ಬರಬೇಕು ಎಂಬುದು ಅವರ ಅಭಿಪ್ರಾಯ. ಪ್ರಧಾನಮಂತ್ರಿಯವರು ಈ ಸಂಕಲ್ಪವನ್ನು ವಿವರಿಸುತ್ತಾ ಹೀಗೆ ಹೇಳಿದ್ದಾರೆ: "ಇಂದು ನಾನು ಪ್ರತಿಯೊಬ್ಬ ವ್ಯಾಪಾರಿ ಮತ್ತು ಅಂಗಡಿಯವರಲ್ಲಿ ಮನವಿ ಮಾಡಲು ಬಯಸುತ್ತೇನೆ. ಇದರಲ್ಲಿ ನಿಮ್ಮದೂ ಜವಾಬ್ದಾರಿ ಇದೆ. ನಾವು ಚಿಕ್ಕವರಿದ್ದಾಗ ಮಾರುಕಟ್ಟೆಗಳನ್ನು ನೋಡುತ್ತಿದ್ದೆವು. ಆಗ ಅಂಗಡಿಗಳಲ್ಲಿ 'ತುಪ್ಪದ ಅಂಗಡಿ' ಎಂದು ಮಾತ್ರ ಬರೆಯಲಾಗುತ್ತಿತ್ತು. ಕಾಲಕ್ರಮೇಣ ಅವು 'ಶುದ್ಧ ತುಪ್ಪದ

ಮುಖಪುಟ ಲೇಖನ

ವೋಕಲ್ ಫಾರ್ ಲೋಕಲ್

ಅಂಗಡಿ' ಎಂದು ಬರೆಯಲು ಆರಂಭಿಸಿದವು. ದೇಶದಾದ್ಯಂತದ ವ್ಯಾಪಾರಿಗಳು ಮತ್ತು ಅಂಗಡಿಯವರು ಮುಂದೆ ಬಂದು, 'ಇಲ್ಲಿ ಸ್ವದೇಶಿ ವಸ್ತುಗಳು ಮಾರಾಟವಾಗುತ್ತವೆ' ಎಂಬ ಫಲಕಗಳನ್ನು ಪ್ರದರ್ಶಿಸಬೇಕು ಎಂದು ನಾನು ಬಯಸುತ್ತೇನೆ. ಸ್ವದೇಶಿಯ ಮೂಲಕ ನಾವು ನಮ್ಮ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಅಗತ್ಯವಿದ್ದರೆ ಇತರರನ್ನೂ ಅದೇ ದಾರಿಯಲ್ಲಿ ನಡೆಯಲು ಪ್ರೇರೇಪಿಸಬೇಕು. ಇದೇ ನಮ್ಮ ಶಕ್ತಿಯಾಗಬೇಕು ಮತ್ತು ನಮ್ಮ ಮಂತ್ರವಾಗಬೇಕು." ಸ್ವದೇಶಿಯ ಮನೋಭಾವವನ್ನು ಶಾಲೆಗಳಲ್ಲಿ ಉತ್ತೇಜಿಸಲು 'ಸ್ವದೇಶಿ ದಿನ', 'ಸ್ವದೇಶಿ ಸಪ್ತಾಹ' ಮತ್ತು 'ಸ್ಥಳೀಯ ಉತ್ಪನ್ನಗಳ ದಿನ'ದಂತಹ ಕಾರ್ಯಕ್ರಮಗಳನ್ನು ಆಯೋಜಿಸುವ ಸಲಹೆಗಳನ್ನೂ ನೀಡಿದರು. 2025ರ ಸೆಪ್ಟೆಂಬರ್‌ನಲ್ಲಿ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ ಪುರಸ್ಕೃತರೊಂದಿಗೆ ನಡೆಸಿದ ಸಂವಾದದ ಸಂದರ್ಭದಲ್ಲಿ, ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಸಹಕಾರದೊಂದಿಗೆ ಸ್ವದೇಶಿ ಅಭಿಯಾನವನ್ನು ಮುನ್ನಡೆಸಬೇಕು ಎಂದು ಪ್ರಧಾನಮಂತ್ರಿ ಮೋದಿ ಅವರು ಸೂಚಿಸಿದ್ದರು. ಶಾಲೆಗಳಲ್ಲಿ 'ಮೇಕ್ ಇನ್ ಇಂಡಿಯಾ' ವಿಷಯದ ಮೇಲೆ ಯೋಜನಾ ಕಾರ್ಯಗಳನ್ನು ನೀಡಬಹುದು ಎಂದು ಅವರು ಸಲಹೆ ನೀಡಿದರು. ವಿದ್ಯಾರ್ಥಿಗಳು ತಮ್ಮ ಪ್ರದೇಶಗಳಲ್ಲಿ ಸ್ವದೇಶಿ ಜಾಗೃತಿ ಮೆರವಣಿಗೆಗಳನ್ನು ಆಯೋಜಿಸಬಹುದು. ಶಾಲಾ ಉತ್ಸವಗಳ ಮೂಲಕ ಈ ಪರಿಕಲ್ಪನೆಯನ್ನು ಆಚರಿಸಬಹುದು. ಸ್ವದೇಶಿ ಮತ್ತು ಸ್ಥಳೀಯ ಉತ್ಪನ್ನಗಳಿಗೆ ಮೀಸಲಾದ ದಿನಗಳನ್ನೂ ಆಚರಿಸಬಹುದು. ಮಕ್ಕಳು ತಮ್ಮ ಮನೆಗಳಲ್ಲಿ ಬಳಸುವ ಸ್ವದೇಶಿ ವಸ್ತುಗಳ ಪಟ್ಟಿಯನ್ನು ತಯಾರಿಸಿ ಶಾಲೆಗೆ ತರಲು ಪ್ರೋತ್ಸಾಹಿಸಬಹುದು. ತಮ್ಮ ಮನೆಗಳಲ್ಲಿ ಇಂತಹ ವಸ್ತುಗಳ ಸಂಖ್ಯೆಯನ್ನು ಹೆಚ್ಚಿಸುವ ಮಾಸಿಕ ಸಂಕಲ್ಪವನ್ನೂ ಮಾಡಬಹುದು. ಸ್ವದೇಶಿಯ ಮಹತ್ವದ ಕುರಿತು ಚರ್ಚೆಗಳನ್ನು ಆಯೋಜಿಸಬಹುದು. ಮಕ್ಕಳ ಜನ್ಮದಿನದಂದು ಸ್ವದೇಶಿ ಉತ್ಪನ್ನಗಳನ್ನು ಉಡುಗೊರೆಯಾಗಿ ನೀಡುವ ಸಂಪ್ರದಾಯವನ್ನೂ ಬೆಳೆಸಬಹುದು. ಇದರ ಪರಿಣಾಮವಾಗಿ ಬಾಲ್ಯದಿಂದಲೇ ಸ್ವದೇಶಿ ಭಾವನೆಯು ಬೆಳೆದು, ಅಂತಿಮವಾಗಿ ಇಡೀ ಕುಟುಂಬವು ಸ್ವದೇಶಿ ಉತ್ಪನ್ನಗಳನ್ನು ಅಳವಡಿಸಿಕೊಳ್ಳಲು ಇದು ದಾರಿ ಮಾಡಿಕೊಡುತ್ತದೆ.

ಕೇಂದ್ರ ಸರ್ಕಾರವು ಮೊದಲ ಬಾರಿಗೆ 14 ಪ್ರಮುಖ ಕ್ಷೇತ್ರಗಳನ್ನು ಗುರುತಿಸಿ, ಉತ್ಪಾದನೆ ಆಧಾರಿತ ಪ್ರೋತ್ಸಾಹಧನ (ಪಿಎಲ್‌ಐ) ಯೋಜನೆಯನ್ನು ಆರಂಭಿಸಿತು. 'ಸುಲಭ ವ್ಯವಹಾರ' ಸೂಚ್ಯಂಕದಲ್ಲಿ ಭಾರತದ ಸ್ಥಾನ ಸುಧಾರಿಸಿದೆ. 2014ರಲ್ಲಿ 142ನೇ ಸ್ಥಾನದಲ್ಲಿದ್ದ ಭಾರತವು 63ನೇ ಸ್ಥಾನಕ್ಕೆ ಏರಿದೆ. ವಿದೇಶಿ ಹೂಡಿಕೆಯ ಒಳಹರಿವಿನಲ್ಲಿಯೂ ದಾಖಲೆ ಪ್ರಮಾಣದ ಹೆಚ್ಚಳ ಕಂಡುಬಂದಿದೆ. 2014ರಿಂದ 2024ರವರೆಗೆ ಭಾರತವು 667.4 ಶತಕೋಟಿ ಡಾಲರ್ ವಿದೇಶಿ ನೇರ ಹೂಡಿಕೆ ಪಡೆದಿದೆ. ಇದು ಹಿಂದಿನ ದಶಕವಾದ 2004–2014ರ ಅವಧಿಗೆ ಹೋಲಿಸಿದರೆ ಶೇ. 119ರಷ್ಟು ಹೆಚ್ಚಳವಾಗಿದೆ. 2026ರ ಆಗಸ್ಟ್ ತಿಂಗಳೊಂದರಲ್ಲೇ ಭಾರತದ ಜವಳಿ ರಫ್ತು ₹29,776 ಕೋಟಿ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಇದು ಶೇ. 16.1ರಷ್ಟು ಹೆಚ್ಚಳವಾಗಿದೆ. 'ಒಂದು ಜಿಲ್ಲೆ–ಒಂದು ಉತ್ಪನ್ನ' ನೀತಿಯು ಸಣ್ಣ ಮತ್ತು ಅತಿಸಣ್ಣ ಉದ್ಯಮಗಳ ಸ್ಪರ್ಧಾತ್ಮಕ ಸಾಮರ್ಥ್ಯವನ್ನು ಹೆಚ್ಚಿಸಿದೆ.



ಈ ದೀಪಾವಳಿಯಲ್ಲೂ ಅದೇ ಸಂಕಲ್ಪ...

2026ರ ದೀಪಾವಳಿ ಹಲವು ಕಾರಣಗಳಿಂದ ವಿಶೇಷವಾಗಿದೆ. ಸೆಮಿಕಂಡಕ್ಟರ್‌ಗಳು ಮತ್ತು ಪರಮಾಣು ಇಂಧನದಂತಹ ಕ್ಷೇತ್ರಗಳಲ್ಲಿ ಭಾರತ ದೊಡ್ಡ ಹೆಜ್ಜೆಗಳನ್ನು ಇಟ್ಟಿರುವ ವರ್ಷವಿದು. ರಕ್ಷಣಾ ಉತ್ಪನ್ನಗಳ ರಫ್ತು ಹೊಸ ದಾಖಲೆ ನಿರ್ಮಿಸಿದೆ. ಸ್ವದೇಶಿ ಸೇನಾ ಸಾಮರ್ಥ್ಯವೂ ತನ್ನ ಶಕ್ತಿಯನ್ನು ಸಾಬೀತುಪಡಿಸಿದೆ. ಜಾಗತಿಕ ಪರಿಸ್ಥಿತಿಗಳು ವೇಗವಾಗಿ ಬದಲಾಗುತ್ತಿರುವ ಈ ಸಂದರ್ಭದಲ್ಲಿ ಸ್ವಾವಲಂಬನೆಯ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚು ಸ್ಪಷ್ಟವಾಗಿದೆ. ಪ್ರಧಾನಮಂತ್ರಿ ಮೋದಿ ಅವರ ಸಂದೇಶ ಸರಳವಾಗಿದೆ: ನೀವು ಏನೇ ಖರೀದಿಸಿದರೂ ಅದು ಸ್ವದೇಶಿ ಉತ್ಪನ್ನವಾಗಿರಲಿ. ನಿಮ್ಮ ಮನೆಗಳನ್ನು ಸ್ವದೇಶಿ ವಸ್ತುಗಳಿಂದ ಅಲಂಕರಿಸಿ. 'ಮೇಕ್ ಇನ್ ಇಂಡಿಯಾ' ಉಡುಗೊರೆಗಳನ್ನು ನೀಡಿ. ಭಾರತದ ಮಣ್ಣಿನ ಪರಿಮಳ ಜೀವನದ ಪ್ರತಿಯೊಂದು ಭಾಗದಲ್ಲೂ ಹರಡಲಿ. ಈ ಕರೆ ಯಾವುದೋ ಒಂದು ರಾಜಕೀಯ ಪಕ್ಷಕ್ಕೆ ಅಥವಾ ಸರ್ಕಾರಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಇದು ಇಡೀ ರಾಷ್ಟ್ರದ ಭವಿಷ್ಯಕ್ಕೆ ಸಂಬಂಧಿಸಿದೆ. ಈ ಸಂಕಲ್ಪದ ಭಾಗವಾಗಿ, ಇತರರೊಂದಿಗೆ ಅನಗತ್ಯ ಹೋಲಿಕೆ ಮಾಡುವುದನ್ನು ಬಿಟ್ಟು, ನಮ್ಮದೇ ಬೆಳವಣಿಗೆಯತ್ತ ಗಮನಹರಿಸಬೇಕು ಎಂದು ಪ್ರಧಾನಮಂತ್ರಿ ಮೋದಿ ಕರೆ ನೀಡಿದ್ದಾರೆ. 2026ರ ಅಕ್ಟೋಬರ್ 7ರಂದು ಸಾರ್ವಜನಿಕ ಜೀವನದಲ್ಲಿ 25 ವರ್ಷಗಳನ್ನು ಪೂರೈಸಿದ ಪ್ರಧಾನಮಂತ್ರಿಯವರು ತಮ್ಮ ಅನುಭವದ ಆಧಾರದಲ್ಲಿ



ಹೀಗೆ ಹೇಳಿದ್ದಾರೆ: "ನನ್ನ ಅಪಾರ ಅನುಭವದ ಆಧಾರದಲ್ಲಿ ಹೇಳುವುದಾದರೆ, ಬೇರೆಯವರ ಗೆರೆ ಚಿಕ್ಕದಾಗಿಸಲು ನಮ್ಮ ಶಕ್ತಿಯನ್ನು ವ್ಯರ್ಥ ಮಾಡಬಾರದು. ಬದಲಿಗೆ, ನಮ್ಮ ಗೆರೆ ಇನ್ನಷ್ಟು ಉದ್ದವಾಗುವಂತೆ ಮಾಡಲು ನಮ್ಮ ಎಲ್ಲ ಶಕ್ತಿಯನ್ನು ಬಳಸಬೇಕು. ನಾವು ನಮ್ಮ ಗೆರೆ ಉದ್ದವಾಗಿಸಿದರೆ, ಜಗತ್ತು ನಮ್ಮ ಸಾಮರ್ಥ್ಯವನ್ನು ಗುರುತಿಸುತ್ತದೆ. ಇಂದು ಜಾಗತಿಕ ಮಟ್ಟದಲ್ಲಿ ಆರ್ಥಿಕ ಸ್ವಹಿತಾಸಕ್ತಿಗಳು ಮೇಲುಗೈ ಸಾಧಿಸುತ್ತಿರುವಾಗ, ಬಿಕ್ಕಟ್ಟುಗಳ ಬಗ್ಗೆ ಕುಳಿತು ದುಃಖಿಸುವುದಲ್ಲ; ಧೈರ್ಯದಿಂದ ನಮ್ಮದೇ ಗೆರೆ ಉದ್ದವಾಗಿಸುವುದು ಇಂದಿನ ಅಗತ್ಯವಾಗಿದೆ. ನನ್ನ 25 ವರ್ಷಗಳ ಆಡಳಿತದ ಅನುಭವದಿಂದ ಹೇಳಬಲ್ಲೆ: ನಾವು ಈ ಮಾರ್ಗವನ್ನು ಆರಿಸಿಕೊಂಡರೆ, ಪ್ರತಿಯೊಬ್ಬರೂ ಇದೇ ಮಾರ್ಗವನ್ನು ಅನುಸರಿಸಿದರೆ, ಯಾವುದೇ ಸ್ವಾರ್ಥಪರ ಶಕ್ತಿಯು ನಮ್ಮನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ."

ಅಭಿವೃದ್ಧಿ ಹೊಂದಿದ ಭಾರತದತ್ತ...

ಭಾರತವು ಸ್ವಾತಂತ್ರ್ಯ ಪಡೆದ ನೂರು ವರ್ಷಗಳನ್ನು ಪೂರೈಸುವ 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಬೇಕೆಂಬ ಸಂಕಲ್ಪವು ಸ್ವಾವಲಂಬನೆ, ಆತ್ಮನಿರ್ಭರತೆ ಮತ್ತು ಸ್ವದೇಶಿಯ ಹೆಮ್ಮೆಯ ಭಾವನೆಯ ಮೇಲೆ ನಿಂತಿದೆ. 'ಮೇಕ್ ಇನ್ ಇಂಡಿಯಾ', ಸ್ವದೇಶಿ ಮತ್ತು 'ವೋಕಲ್ ಫಾರ್ ಲೋಕಲ್' ಎಂಬ ಮೂರು ಪ್ರಬಲ ಅಭಿಯಾನಗಳು ಭಾರತವು ತನ್ನ ಭವ್ಯ ಪ್ರಾಚೀನ ಪರಂಪರೆಯನ್ನು ಮತ್ತೆ ಮುನ್ನೆಲೆಗೆ ತರುವ ದಾರಿಯನ್ನು ರೂಪಿಸುತ್ತಿವೆ. ಈ ಹಬ್ಬದ ಋತುವಿನಲ್ಲಿ, ವಿಶೇಷವಾಗಿ ದೀಪಾವಳಿ ಮತ್ತು ಛತ್ ಹಬ್ಬಗಳ ಸಂದರ್ಭದಲ್ಲಿ, ಪ್ರತಿಯೊಬ್ಬ ಭಾರತೀಯನೂ ಸ್ವದೇಶಿ ದೀಪಗಳನ್ನು ಬೆಳಗಿಸಬೇಕು, ಸ್ಥಳೀಯ ಉತ್ಪನ್ನಗಳೊಂದಿಗೆ ಹಬ್ಬವನ್ನು ಆಚರಿಸಬೇಕು ಮತ್ತು ಹೆಮ್ಮೆಯಿಂದ ಇದು ಸ್ವದೇಶಿ; ಇದು "ಮೇಡ್ ಇನ್ ಇಂಡಿಯಾ" ಎಂದು ಘೋಷಿಸಬೇಕು ಎಂದು ಪ್ರಧಾನಮಂತ್ರಿ ಮೋದಿ ಕರೆ ನೀಡಿದ್ದಾರೆ:

ಇಂದು 'ವೋಕಲ್ ಫಾರ್ ಲೋಕಲ್' ಎಂಬ ಕರೆ ಭಾರತದ ಪ್ರತಿಯೊಂದು ಮೂಲೆಗೂ ತಲುಪಿದೆ. ಜನರು ಸ್ಥಳೀಯ ಉತ್ಪನ್ನಗಳನ್ನು ಹುಡುಕಿ ಖರೀದಿಸುತ್ತಿದ್ದಾರೆ. ಇದು ರಾಷ್ಟ್ರೀಯ ಹೆಮ್ಮೆಯ ಸಂಕೇತವಾಗಿದೆ. ಭಾರತೀಯತೆಯ ಮನೋಭಾವ ಮತ್ತು 'ವೋಕಲ್ ಫಾರ್ ಲೋಕಲ್' ಎಂಬ ಮಂತ್ರದ ದೂರದೃಷ್ಟಿಗಳು ಒಂದಾಗಿ, 140 ಕೋಟಿ ಭಾರತೀಯರನ್ನು, ದೇಶವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಸಾಮೂಹಿಕ ಸಂಕಲ್ಪದಲ್ಲಿ ಬೆಸೆದಿವೆ. ಈ ಆಂದೋಲನವು ಸ್ಥಳೀಯ ಉತ್ಪನ್ನಗಳು ಮತ್ತು ಮಾರುಕಟ್ಟೆಗಳನ್ನು ಬಲಪಡಿಸುವುದರ ಜೊತೆಗೆ, ಭಾರತೀಯ ಉತ್ಪನ್ನಗಳನ್ನು ಜಾಗತಿಕ ವೇದಿಕೆಗೆ ಕೊಂಡೊಯ್ಯುವ ಗುರಿ ಹೊಂದಿದೆ. ಈ ಅಮೃತ ಕಾಲದಲ್ಲಿ, 'ವೋಕಲ್ ಫಾರ್ ಲೋಕಲ್' ಎಂಬ ಕರೆ ಭಾರತದ ಸಂಪ್ರದಾಯಗಳು ಮತ್ತು ವೀರಗಾಥೆಗಳಿಗೆ ಇನ್ನಷ್ಟು ದೊಡ್ಡ ಮನ್ನಣೆ ತಂದುಕೊಡಲಿದೆ ಎಂಬ ಸಂಕಲ್ಪವನ್ನು ದೇಶ ಕೈಗೊಂಡಿದೆ. ■

ಭಾರತೀಯರು ಜೀವ ರಕ್ಷಕರು ಜೀವ ಹಂತಕರಲ್ಲ



ಅಪಾರ ಧೈರ್ಯ ಮತ್ತು ಸಮಯಪ್ರಜ್ಞೆ ತೋರಿದ ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರು 9/11 ರಂತಹ ಸಂಭಾವ್ಯ ದಾಳಿಯನ್ನು ತಡೆದಿರುವರಲ್ಲದೇ, ಪ್ರಪಂಚದಾದ್ಯಂತದ 140 ಕೋಟಿ ಭಾರತೀಯರು ಹೆಮ್ಮೆಪಡುವಂತೆ ಮಾಡಿದ್ದಾರೆ. ಇದೇ ಕಾರಣಕ್ಕಾಗಿಯೇ ಅಮೆರಿಕ ಮತ್ತು ಇಸ್ರೇಲ್ ಸೇರಿದಂತೆ ಇಡೀ ವಿಶ್ವ ಈ ಭಾರತೀಯ ಪೈಲಟ್ ನನ್ನು ಹೀರೋ ಎಂದು ಕೊಂಡಾಡುತ್ತಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಕ್ಟೋಬರ್ 2ರಂದು ಈ ಧೈರ್ಯಶಾಲಿ ಪೈಲಟ್ ರೊಂದಿಗೆ ವಿಡಿಯೋ ಕರೆ ಮೂಲಕ ಮಾತನಾಡಿ ಶೀಘ್ರ, ಚೇತರಿಕೆಗೆ ಹಾರೈಸಿದ್ದಾರೆ. ಈ ಸಂಭಾಷಣೆಯ ಪ್ರಮುಖ ಅಂಶಗಳು ಇಲ್ಲಿವೆ:

ಪ್ರಧಾನಮಂತ್ರಿ – ನಮಸ್ತೆ ಸ್ಮಿತ್.

ಕ್ಯಾಪ್ಟನ್ ಸ್ಮಿತ್ – ಜೈ ಹಿಂದ್ ಸರ್. ನಮಸ್ಕಾರ ಸರ್.

ಪ್ರಧಾನಮಂತ್ರಿ– ಈಗ ಹೇಗಿದ್ದೀರಿ? ನಿಮ್ಮ ಆರೋಗ್ಯ ಹೇಗಿದೆ?

ಕ್ಯಾಪ್ಟನ್ ಸ್ಮಿತ್ – ಸರ್, ಚೆನ್ನಾಗಿದೆ; ಎಲ್ಲವೂ ಸರಿಯಾಗಿದೆ.

ಪ್ರಧಾನಮಂತ್ರಿ– ನೋಡಿ, ಇಡೀ ರಾಷ್ಟ್ರವೇ ನಿಮಗಾಗಿ ಪ್ರಾರ್ಥಿಸುತ್ತಿದೆ. ಎಲ್ಲೆಡೆ ಮಹಾಮೃತ್ಯುಂಜಯ ಮಂತ್ರ ಪಠಣ ನಡೆಯುತ್ತಿದೆ.

ಕ್ಯಾಪ್ಟನ್ ಸ್ಮಿತ್ – ಹೌದು ಸರ್.

ಪ್ರಧಾನಮಂತ್ರಿ– ನಿಮ್ಮ ಧೈರ್ಯ, ನಿಮ್ಮ ತಾಳ್ಮೆ ಮತ್ತು ನಿಮ್ಮ ಸಮಯಪ್ರಜ್ಞೆ — ಕೇವಲ ಕ್ಷಣಮಾತ್ರದಲ್ಲಿ ನೀವು ಎಷ್ಟೊಂದು ನಿರ್ಧಾರಗಳನ್ನು ತೆಗೆದುಕೊಂಡು ಅನೇಕ ಜೀವಗಳನ್ನು ರಕ್ಷಿಸಿರುವಿರಿ. ನಾವು ಭಾರತೀಯರು ಜೀವ ಕಸಿದುಕೊಳ್ಳುವವರಲ್ಲ, ಬದಲಾಗಿ ಜೀವ ಉಳಿಸುವವರು ಎಂದು ಇಡೀ ರಾಷ್ಟ್ರವೇ ಇಂದು ಹೆಮ್ಮೆಯಿಂದ ಹೇಳಬಹುದಾಗಿದೆ.

ಕ್ಯಾಪ್ಟನ್ ಸ್ಮಿತ್ – ಖಂಡಿತ ಸರ್.

ಪ್ರಧಾನಮಂತ್ರಿ– ನೀವು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದಾಗ, ನಿಮ್ಮ ದೇಹದ ಮೇಲೆ ಗಂಭೀರವಾದ ಗಾಯವಿದ್ದರೂ, ಆ ಕ್ಷಣದಲ್ಲಿ ನೀವು ನಿಮ್ಮ ಪ್ರಾಣಕ್ಕಿಂತಲೂ ಪ್ರಯಾಣಿಕರೆಲ್ಲರ ಜೀವಕ್ಕೆ ಹೆಚ್ಚಿನ ಆದ್ಯತೆ ನೀಡಿದಿರಿ. ಎಲ್ಲಕ್ಕಿಂತ ಮಿಗಿಲಾಗಿ, ನೀವು 140 ಕೋಟಿ ಸಹನಾಗರಿಕರಿಗೆ ಗೌರವ ತಂದುಕೊಟ್ಟಿದ್ದೀರಿ.

ಕ್ಯಾಪ್ಟನ್ ಸ್ಮಿತ್ – ಧನ್ಯವಾದಗಳು ಸರ್.

ಪ್ರಧಾನಮಂತ್ರಿ– ಸಹೋದರ ಭೂಪೇಂದ್ರ, ಸಹೋದರಿಯರಾದ ಗೀತಾ ಮತ್ತು ಸೋನಲ್ ನಾನು ಗೀತಾ ಬೆಹೆನ್ ಅವರೊಂದಿಗೆ ಮಾತನಾಡಿದೆ. ಅವರಿಗೆ ಹೀಗೆ ಹೇಳಿದೆ: "ನಿಮ್ಮ ಹೆಸರು ಗೀತಾ ಎಂದಿದೆ... ನೀವು ಭಗವದ್ಗೀತೆಯ ಸಾರವನ್ನು—ಅಂದರೆ ಶ್ರೀಕೃಷ್ಣನ ಬೋಧನೆಗಳನ್ನು - ನಿಜವಾಗಿಯೂ ನಿಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದೀರಿ. ಈ ಮೌಲ್ಯಗಳೊಂದಿಗೆ ನೀವು ಸ್ಮಿತ್ ಅವರ ಜೀವನವನ್ನು ರೂಪಿಸಿದ್ದೀರಿ."

ಕ್ಯಾಪ್ಟನ್ ಸ್ಮಿತ್ – ಖಂಡಿತ, ಸರ್.

ಪ್ರಧಾನಮಂತ್ರಿ– ಸ್ಮಿತ್, ಈಗ ನಾನು ನಿಮ್ಮಿಂದ ಕೇಳಲು ಬಯಸುತ್ತೇನೆ.

ಕ್ಯಾಪ್ಟನ್ ಸ್ಮಿತ್ – ಸರ್, ನೀವು ನನಗೆ ಅತ್ಯುನ್ನತ ಆದರ್ಶ ವ್ಯಕ್ತಿ. ನೀವು ನನಗೆ ಕರೆ ಮಾಡಿ ಹುರಿದುಂಬಿಸುತ್ತಿದ್ದೀರಿ. ಆ ಕ್ಷಣದಲ್ಲಿ, ನಾನು ನನ್ನ ಜೀವ ಉಳಿಸಿಕೊಳ್ಳಲು ಹೋರಾಡುತ್ತಿದ್ದೆ. ಆಗ ನಾನು ಬಿದ್ದು, ಗಾಯಗಳಿಂದ ನರಳಾಡುತ್ತಿದ್ದೆ, ಕೆಳಗೆ ಸಿಲುಕೊಂಡಿದ್ದೇನೆ ಎಂದು ನಾನು ಸುಮ್ಮನಾಗಬಾರದು ಎಂಬುದು ಆ ಹಂತದಲ್ಲಿ ನನಗೆ ಅರಿವಾಯಿತು. ಆಗ ನನಗೆ ನಾನೇ ಹೀಗೆಂದುಕೊಂಡೆ: 'ನಾನು ಈಗ ಏಳಲೇಬೇಕು...' ಸರ್, ನಾನು ಕಳೆದ 17 ವರ್ಷಗಳಿಂದ ಎಫ್‌ಝುಡ್ ವಿಮಾನಗಳ ಹಾರಾಟ ನಡೆಸುತ್ತಿದ್ದೇನೆ. ಕಳೆದ 11 ವರ್ಷಗಳಿಂದ ಕ್ಯಾಪ್ಟನ್ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಹೀಗಾಗಿ ನನ್ನ ಕಣ್ಣು ಮುಚ್ಚಿದ್ದರೂ ವಿಮಾನದಲ್ಲಿ ಏನಾಗುತ್ತಿದೆ ಎಂಬುದನ್ನು ಗ್ರಹಿಸಬಲ್ಲೆ. ನಾನು ಬಿದ್ದಿದ್ದಾಗ, ವಿಮಾನವು ಕೆಳಗೆ ಇಳಿಯುತ್ತಿರುವ ಅನುಭವವಾಯಿತು. ಇದೇ ಕೊನೆಯ ಪ್ರಯತ್ನ ಎಂಬ ಸ್ಪಷ್ಟ ಅರಿವು ನನಗಾಯಿತು. ಬಾಗಿಲು ಪಕ್ಕದಲ್ಲೇ ಇತ್ತು, ಒಮ್ಮೆ ನಾನು ಬಲಹಾಕಿ ತಳ್ಳಹುದು ಎಂದು ನನಗೆ ತಿಳಿಯಿತು. ಆ ಸಮಯದಲ್ಲೂ ನನ್ನನ್ನು ಹೊಡೆಯಲಾಗುತ್ತಿದ್ದರೂ ನಾನು ಬಾಗಿಲನ್ನು ತೆರೆದೆ, ಸರ್. ನಂತರ ಎಲ್ಲರೂ ಹೊರಗೆ ಬಂದರು; ಅಲ್ಲಿ ಪ್ರತಿಯೊಬ್ಬರಿಗೂ ಅವರದೇ ಆದ ಪಾತ್ರವಿತ್ತು. ನಾನು ನನ್ನ ಜೀವ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ ಎಂದು ಹೇಳುತ್ತಿದ್ದೆ, ಆದರೆ ಅದೇ ಸಮಯದಲ್ಲಿ, ಅವರೆಲ್ಲರೂ ಪ್ರಾಣ ಕಳೆದುಕೊಳ್ಳುವಂತಾಗಲು ಬಿಡಬಾರದು ಎಂಬ ಅರಿವೂ ನನಗಿತ್ತು. ನಂತರದಲ್ಲಿ, ಇಲ್ಲಿ ಸೌದಿ ಅರೇಬಿಯಾದಲ್ಲಿ, ನನಗೆ ದೊರೆತ ಆರೈಕೆ ಅಥವಾ ವೈದ್ಯಕೀಯ ಚಿಕಿತ್ಸೆಗಿಂತ ಉತ್ತಮವಾದದ್ದು ಇನ್ನೊಂದಿರಲು ಸಾಧ್ಯವೇ ಇಲ್ಲ. ನನಗೆ ನೋವು ಕಾಣಿಸಿಕೊಂಡಾಗಲೆಲ್ಲಾ, ನನ್ನ ಮನಸ್ಸಿಗೆ ಬರುವುದು ಒಂದೇ ವಿಷಯ - ನಾನು ಹನುಮಾನ್ ಚಾಲೀಸಾವನ್ನು ಪಠಿಸುತ್ತೇನೆ. ಆ ಸಂದರ್ಭದಲ್ಲೂ ನಾನು ಹನುಮಾನ್ ಚಾಲೀಸಾವನ್ನೇ ಪಠಿಸುತ್ತಿದ್ದೆ. ನನ್ನನ್ನು ಉಳಿಸಿದ್ದು ಭಗವಂತನೇ ಎಂದು ನನಗೆ ಖಚಿತವಾಗಿದೆ. ಈಗ, ಸರ್, ನೀವು ಕರೆ ಮಾಡಿರುವಿರಿ - ನನಗೆ ಅಪಾರ ಹೆಮ್ಮೆ ಎನಿಸುತ್ತಿದೆ. ಈ ಕ್ಷಣದವರೆಗೂ ನನಗೆ ಆ ಭಾವ ಇರಲಿಲ್ಲ, ಆದರೆ ಈಗ ಖಂಡಿತವಾಗಿಯೂ ಇದೆ. ಕ್ಷಮಿಸಿ ಸರ್, ನಿಮ್ಮ ಮುಂದೆ ನಾನು ಕಣ್ಣೀರು ಹಾಕುತ್ತಿದ್ದೇನೆ.

ಪ್ರಧಾನಮಂತ್ರಿ– ಸ್ಮಿತ್, ನನ್ನ ಮುಂದೆ ಅಲ್ಲದೇ ಬೇರೆ ಎಲ್ಲಿ ಭಾವುಕರಾಗಲು ಸಾಧ್ಯ?

ಕ್ಯಾಪ್ಟನ್ ಸ್ಮಿತ್ – ಸರ್, ನಾನು ನಿಮ್ಮೊಂದಿಗೆ ಮಾತನಾಡುತ್ತೇನೆ ಎಂದು ಎಂದಿಗೂ ಭಾವಿಸಿರಲಿಲ್ಲ.

ಪ್ರಧಾನಮಂತ್ರಿ– ಸಹೋದರ, ನೀವು ಎಷ್ಟು ಶ್ರೇಷ್ಠ ಕೆಲಸ ಮಾಡಿರುವಿರಿ, ಪ್ರತಿಯೊಬ್ಬ ದೇಶವಾಸಿಗಳು - ಅಷ್ಟೇ ಏಕೆ, ಪ್ರಪಂಚದಾದ್ಯಂತ ಇರುವ ಜನರು ನಿಮ್ಮನ್ನು ನೋಡಲು ಮತ್ತು ನಿಮ್ಮೊಂದಿಗೆ ಮಾತನಾಡಲು ತೀವ್ರ ಉತ್ಸುಕರಾಗಿದ್ದಾರೆ. ಇನ್ನು, ಹನುಮಾನ್ ಚಾಲೀಸಾದ ಬಗ್ಗೆ ನೀವು ನನಗೆ ಹೇಳಿದ್ದೀರಿ, ನಿಮಗೆ ಅಂತಹ ಮೌಲ್ಯಗಳನ್ನು ನೀಡಿರುವ ಸಹೋದರಿ ಗೀತಾ ಅವರಿಗೆ ನನ್ನ ಪ್ರಣಾಮಗಳು.

ಕ್ಯಾಪ್ಟನ್ ಸ್ಮಿತ್ – ಹೌದು ಸರ್. ಪ್ರತಿದಿನ ಬೆಳಗ್ಗೆ ನಾನು ಪ್ರಾರ್ಥನೆ ಮಾಡುವಾಗ, ನನ್ನ ಎರಡು ವರ್ಷದ ಮಗ ನನ್ನ ಮಡಿಲಲ್ಲಿ ಕುಳಿತುಕೊಳ್ಳುತ್ತಾನೆ; ಆಗ ನಾನು ಅವನಿಗೆ ಹನುಮಾನ್ ಚಾಲೀಸಾವನ್ನು ಪಠಿಸಿ ಕೇಳಿಸುತ್ತೇನೆ. ನಾವು ನಮ್ಮ ದೇಶದಿಂದ ದೂರ ವಾಸಿಸುತ್ತಿರಬಹುದು, ಆದರೆ ನಮ್ಮ ಸಂಸ್ಕೃತಿಯಿಂದ ಎಂದಿಗೂ ದೂರವಾಗಬಾರದು.

ಪ್ರಧಾನಮಂತ್ರಿ– ಅದು ನಿಜ.

ಕ್ಯಾಪ್ಟನ್ ಸ್ಮಿತ್ – ನಾವು ಮನೆಯಿಂದ ದೂರವಿರುವಂತೆ ಅನಿಸುತ್ತಿಲ್ಲ; ಇಲ್ಲಿನ ಜನರು ನಮ್ಮನ್ನು ಅತ್ಯಂತ ಪ್ರೀತಿ ಮತ್ತು ಕಾಳಜಿಯಿಂದ ನೋಡಿಕೊಳ್ಳುತ್ತಿದ್ದಾರೆ.

ಪ್ರಧಾನಮಂತ್ರಿ – ನಿಮಗೆ ಇದು ತಿಳಿದಿಲ್ಲದಿರಬಹುದು, ಆದರೆ ಸಾವರ್ಕುಂಡ್ಲಾ ಮತ್ತು ವಾಧ್ವಾನ್ ನಲ್ಲಿ ಜನರು ಅತ್ಯಂತ ಭಾವಪೂರ್ಣ ವಾತಾವರಣವನ್ನು ಸೃಷ್ಟಿಸಿದ್ದಾರೆ. ನಿನ್ನೆ ಎಲ್ಲೆಡೆ ದೇವಾಲಯಗಳಲ್ಲಿ ಪ್ರಾರ್ಥನೆಗಳು, ಪೂಜೆ ಮತ್ತು ಆರತಿಗಳು ನಡೆದವು. ದೇಶಾದ್ಯಂತ ಇರುವ ಯಾತ್ರಾಸ್ಥಳಗಳಲ್ಲಿಯೂ ಆರತಿ ನೆರವೇರಿಸಲಾಯಿತು. ಭಾರತವು ನಿಮ್ಮನ್ನು ಸ್ವಾಗತಿಸಲು ಅತ್ಯುತ್ಸುಕದಿಂದ ಕಾಯುತ್ತಿದೆ.

ಪ್ರಧಾನಮಂತ್ರಿ– ನಿಮ್ಮನ್ನು ಕಾಳಜಿಯೊಂದಿಗೆ ಚೆನ್ನಾಗಿ ಆರೈಕೆ ಮಾಡಿದ್ದಕ್ಕಾಗಿ ಸೌದಿ ಅರೇಬಿಯಾ ಮತ್ತು ಯುಎಇ ಸರ್ಕಾರಗಳಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ಸ್ಮಿತ್, ನಿಮಗೆ ಅಗತ್ಯವೆನಿಸಿದಾಗ, ಕೇವಲ ಒಂದು ಫೋನ್ ಕರೆ ದೂರದಲ್ಲಿ ನಾನಿದ್ದೇನೆ.

ಕ್ಯಾಪ್ಟನ್ ಸ್ಮಿತ್ – ಧನ್ಯವಾದಗಳು ಸರ್.

ಪ್ರಧಾನಮಂತ್ರಿ– ನಾವು ಭೇಟಿಯಾದಾಗ ಎಲ್ಲವನ್ನೂ ವಿವರವಾಗಿ ಕೇಳಿ ತಿಳಿದುಕೊಳ್ಳುತ್ತೇನೆ; ಇಂತಹ ವಿಷಯಗಳ ಬಗ್ಗೆ ನಿಮ್ಮೊಂದಿಗೆ ಮೊಬೈಲ್ ಫೋನ್ ನಲ್ಲಿ ಚರ್ಚಿಸಲು ನಾನು ಬಯಸುವುದಿಲ್ಲ.

ಕ್ಯಾಪ್ಟನ್ ಸ್ಮಿತ್ – ಆಗಲಿ ಸರ್.

ಪ್ರಧಾನಮಂತ್ರಿ– ದಯವಿಟ್ಟು ಸಂಪೂರ್ಣವಾಗಿ ಗುಣಮುಖವಾಗುವುದರತ್ತ ಗಮನಹರಿಸಿ; ಇಡೀ ರಾಷ್ಟ್ರವೇ ನಿಮ್ಮೊಂದಿಗಿದೆ.

ಕ್ಯಾಪ್ಟನ್ ಸ್ಮಿತ್ – ಧನ್ಯವಾದಗಳು ಸರ್.

ಪ್ರಧಾನಮಂತ್ರಿ– ದೇವರ ಅನುಗ್ರಹವಿರಲಿ! ●





“ಕಳೆದ 10-12 ವರ್ಷಗಳಲ್ಲಿ, ಮೊಬೈಲ್ ಫೋನ್ ಆಧುನಿಕ ಸಂವಹನ ಮಾಧ್ಯಮವಾಗಿರುವುದರ ಜೊತೆಗೆ, ಉತ್ತಮ ಆಡಳಿತಕ್ಕೆ ಒಂದು ಪ್ರಮುಖ ಸಾಧನವಾಗಿಯೂ ಹೊರಹೊಮ್ಮಿದ್ದು ನಮ್ಮ 'ಡಿಜಿಟಲ್ ಇಂಡಿಯಾ' ಮುನ್ನೋಟದ ಕೇಂದ್ರಬಿಂದುವಾಗಿದೆ.

- ನರೇಂದ್ರ ಮೋದಿ, ಪ್ರಧಾನಮಂತ್ರಿ

ಡಿಜಿಟಲ್ ಸಂಪರ್ಕದ ಮೂಲಕ ಭವಿಷ್ಯಕ್ಕಾಗಿ ಒಂದು ಹೊಸ ದಿಕ್ಕು

ಕಳೆದ ದಶಕದಲ್ಲಿ, ಭಾರತವು ದೂರಸಂಪರ್ಕ ಮತ್ತು ಡಿಜಿಟಲ್ ಸಂಪರ್ಕ ವಲಯದಲ್ಲಿ ಅಭೂತಪೂರ್ವ ವಿಸ್ತರಣೆಗೆ ಸಾಕ್ಷಿಯಾಗಿದೆ. ದೂರದ ಪ್ರದೇಶಗಳವರೆಗೂ ಟೆಲಿಕಾಂ ಟವರ್ ಮತ್ತು ಆಪ್ಟಿಕಲ್ ಫೈಬರ್ ಜಾಲ ತಲುಪಿರುವುದು ಡಿಜಿಟಲ್ ಆರ್ಥಿಕತೆಗೆ ಹೊಸ ವೇಗ ನೀಡಿದೆ. ಈ ಬೆಳವಣಿಗೆಯನ್ನು ಚುರುಕುಗೊಳಿಸಲು, ಭಾರತವು ಮುಂದಿನ ದಶಕದ ಡಿಜಿಟಲ್ ಮತ್ತು ದೂರಸಂಪರ್ಕ ಪಯಣಕ್ಕಾಗಿ ಮಾರ್ಗಸೂಚಿಯನ್ನು ಸಿದ್ಧಪಡಿಸುತ್ತಿದೆ. 'ಇಂಡಿಯಾ ಮೊಬೈಲ್ ಕಾಂಗ್ರೆಸ್' ನ 10ನೇ ಆವೃತ್ತಿಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ತಂತ್ರಜ್ಞಾನ, ಸಂಶೋಧನೆ, ಉದ್ಯಮ, ಹೂಡಿಕೆ ಮತ್ತು ಚಿಂತನೆಗಳ ಸಂಗಮ ತಾಣವಾಗಬಲ್ಲ ವೇದಿಕೆಯನ್ನಾಗಿ ಐಎಂಸಿ ಅನ್ನು ಅಭಿವೃದ್ಧಿಪಡಿಸಬೇಕು ಎಂದಿದ್ದಾರೆ.

ಅಕ್ಟೋಬರ್ 7 ರಿಂದ 10 ರವರೆಗೆ ನಡೆದ 'ಇಂಡಿಯಾ ಮೊಬೈಲ್ ಕಾಂಗ್ರೆಸ್', ಭಾರತದ ಪ್ರಗತಿ ಮತ್ತು ಆಕಾಂಕ್ಷೆಗಳನ್ನು ಪ್ರದರ್ಶಿಸಿತು. ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಕಳೆದ ಒಂದು ದಶಕದಲ್ಲಿ ಭಾರತದ ದೂರಸಂಪರ್ಕ ಮೂಲಸೌಕರ್ಯವು ನಿರಂತರವಾಗಿ ವಿಸ್ತರಿಸಿದೆ ಎಂದು ತಿಳಿಸಿದರು. ದೂರದ ಪ್ರದೇಶಗಳಲ್ಲಿ ಟವರ್ ಗಳನ್ನು ಅಳವಡಿಸಲಾಗಿದೆ, ಆಪ್ಟಿಕಲ್ ಫೈಬರ್ ಜಾಲಗಳು ಅಭೂತಪೂರ್ವ ವಿಸ್ತರಣೆ ಕಂಡಿದ್ದು ಡೇಟಾ ಹೆಚ್ಚು ಕೈಗೆಟುಕುವ ದರದಲ್ಲಿ ಲಭ್ಯವಾಗುವಂತಾಗಿದೆ. ಇದರಿಂದ ಹೊಸ ಆರ್ಥಿಕ ವಲಯಗಳ ಸೃಷ್ಟಿ ಸಾಧ್ಯವಾಗಿದೆ. ಇದು ತಂತ್ರಜ್ಞಾನ, ಮನರಂಜನೆ ಮತ್ತು ಶಿಕ್ಷಣ ವಲಯಗಳಲ್ಲಿ ಹೊಸ ಗ್ರಾಹಕ ವರ್ಗವನ್ನು ಹಾಗೂ ಸೃಜನಕರ್ತರ ಹೊಸ ಪೀಳಿಗೆಯನ್ನು ಪೋಷಿಸಿದೆ. ಭಾರತೀಯ ನಾಗರಿಕರು ದೂರಸಂಪರ್ಕ ವಲಯದ ಕ್ರಾಂತಿಯ ನೇರ ಪ್ರಯೋಜನ ಪಡೆದಿದ್ದಾರೆ.

ಅತ್ಯಂತ ವೈವಿಧ್ಯಮಯವಾದ ವಿಶಾಲ ರಾಷ್ಟ್ರವನ್ನು ತಂತ್ರಜ್ಞಾನ ಹೇಗೆ ಒಗ್ಗೂಡಿಸಿದೆ ಎಂಬುದನ್ನು ವಿವರಿಸುತ್ತಾ ಪ್ರಧಾನಮಂತ್ರಿಯವರು, ಈ ಮುನ್ನ ದೈನಂದಿನ ಜೀವನಕ್ಕೆ ಅಡ್ಡಿಯಾಗಿದ್ದ ಬೃಹತ್ ಭೌಗೋಳಿಕ ಮತ್ತು ಭಾಷಾ ತಡೆಗೋಡೆಗಳನ್ನು ಮೊಬೈಲ್ ಸಂಪರ್ಕವು ವ್ಯವಸ್ಥಿತವಾಗಿ ನಿವಾರಿಸಿರುವ ಬಗೆಯನ್ನು ತಿಳಿಸಿದ್ದಾರೆ. ಡಿಜಿಟಲ್ ಬದಲಾವಣೆಗಿಂತ ಪೂರ್ವದಲ್ಲಿ, ನಾಗರಿಕರು ಕೇವಲ ಮೂಲಭೂತ ಬ್ಯಾಂಕಿಂಗ್, ಆರೋಗ್ಯ ಸೇವೆಗಳು ಮತ್ತು ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ನಗರ ಕೇಂದ್ರಗಳಿಗೆ ಪ್ರಯಾಣಿಸಲು ಅಪಾರ ಪ್ರಮಾಣದ ಸಮಯ ಮತ್ತು ಹಣ ವ್ಯಯಿಸಬೇಕಾಗಿತ್ತು ಎಂದು ತಿಳಿಸುತ್ತಾ, ಮೊಬೈಲ್ ಸಂಪರ್ಕ ವ್ಯವಸ್ಥೆಯು ಈ ವೈವಿಧ್ಯತೆಯನ್ನು ಅನುಕೂಲತೆಯೊಂದಿಗೆ ಬೆಸೆದಿದೆ ಎಂದು ಅವರು ವಿವರಿಸಿದ್ದಾರೆ.

ಡಿಜಿಟಲ್ ಆಡಳಿತವು ಈ ಸನ್ನಿವೇಶವನ್ನು ಬದಲಿಸಿದೆ. ಇಂದು ನೂರಾರು ಸರ್ಕಾರಿ ಸೇವೆಗಳು ಮೊಬೈಲ್ ಫೋನ್ ಗಳಲ್ಲಿ ಲಭ್ಯವಿವೆ ಮತ್ತು ಸರ್ಕಾರದ ನೆರವು ಈಗ ನೇರವಾಗಿ ಫಲಾನುಭವಿಗಳ ಖಾತೆಗಳಿಗೆ ಜಮೆಯಾಗುತ್ತಿದೆ.

ಕೋವಿಡ್-19 ಸಾಂಕ್ರಾಮಿಕದ ಸಮಯದಲ್ಲಿ, ಇತರ ಎಲ್ಲ ಚಟುವಟಿಕೆಗಳು ಸ್ಥಗಿತಗೊಂಡಿದ್ದರೂ, ಭಾರತದಲ್ಲಿ ಕಚೇರಿ ಕೆಲಸಗಳು, ಬ್ಯಾಂಕಿಂಗ್ ವ್ಯವಹಾರಗಳು ಮತ್ತು ಶಿಕ್ಷಣ ಪ್ರಕ್ರಿಯೆಗಳು ಮುಂದುವರಿದವು. ಭಾರತದ ಡಿಜಿಟಲ್ ಪರಿಸರ ವ್ಯವಸ್ಥೆಯು ಈ ಬದಲಾವಣೆಯನ್ನು ಸಾಧ್ಯವಾಗಿಸಿತ್ತು.

ಮೊಬೈಲ್ ಮತ್ತು ಅಂತರ್ಜಾಲ ಸಂಪರ್ಕವು ಶಿಕ್ಷಣ, ಆರೋಗ್ಯ ಸೇವೆ, ಪಾವತಿ ವ್ಯವಸ್ಥೆಗಳು ಮತ್ತು ಸರ್ಕಾರಿ ಸೇವೆಗಳು ಯಾವುದೇ ಅಡೆತಡೆಯಿಲ್ಲದೆ ಕಾರ್ಯನಿರ್ವಹಿಸುವುದನ್ನು

ಐಎಂಸಿ 2026ರ ವಿಷಯ: ಗಡಿಗಳನ್ನು ಮೀರಿ ವಿಸ್ತರಣೆ

ಐಎಂಸಿ 2026ರ ನಾಲ್ಕು ಪ್ರಮುಖ ಆಧಾರಸ್ತಂಭಗಳು

- **ಸೃಷ್ಟಿ:** ಭವಿಷ್ಯ ರೂಪಿಸುವಿಕೆ
- **ಸಮೃದ್ಧೀಕರಣ:** ಬೆಳವಣಿಗೆಗೆ ವೇಗ ನೀಡುವಿಕೆ
- **ಭದ್ರತೆ:** ನಂಬಿಕೆಯ ಬಲವರ್ಧನೆ
- **ಸಬಲೀಕರಣ:** ಅವಕಾಶಗಳ ವಿಸ್ತರಣೆ



ಡಿಜಿಟಲ್ ಪರಿಸರ ವ್ಯವಸ್ಥೆಯ ಸಾಮರ್ಥ್ಯದ ದೃಷ್ಟಾಂತ

- ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಅಡಿಯಲ್ಲಿ ರೈತರ ಬ್ಯಾಂಕ್ ಖಾತೆಗಳಿಗೆ ₹4 ಲಕ್ಷ ಕೋಟಿಗೂ ಹೆಚ್ಚು ಹಣ ವರ್ಗಾಯಿಸಲಾಗಿದೆ.
- ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಸುಮಾರು ₹50 ಲಕ್ಷ ಕೋಟಿ ಮೊತ್ತ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗಳನ್ನು ತಲುಪಿದೆ.
- ಈ ವ್ಯವಸ್ಥೆಯು ಸರ್ಕಾರದ ₹5 ಲಕ್ಷ ಕೋಟಿ ಹಣ ಸೋರಿಕೆಯಾಗುವುದನ್ನು ತಡೆಗಟ್ಟಿದೆ.
- ಭಾರತದಲ್ಲಿ 50 ಕೋಟಿಗೂ (500 ದಶಲಕ್ಷ) ಹೆಚ್ಚು ಜನರು ಗೇಮಿಂಗ್ ಪರಿಸರ ವ್ಯವಸ್ಥೆಯೊಂದಿಗೆ ಯಾವುದಾದರೊಂದು ರೀತಿಯಲ್ಲಿ ಸಂಪರ್ಕ ಹೊಂದಿದ್ದಾರೆ.
- ಭಾರತದಾದ್ಯಂತ 5.5 ಲಕ್ಷಕ್ಕೂ ಹೆಚ್ಚು ಬೇಸ್ ಸ್ಟೇಷನ್ ಗಳು ಕಾರ್ಯಾಚರಣೆಯಲ್ಲಿದ್ದು, ಇವು 5ಜಿ ನೆಟ್‌ವರ್ಕ್ ಅನ್ನು ನಡೆಸುತ್ತಿವೆ.
- ದೇಶದಲ್ಲಿ ಮೊಬೈಲ್ ಅಂತರ್ಜಾಲ ವೇಗವು 2022ಕ್ಕೆ ಹೋಲಿಸಿದರೆ ಹತ್ತು ಪಟ್ಟು ಹೆಚ್ಚಾಗಿದೆ.

2026ರ ಆವೃತ್ತಿಯಲ್ಲಿ ಸೇರ್ಪಡೆಯಾಗಿರುವ

ಒಂಭತ್ತು ಪ್ರಮುಖ ವಲಯಗಳು

- 5ಜಿ ಮತ್ತು 6ಜಿ
- ಮುಂದಿನ ಪೀಳಿಗೆಯ ಎಐ ಜಾಲಗಳು
- ಅರೆವಾಹಕಗಳು
- ತಂತಿರಹಿತ ಬಾಹ್ಯಾಕಾಶ ಸಾಧನ ಆಧಾರಿತ ಸಂವಹನ ಜಾಲಗಳು
- ಸೈಬರ್ ಭದ್ರತೆ
- ಕ್ವಾಂಟಮ್ ಸಂವಹನ
- ಉದ್ಯಮ ರೂಪಾಂತರ
- ವರ್ತುಲಾವೃತ್ತದ ಆರ್ಥಿಕತೆ
- ಇ ಎಸ್ ಜಿ ಮತ್ತು ಎಲೆಕ್ಟ್ರಾನಿಕ್ಸ್ ಉತ್ಪಾದನೆ



9ನೇ ಮೊಬೈಲ್ ಕಾಂಗ್ರೆಸ್ ಗಮನಹರಿಸಿರುವ ವಿಷಯಗಳು...

- ಚತುರ ಸಾರಿಗೆ
- ಕ್ರೀಡಾಂಗಣ ಅನುಭವ
- ಕೈಗಾರಿಕಾ ರೊಬೊಟಿಕ್ಸ್
- ಸಾರಿಗೆ ತಂತ್ರಜ್ಞಾನ

ಐಎಂಸಿ 2026ರ ಮುಖ್ಯಾಂಶಗಳು...

100ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು

900ಕ್ಕೂ ಹೆಚ್ಚು ಚಿಂತನಶೀಲ ನಾಯಕರ ಪಾಲ್ಗೊಳ್ಳುವಿಕೆ

500ಕ್ಕೂ ಹೆಚ್ಚು ಪಾಲುದಾರರು ಮತ್ತು ಪ್ರದರ್ಶಕರು


600ಕ್ಕೂ ಹೆಚ್ಚು ಸ್ಟಾರ್ಟ್ ಅಪ್‌ಗಳು

1.5 ಲಕ್ಷಕ್ಕೂ ಹೆಚ್ಚು ಜನರ ಭಾಗವಹಿಸುವಿಕೆ

120ಕ್ಕೂ ಹೆಚ್ಚು ಸಭೆಗಳು

ತಂತ್ರಜ್ಞಾನದ 'ನಾಗರಿಕ ಲಾಭಾಂಶ'

ಮೊಬೈಲ್ ಫೋನ್ ಕೇವಲ ಮಾತನಾಡಲು ಸೀಮಿತವಾಗಿರುವ ಮಾಧ್ಯಮವಲ್ಲ.



ಖಚಿತಪಡಿಸಿದೆ. ದೀಕ್ಷಾ ವೇದಿಕೆಯು ಆನ್‌ಲೈನ್ ಶಿಕ್ಷಣಕ್ಕೆ ಅನುವು ಮಾಡಿಕೊಟ್ಟಿದ್ದು ಕೋವಿಡ್-19 ಪ್ರಾರಂಭವಾದಾಗಿನಿಂದ ಜುಲೈ 2022ರ ನಡುವಿನ ಅವಧಿಯಲ್ಲಿ, ಇದರಡಿ 500 ಕೋಟಿಗೂ ಹೆಚ್ಚು ಕಲಿಕಾ ಅವಧಿಗಳು ಮತ್ತು ಸುಮಾರು 6,000 ಕೋಟಿ ನಿಮಿಷಗಳ ಕಲಿಕೆ ದಾಖಲಾಗಿದೆ. ಸುಮಾರು 25 ಕೋಟಿ ವಿದ್ಯಾರ್ಥಿಗಳನ್ನು ಈ ಡಿಜಿಟಲ್ ಮತ್ತು ಆನ್‌ಲೈನ್ ಶೈಕ್ಷಣಿಕ ವೇದಿಕೆಗಳೊಂದಿಗೆ ಸಂಪರ್ಕಿಸುವ ಪ್ರಯತ್ನಗಳು ಈಗ ನಡೆಯುತ್ತಿವೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.



ಕೇಂದ್ರ ಲೋಕಸೇವಾ ಆಯೋಗದ ಶತಮಾನೋತ್ಸವ ಸಮಾರಂಭ (ಯು ಪಿ ಎಸ್ ಸಿ)

ಜನಪರ-ಆಡಳಿತ
ಉತ್ತಮ ಆಡಳಿತದ ಗುರುತು

ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ, ದೇಶಕ್ಕೆ ಈಗ ಅಗತ್ಯವಿರುವ ಆಡಳಿತ ವ್ಯವಸ್ಥೆಯು ಕೇಂದ್ರ ಮತ್ತು ರಾಜ್ಯ ಲೋಕಸೇವಾ ಆಯೋಗಗಳ ಮೇಲೆ ಗಣನೀಯವಾಗಿ ಅವಲಂಬಿತವಾಗಿದೆ. ಕೇಂದ್ರ ಲೋಕಸೇವಾ ಆಯೋಗ (ಯು ಪಿ ಎಸ್ ಸಿ) ತನ್ನ ಮೊದಲ 100 ವರ್ಷಗಳಲ್ಲಿ ನಿರಂತರವಾಗಿ ತನ್ನ ವಿಶ್ವಾಸಾರ್ಹತೆಯನ್ನು ಬಲಪಡಿಸಿಕೊಂಡಿದೆ. ಯು ಪಿ ಎಸ್ ಸಿ ಯ ಸ್ವಾತಂತ್ರ್ಯ, ನಿಷ್ಪಕ್ಷಪಾತತೆ, ಅರ್ಹತೆಗೆ ಬದ್ಧತೆ, ಗೌಪ್ಯತೆ ಮತ್ತು ನ್ಯಾಯಯುತ ಕಾರ್ಯವಿಧಾನಗಳು ಅದರ ಪ್ರಧಾನ ಗುರುತನ್ನು ರೂಪಿಸಿವೆ. ನವದೆಹಲಿಯ ಭಾರತ ಮಂಟಪದಲ್ಲಿ ಅಕ್ಟೋಬರ್ 1 ರಂದು ನಡೆದ ಯು ಪಿ ಎಸ್ ಸಿ ಶತಮಾನೋತ್ಸವ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಭಾರತದ ಹೊಸ ಕಾರ್ಯ ಸಂಸ್ಕೃತಿಗೆ ಜನಪರ, ಕ್ರಿಯಾಶೀಲ ಮತ್ತು ಉತ್ತಮ ಆಡಳಿತ ಎಂಬ ಮೂರು ಮೂರು ಮಂತ್ರಗಳನ್ನು ಪ್ರತಿಪಾದಿಸಿದರು.

ಈ ಸಂಸ್ಥೆಗೆ 1926ರಲ್ಲಿ ಅಡಿಪಾಯ ಹಾಕಿದಾಗ, ಆ ಕಾಲಘಟ್ಟದ ಆದ್ಯತೆಗಳು ಭಿನ್ನವಾಗಿದ್ದವು. ಆಗ ವ್ಯವಸ್ಥೆಯ ಗಮನ ಮತ್ತು ಬದ್ಧತೆ ಎರಡೂ ಬ್ರಿಟಿಷ್ ಆಳ್ವಿಕೆಯೆಡೆಗೆ ಕೇಂದ್ರೀಕೃತವಾಗಿದ್ದವು. ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರ, ಸ್ವತಂತ್ರ ಭಾರತದ ಕನಸುಗಳು ಮತ್ತು ಆಡಳಿತಾತ್ಮಕ ಅಗತ್ಯಗಳು ಪ್ರಮುಖ ಕೇಂದ್ರಬಿಂದುವಾದವು. ಕಳೆದ ದಶಕಗಳಲ್ಲಿ, ಯು ಪಿ ಎಸ್ ಸಿ ತನ್ನ ಜವಾಬ್ದಾರಿಗಳನ್ನು ಅತ್ಯಂತ ಅನುಕರಣೀಯವಾಗಿ ನಿರ್ವಹಿಸಿದೆ. ಇಂದಿನ ದಿನವು ಯು ಪಿ ಎಸ್ ಸಿ ಯ 100 ವರ್ಷಗಳ ಸಂಭ್ರಮಾಚರಣೆ ಮಾತ್ರವಲ್ಲ, ಇದೊಂದು ಪರಂಪರೆಯ ಆಚರಣೆಯೂ ಹೌದು ಎಂದು ಈ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನುಡಿದಿದ್ದಾರೆ. ಇದು ವರ್ಷ ವರ್ಷವೂ ಲಕ್ಷಾಂತರ ಯುವಜನರು ಹೊಂದಿರುವ ಮತ್ತು ಸಾಕಾರಗೊಳಿಸಲು ಶ್ರಮಿಸುವ ಆಕಾಂಕ್ಷೆಗಳ ಸಂಭ್ರಮಾಚರಣೆಯಾಗಿದೆ. ಹಾಗೆಯೇ ಇದು ಪ್ರತಿಯೊಬ್ಬ ಭಾರತೀಯನೂ ಈ ಸಂಸ್ಥೆಯ ಮೇಲೆ ಇಟ್ಟಿರುವ ನಂಬಿಕೆಯ ಸಂಭ್ರಮಾಚರಣೆಯೂ ಹೌದು. ಶತಮಾನದಷ್ಟು ಸುದೀರ್ಘವಾದ ಈ ಪಯಣದಲ್ಲಿ ಪೀಳಿಗೆಗಳು ಬದಲಾದವು, ಸರ್ಕಾರಗಳು ಬದಲಾದವು, ತಂತ್ರಜ್ಞಾನ ಬದಲಾಯಿತು ಮತ್ತು ಪಠ್ಯಕ್ರಮಗಳೂ ಬದಲಾದವು; ಆದರೂ, ಯು ಪಿ ಎಸ್ ಸಿ ಮೇಲಿರುವ ನಂಬಿಕೆ ಇಂದಿಗೂ ಅಚಲವಾಗಿ ಉಳಿದಿದೆ. ಇದೇ ನಿಮ್ಮ ಅತ್ಯಮೂಲ್ಯ ಆಸ್ತಿಗಳಲ್ಲಿ ಒಂದಾಗಿದೆ.

ತಾಳ್ಮೆ, ವಿವೇಕ ಮತ್ತು ಸ್ಥೈರ್ಯದ ನಿದರ್ಶನ

ಈ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಫ್ಲೈದುಬೈ ವಿಮಾನ ಎಫ್ 1073 ರ ಹಾರಾಟ ನಡೆಸುವಾಗ ಅಸಾಧಾರಣ ಧೈರ್ಯ ಪ್ರದರ್ಶಿಸಿದ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸಿದರು. ಭಾರತೀಯ ಕ್ಯಾಪ್ಟನ್ ಪ್ರದರ್ಶಿಸಿದ ತಾಳ್ಮೆ, ವಿವೇಕ ಮತ್ತು ಧೈರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಪ್ರಧಾನಮಂತ್ರಿ ಮೋದಿ ಅವರು, ಈ ಭಾರತೀಯ ವ್ಯಕ್ತಿಯು 9/11ರಂತಹ ದುರಂತವೊಂದನ್ನು

ಸರ್ಕಾರವೇ ಪರಮ ರಕ್ಷಕ ಮತ್ತು ದಾತಾ ಎಂದು ನಂಬಲಾಗುತ್ತಿದ್ದ ಕಾಲವೊಂದನ್ನು ನಾವು ಹಿಂದೆ ನೋಡಿದ್ದೇವೆ. ಆದರೆ ಇಂದು 'ನಾಗರಿಕ ದೇವೋ ಭವ' (ನಾಗರಿಕರೇ ದೇವರು) ಎಂಬುದು ನಮ್ಮ ಮಂತ್ರವಾಗಿದೆ. ಅಂದರೆ, ಈ ದೇಶದ ನಾಗರಿಕರು ನಮಗೆ ದೇವರ ಸಮಾನ. ನಾಗರಿಕರಿಗೆ ಸೇವೆ ಸಲ್ಲಿಸುವುದೇ ನಮ್ಮ ಅತ್ಯುನ್ನತ ಆದ್ಯತೆಯಾಗಿದೆ.

ನರೇಂದ್ರ ಮೋದಿ, ಪ್ರಧಾನಮಂತ್ರಿ



ಪ್ರಧಾನಮಂತ್ರಿ ಮೋದಿಯವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.

ಸ್ಮರಣಾರ್ಥ ನಾಣ್ಯ ಮತ್ತು ಅಂಚೆ ಚೀಟಿ ಬಿಡುಗಡೆ

- ಯು ಪಿ ಎಸ್ ಸಿ ಶತಮಾನೋತ್ಸವದ ಸ್ಮರಣಾರ್ಥ ನಾಣ್ಯ, ಸ್ಮರಣಾರ್ಥ ಅಂಚೆ ಚೀಟಿ ಹಾಗೂ 'ಯು ಪಿ ಎಸ್ ಸಿ ನೀತಿಗಳನ್ನು ರೂಪಿಸಿದ 100 ಐತಿಹಾಸಿಕ ನಿರ್ಧಾರಗಳು' ಶೀರ್ಷಿಕೆಯ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.
- ಭಾರತ ಮಂಟಪದಲ್ಲಿ ಏರ್ಪಾಡಾಗಿದ್ದ ಕೇಂದ್ರ ಲೋಕಸೇವಾ ಆಯೋಗದ 100 ವರ್ಷಗಳ ಪಯಣವನ್ನು ಬಿಂಬಿಸುವ ಪ್ರದರ್ಶನವನ್ನೂ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವೀಕ್ಷಿಸಿದರು.
- ಕಳೆದ ವರ್ಷದ ಅಕ್ಟೋಬರ್ 1 ರಂದು ಪ್ರಾರಂಭವಾಗಿ ವರ್ಷವಿಡೀ ನಡೆದ ಕಾರ್ಯಕ್ರಮಗಳ ಸಮಾಪ್ತಿಯನ್ನು ಗುರುತಿಸಲು ಮತ್ತು 1926 ರಲ್ಲಿ ಸ್ಥಾಪನೆಯಾದ ಯು ಪಿ ಎಸ್ ಸಿಯು 100 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.
- ರಾಜ್ಯಗಳ ಲೋಕಸೇವಾ ಆಯೋಗಗಳ ಅಧ್ಯಕ್ಷರು ಮತ್ತು ಸದಸ್ಯರು, ಭಾರತ ಸರ್ಕಾರದ ಹಿರಿಯ ಅಧಿಕಾರಿಗಳು, ಶಿಕ್ಷಣ ತಜ್ಞರು, ಯು ಪಿ ಎಸ್ ಸಿ ಅಧಿಕಾರಿಗಳು ಹಾಗೂ ದೇಶಾದ್ಯಂತದ ಇತರ ಸಂಬಂಧಿತರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.
- ಈ ಆಚರಣೆಯು 2026ರ ಸೆಪ್ಟೆಂಬರ್ 30 ಮತ್ತು ಅಕ್ಟೋಬರ್ 1ರಂದು ಯುಪಿಎಸ್ಸಿ ಆಯೋಜಿಸಿದ್ದ ಎರಡು ದಿನಗಳ ಕಾರ್ಯಕ್ರಮದ ಭಾಗವಾಗಿತ್ತು.
- ಭಾರತ ಮಂಟಪದಲ್ಲಿ ಮೊದಲ ದಿನದಂದು, 'ಶತಮಾನೋತ್ಸವ ಆಚರಣೆ – ಮಂಥನ' ಕಾರ್ಯಕ್ರಮ ನಡೆಯಿತು. ಇದರಲ್ಲಿ ಗಣ್ಯ ಭಾಷಣಕಾರರು ಮಾತನಾಡಿದರು, ನಂತರ ವಿವಿಧ ವಿಷಯಗಳ ಕುರಿತು ಚರ್ಚಾಗೋಷ್ಠಿಗಳು ನಡೆದವು.

ಪ್ರತಿಭೆಗಳ ವಿಶಾಲ ಸಮೂಹ

1976

- ಯು ಪಿ ಎಸ್ ಸಿ ತನ್ನ 50ನೇ ವಾರ್ಷಿಕೋತ್ಸವವನ್ನು ಆಚರಿಸಿಕೊಂಡ 1976ನೇ ಇಸವಿಗೆ ಹೋಲಿಸಿದರೆ, ಪರೀಕ್ಷೆ ಬರೆಯುವ ಅಭ್ಯರ್ಥಿಗಳ ಸಂಖ್ಯೆಯು 45 ಪಟ್ಟು ಹೆಚ್ಚಾಗಿದೆ.

1952

- 1952ರಲ್ಲಿ ನಾಗರಿಕ ಸೇವೆಗಳ ಅಭ್ಯರ್ಥಿಗಳ ಪೈಕಿ ಕೇವಲ ಶೇ. 3 ರಷ್ಟು ಮಹಿಳೆಯರಿದ್ದು, ಇಂದು ಈ ಪ್ರಮಾಣ ಶೇ. 30ಕ್ಕಿಂತ ಅಧಿಕವಾಗಿದೆ.

2014

- ಯು ಪಿ ಎಸ್ ಸಿ ಯ ಇಡೀ ಇತಿಹಾಸದಲ್ಲಿ ನಾಲ್ವರು ಮಹಿಳೆಯರು ಅಧ್ಯಕ್ಷರಾಗಿದ್ದು, ಈ ಪೈಕಿ ಮೂವರು 2014ರ ನಂತರ ನೇಮಕಗೊಂಡಿದ್ದಾರೆ.

ತಡೆದರು ಎಂಬ ಇಸ್ರೇಲ್ ಪ್ರಧಾನಿಯವರ ಅಭಿಪ್ರಾಯವನ್ನೂ ಉಲ್ಲೇಖಿಸಿದರು. ಸ್ಮಿತ್ ಅವರ ಈ ಶೌರ್ಯವು ಪ್ರತಿಯೊಬ್ಬ ನಾಗರಿಕರಲ್ಲೂ ಹೆಮ್ಮೆಯ ಭಾವ ತುಂಬಿದೆ. "ಸ್ಮಿತ್ ಅವರಿಗೆ ದೀರ್ಘಾಯುಷ್ಯ ಮತ್ತು ಉತ್ತಮ ಆರೋಗ್ಯಕ್ಕಾಗಿ ನಾವೆಲ್ಲರೂ ಪ್ರಾರ್ಥಿಸೋಣ ಹಾಗೂ ಭಾರತದ ಕೀರ್ತಿಯನ್ನು ಹೆಚ್ಚಿಸಿರುವ ನಮ್ಮ ಸಹೋದರ ಸ್ಮಿತ್ ಅವರಿಗೆ ವಂದಿಸೋಣ ಎಂದು ನಾನು ದೇಶದ ಜನರಲ್ಲಿ ಮನವಿ ಮಾಡುತ್ತೇನೆ" ಎಂಬುದಾಗಿ ಪ್ರಧಾನಮಂತ್ರಿ ಹೇಳಿದ್ದಾರೆ. ●

ಪಿಎಂ-ಜನ್ ಮನ್ ನ ಮೂರು ವರ್ಷಗಳು

ಬುಡಕಟ್ಟು ಸಮುದಾಯದ ಉನ್ನತಿ...

ಬುಡಕಟ್ಟು ಗರಿಮೆಯ ಆಚರಣೆಯ ಮೂಲಕ ಭವಿಷ್ಯದ ಪೀಳಿಗೆಗೆ ಪ್ರೇರಣೆ

"ನನ್ನ ದೇಶದ ಭವಿಷ್ಯದ ಪೀಳಿಗೆಯು ನನ್ನ ಬುಡಕಟ್ಟು ಜನಾಂಗದ ಸಹೋದರರು ಕಾಡುಗಳಲ್ಲಿ – ಬೆಟ್ಟ ಗುಡ್ಡಗಳಲ್ಲಿ ವಾಸಿಸುತ್ತಿದ್ದರು, ಕೆಲವೊಮ್ಮೆ ಅವರಿಗೆ ಧರಿಸಲು ಕನಿಷ್ಠ ಬಟ್ಟೆಗಳೂ ಇರಲಿಲ್ಲ, ಆದರೂ, ಭಾರತ ಮಾತೆಯ ಸ್ವಾತಂತ್ರ್ಯಕ್ಕಾಗಿ ತ್ಯಾಗ ಮಾಡಲು ಅವರು ಎಂದಿಗೂ ಹಿಂಜರಿಯಲಿಲ್ಲ ಎಂಬುದನ್ನು ಅರಿಯಬೇಕು. ಅವರು ಗೌರವ ಮತ್ತು ಮನ್ನಣೆಗೆ ಅರ್ಹರಾಗಿದ್ದು, ಮುಂದಿನ ಪೀಳಿಗೆಯವರು ಅವರಿಂದ ಪ್ರೇರಣೆ ಪಡೆಯಬೇಕು." ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ಫಲವಾಗಿ, 2021ರಿಂದ ನವೆಂಬರ್ 15ರಂದು 'ಜನಜಾತೀಯ ಗೌರವ ದಿನ' ಆಚರಿಸಲಾಗುತ್ತಿದೆ. ಇದರ ಮುಂದುವರಿದ ಕ್ರಮವಾಗಿ, 2023ರಲ್ಲಿ 'ಪ್ರಧಾನಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನ' (ಪಿಎಂ – ಜನ್ ಮನ್) ಅನ್ನು ಆರಂಭಿಸಲಾಯಿತು; ಇದು ಅತ್ಯಂತ ದುರ್ಬಲ ಸ್ಥಿತಿಯಲ್ಲಿರುವ 75 ಬುಡಕಟ್ಟು ಗುಂಪು (ಪಿವಿಟಿಜಿ) ಗಳ ಏಳಿಗೆಗೆ ನಾಂದಿ ಹಾಡಿತು.

2011 ರ ಜನಗಣತಿಯ ಪ್ರಕಾರ ಭಾರತವು ಒಟ್ಟು 10.45 ಕೋಟಿ ಜನಸಂಖ್ಯೆಯ 750 ಬುಡಕಟ್ಟು ಗುಂಪುಗಳಿಗೆ ನೆಲೆಯಾಗಿದೆ. ಇವುಗಳ ಪೈಕಿ 75 ಗುಂಪುಗಳನ್ನು 'ನಿರ್ದಿಷ್ಟ ದುರ್ಬಲ ಬುಡಕಟ್ಟು ಗುಂಪುಗಳು' ಎಂದು ವರ್ಗೀಕರಿಸಲಾಗಿದೆ. ಬುಡಕಟ್ಟು ಸಮುದಾಯಗಳ ಏಳಿಗೆಗಾಗಿ ಮೀಸಲಾತಿಯನ್ನು ಕಲ್ಪಿಸಲಾಗಿದ್ದರೂ, ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರವು ಅವರತ್ತ ಹೆಚ್ಚಿನ ಗಮನ ಹರಿಸಿತು. ಈ ಸಮುದಾಯದ ಆಶೋತ್ತರಗಳನ್ನು ಅರ್ಥಮಾಡಿಕೊಳ್ಳಲು ಗಂಭೀರ ಪ್ರಯತ್ನಗಳನ್ನು ಮಾಡಲಾಯಿತು. ಬುಡಕಟ್ಟು ಸಮುದಾಯಗಳನ್ನು ಮೇಲೆತ್ತಲು ಮತ್ತು ಅದು ಸಮೃದ್ಧಿ ಹೊಂದುವಂತಾಗಲು 1999ರಲ್ಲಿ ಬುಡಕಟ್ಟು ಜನಾಂಗಗಳಿಗಾಗಿಯೇ ಪ್ರತ್ಯೇಕ ಸಚಿವಾಲಯವನ್ನು ಸ್ಥಾಪಿಸಲಾಯಿತು; ಅಲ್ಲದೆ, 89ನೇ ಸಾಂವಿಧಾನಿಕ ತಿದ್ದುಪಡಿಯ ಮೂಲಕ 'ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ'ವನ್ನೂ ರಚಿಸಲಾಯಿತು. ಈ ಪರಂಪರೆಯನ್ನು ಮುಂದುವರಿಸುತ್ತಾ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿನ ಪ್ರಸ್ತುತ ಸರ್ಕಾರವು ಕಳೆದ 12 ವರ್ಷಗಳಲ್ಲಿ, ಬುಡಕಟ್ಟು ಸಮುದಾಯದ ಗರಿಮೆ ಮತ್ತು ಅವರ ಕೊಡುಗೆಗಳನ್ನು ಸಕ್ರಿಯವಾಗಿ ಸಾರಿದ್ದು, ಮುಂದಿನ ಪೀಳಿಗೆಯು ಅವರ ಪಾತ್ರವನ್ನು ಗೌರವದಿಂದ ಸ್ಮರಿಸಬಹುದಾಗಿದೆ. ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರ ಮತ್ತು ವಸಾಹತುಶಾಹಿ ವಿರೋಧಿ ಕಾರ್ಯಕರ್ತರಾದ ಬಿರ್ಸಾ ಮುಂಡಾ ಅವರ ಜನ್ಮದಿನದ ಸ್ಮರಣಾರ್ಥ ಪ್ರತಿ ವರ್ಷ ನವೆಂಬರ್ 15 ಅನ್ನು 'ಜನಜಾತೀಯ ಗೌರವ ದಿನ' ಎಂದು ಆಚರಿಸಲಾಗುತ್ತದೆ. ಬಿರ್ಸಾ ಮುಂಡಾ ಅವರು 1874 ರಲ್ಲಿ ಜನಿಸಿದ್ದು, ಅವರ 150ನೇ ಜನ್ಮ ವರ್ಷಾಚರಣೆಯ ಅಂಗವಾಗಿ 2024-25ನೇ ವರ್ಷವನ್ನು ಸಹ 'ಜನಜಾತೀಯ ಗೌರವ ವರ್ಷ' ಆಗಿ ಆಚರಿಸಲಾಯಿತು.

> **ಅಟಲ್ ಜಿ ಸರ್ಕಾರವೇ ಬುಡಕಟ್ಟು ಸಮುದಾಯಕ್ಕಾಗಿ ಪ್ರತ್ಯೇಕ ಸಚಿವಾಲಯವನ್ನು ಸ್ಥಾಪಿಸಿತು ಮತ್ತು ಅದಕ್ಕಾಗಿ ಪ್ರತ್ಯೇಕ ಬಜೆಟ್ ಮೀಸಲಿಟ್ಟಿತ್ತು. ನಮ್ಮ ಸರ್ಕಾರದ ಅವಧಿಯಲ್ಲಿ, ಬುಡಕಟ್ಟು ಕಲ್ಯಾಣಕ್ಕಾಗಿ ಮೀಸಲಿಟ್ಟ ಬಜೆಟ್ ಮೊತ್ತವು ಹಿಂದಿನದಕ್ಕೆ ಹೋಲಿಸಿದರೆ ಈಗ ಆರು ಪಟ್ಟು ಹೆಚ್ಚಾಗಿದೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*



ಪಿಎಂ-ಜನ್ ಮನ್... ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳ ಸುಧಾರಣೆ

ಭಾರತ ಸರ್ಕಾರವು ಬುಡಕಟ್ಟು ಸಮುದಾಯಗಳಿಗಾಗಿ ಪ್ರಧಾನಮಂತ್ರಿ ಜಂಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನ (ಪಿಎಂ – ಜನ್ ಮನ್); ಧರ್ತಿ ಆಬಾ ಜನಜಾತೀಯ ಗ್ರಾಮ



ಪಿಎಂ-ಜನ್ ಮನ್ ಅಡಿಯಲ್ಲಿ ಕೈಗೊಂಡ ಕ್ರಮಗಳು

ಕ್ರಮ	ಅನುಮೋದಿತ ಸಂಖ್ಯೆ
ಪ್ರಧಾನಮಂತ್ರಿ ಆವಾಸ್ ಯೋಜನೆ – ಗ್ರಾಮೀಣ (ಪಿಎಂಎವೈ – ಜಿ) ಅಡಿಯಲ್ಲಿ ವಸತಿ	4.82 ಲಕ್ಷ
ಪ್ರಧಾನಮಂತ್ರಿ ಗ್ರಾಮ್ ಸಡಕ್ ಯೋಜನೆ (ಪಿಎಂ ಜಿ ಎಸ್ ವೈ) ಅಡಿಯಲ್ಲಿ ರಸ್ತೆಗಳು	7,992 ಕಿಮೀ
ಜಲ್ ಜೀವನ್ ಮಿಷನ್ (ಜೆಜೆಎಂ) ಅಡಿಯಲ್ಲಿ ಅನುಮೋದನೆಗೊಂಡ ಗ್ರಾಮಗಳು	18,756
ಸಂಚಾರಿ ವೈದ್ಯಕೀಯ ಘಟಕಗಳು	831
ಅನುಮೋದಿತ ಅಂಗನವಾಡಿ ಕೇಂದ್ರಗಳು	2,498
ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಅನುಮೋದಿತ ಕಾಮಗಾರಿಗಳು	500
ವಿದ್ಯುದೀಕರಣಕ್ಕೆ ಅನುಮೋದಿತ ವಸತಿಗಳು	1.54 ಲಕ್ಷ
ಸಂಪರ್ಕ ವ್ಯಾಪ್ತಿಗಾಗಿ ಆಯ್ಕೆಯಾಗಿರುವ ವಾಸಸ್ಥಾನಗಳು	4,347
ಅಭಿವೃದ್ಧಿ ಕೇಂದ್ರಗಳು ಮತ್ತು ಬಹುಪಯೋಗಿ ಕೇಂದ್ರಗಳು	1,540
ವನ ಧನ ವಿಕಾಸ ಕೇಂದ್ರಗಳು	500

ಧರ್ತಿ ಆಬಾ ಜನಜಾತೀಯ ಗ್ರಾಮ ಉತ್ಕರ್ಷ್ ಅಭಿಯಾನದ ಅಡಿಯಲ್ಲಿ ದುರ್ಬಲ ವರ್ಗದವರನ್ನು ಮೇಲೆತ್ತಲು 25 ಕ್ರಮಗಳು

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2024ರ ಅಕ್ಟೋಬರ್ 2 ರಂದು 'ಧರ್ತಿ ಆಭಾ ಜನಜಾತೀಯ ಗ್ರಾಮ ಉತ್ಕರ್ಷ್ ಅಭಿಯಾನ'ಕ್ಕೆ ಚಾಲನೆ ನೀಡಿದರು. ಇದರಡಿ ಬುಡಕಟ್ಟು ಹಳ್ಳಿಗಳ ಸಾಮಾಜಿಕ-ಆರ್ಥಿಕ ಪರಿಸ್ಥಿತಿ ಸುಧಾರಿಸಲು 17 ಸಚಿವಾಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ಅಭಿಯಾನವು ಮುಂದಿನ ಐದು ವರ್ಷಗಳಲ್ಲಿ 63,843 ಹಳ್ಳಿಗಳಲ್ಲಿ ಮೂಲಸೌಕರ್ಯ ಕೊರತೆಗಳನ್ನು ನೀಗಿಸಲು 25 ಕ್ರಮಗಳನ್ನು ಜಾರಿಗೊಳಿಸುವ ಗುರಿಯನ್ನು ಹೊಂದಿದೆ; ಇದರಲ್ಲಿ ಆರೋಗ್ಯ, ಶಿಕ್ಷಣ ಮತ್ತು ಅಂಗನವಾಡಿ ಸೌಲಭ್ಯಗಳಿಗೆ ಪ್ರವೇಶಾವಕಾಶವನ್ನು ಸುಧಾರಿಸುವುದು ಸೇರಿದೆ. ಇದು 30 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 549 ಜಿಲ್ಲೆಗಳಲ್ಲಿ ವಾಸವಿರುವ 5 ಕೋಟಿಗೂ ಹೆಚ್ಚು ಜನರಿಗೆ ಜೀವನೋಪಾಯದ ಅವಕಾಶಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ.

ಪ್ರಧಾನಮಂತ್ರಿ ಆವಾಸ್ ಯೋಜನೆ – ಗ್ರಾಮೀಣ (ಪಿಎಂಎವೈ-ಜಿ) ಅಡಿಯಲ್ಲಿ **20 ಲಕ್ಷ** ಮನೆಗಳನ್ನು ಒದಗಿಸಲಾಗುವುದು

ಪ್ರಧಾನಮಂತ್ರಿ ಉಜ್ವಲ ಯೋಜನೆಯಡಿ **25 ಲಕ್ಷ** ಅಡುಗೆ ಅನಿಲ (ಎಲ್ ಪಿ ಜಿ) ಸಂಪರ್ಕ ಒದಗಿಸಲಾಗುವುದು

25,000 ಕಿ.ಮೀ ರಸ್ತೆಗಳನ್ನು ನಿರ್ಮಿಸಲಾಗುವುದು

1,000 ಸಂಚಾರಿ ವೈದ್ಯಕೀಯ ಘಟಕಗಳನ್ನು ಪ್ರಾರಂಭಿಸಲಾಗುವುದು

- 'ಪ್ರತಿ ಮನೆಗೂ ನಲ್ಲಿಯ ಮೂಲಕ ನೀರು' (ಹರ್ ಘರ್ ನಲ್ ಸೆ ಜಲ್) ಯೋಜನೆಯನ್ನು ಎಲ್ಲಾ ಹಳ್ಳಿಗಳಿಗೂ ಸಂಪೂರ್ಣವಾಗಿ ತಲುಪಿಸಲಾಗುವುದು.
- 2,000 ಸಂಸ್ಥೆಗಳಲ್ಲಿ ಮೇಲ್ಛಾವಣಿ ಸೌರ ವಿದ್ಯುತ್ ವ್ಯವಸ್ಥೆ ಅಳವಡಿಸಲಾಗಿದೆ.
- ಪೋಷಣ್ 2.0 ಅಡಿಯಲ್ಲಿ 2,000 ಹೊಸ ಅಂಗನವಾಡಿಗಳನ್ನು ತೆರೆಯಲಾಗುವುದು.
- ಸಮಗ್ರ ಶಿಕ್ಷಾ ಅಭಿಯಾನದಡಿಯಲ್ಲಿ 1,000 ಹಾಸ್ಟೆಲ್ ಗಳನ್ನು ನಿರ್ಮಿಸಲಾಗುವುದು.
- 1,000 ವನ ಧನ ವಿಕಾಸ ಕೇಂದ್ರಗಳು ಮತ್ತು 30 ಕೌಶಲ್ಯ ಕೇಂದ್ರಗಳು.
- 700 ಪೋಷಣ ವನಗಳು; 1,000 ಹೋಂಸ್ಟೇಗಳು.

ಉತ್ಕರ್ಷ್ ಅಭಿಯಾನ (ಡಿಎಜೆಜಿಯುಎ) ಸೇರಿದಂತೆ ಹಲವಾರು ಯೋಜನೆಗಳನ್ನು ಪ್ರಾರಂಭಿಸಿದ್ದು ಈ ಸಮುದಾಯಗಳ ಸಾಮಾಜಿಕ-ಆರ್ಥಿಕ ಸ್ಥಿತಿ ಸುಧಾರಣೆಯಾಗುತ್ತಿದೆ. ಪ್ರಧಾನಮಂತ್ರಿಯವರಿಂದ 2023ರಲ್ಲಿ 'ಜನಜಾತೀಯ ಗೌರವ ದಿನ'ದಂದು ಪ್ರಾರಂಭಿಸಲಾದ 'ಪಿಎಂ-ಜನ್ ಮನ್' ಅಭಿಯಾನವು, ದೇಶಾದ್ಯಂತದ 'ನಿರ್ದಿಷ್ಟ ದುರ್ಬಲ ಬುಡಕಟ್ಟು ಗುಂಪು' (ಪಿವಿಟಿಜಿ)ಗಳಿಗೆ ಸೇರಿದ ಜನರ ಸರ್ವತೋಮುಖ ಅಭಿವೃದ್ಧಿಯನ್ನು ಖಚಿತಪಡಿಸುವ ಗುರಿಯನ್ನು ಹೊಂದಿದೆ. ಈ ಅಭಿಯಾನಕ್ಕಾಗಿ ₹24,000 ಕೋಟಿಗೂ ಹೆಚ್ಚಿನ ಮೊತ್ತವನ್ನು ವಿನಿಯೋಗಿಸಲಾಗುತ್ತಿದೆ. ಇದು ಸುರಕ್ಷಿತ ವಸತಿ, ಶುದ್ಧ ಕುಡಿಯುವ ನೀರು, ಶಿಕ್ಷಣ, ಆರೋಗ್ಯ ಮತ್ತು ಪೋಷಣೆಯ ಸುಧಾರಿತ ಲಭ್ಯತೆ, ರಸ್ತೆ ಹಾಗೂ ದೂರಸಂವಹನ ಸಂಪರ್ಕ ವ್ಯವಸ್ಥೆ, ವಿದ್ಯುತ್ ಸೌಲಭ್ಯವಿಲ್ಲದ ಮನೆಗಳ ವಿದ್ಯುದ್ದೀಕರಣ ಮತ್ತು ಸುಸ್ಥಿರ ಜೀವನೋಪಾಯದ ಅವಕಾಶಗಳನ್ನು ಒದಗಿಸಿದೆ. ಈ ಯೋಜನೆಯಡಿಯಲ್ಲಿ, ಪಿವಿಟಿಜಿ ಸಮುದಾಯಗಳ ಔನ್ನತ್ಯಕ್ಕಾಗಿ 11 ಬಗೆಯ ಕ್ರಮಗಳನ್ನು ಜಾರಿಗೊಳಿಸಲು ಒಂಭತ್ತು ಸಚಿವಾಲಯಗಳು ಒಟ್ಟಾಗಿ ಕಾರ್ಯನಿರ್ವಹಿಸುತ್ತಿವೆ.

ಮೊಬೈಲ್ ಅಪ್ಲಿಕೇಶನ್ ಮೂಲಕ ದತ್ತಾಂಶ ಸಂಗ್ರಹ

ಪಿಎಂ – ಜನ್ ಮನ್ ಅಡಿಯಲ್ಲಿ ಬರುವ ಹಳ್ಳಿಗಳು ಮತ್ತು ವಸಾಹತುಗಳಲ್ಲಿನ ಪಿವಿಟಿಜಿ ಜನಸಂಖ್ಯೆ ಹಾಗೂ ಮೂಲಸೌಕರ್ಯ ಸ್ಥಿತಿಗತಿ ಕುರಿತಾದ ದತ್ತಾಂಶವನ್ನು ಸಂಗ್ರಹಿಸಲು 'ಪಿಎಂ ಗತಿಶಕ್ತಿ' ಮೊಬೈಲ್ ಅಪ್ಲಿಕೇಶನ್ ಅನ್ನು ಬಳಸಲಾಯಿತು. 19 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 12.36 ಲಕ್ಷ ಪಿವಿಟಿಜಿ ಕುಟುಂಬಗಳಿದ್ದು, ಅವುಗಳ ಒಟ್ಟು ಜನಸಂಖ್ಯೆ 48.52 ಲಕ್ಷ ಎಂದು ದತ್ತಾಂಶ ತಿಳಿಸಿದೆ. ಬುಡಕಟ್ಟು ಸಮುದಾಯದ ಅತ್ಯಂತ ಅಂಚಿಗೆ ತಳ್ಳಲ್ಪಟ್ಟ ವರ್ಗಗಳನ್ನು 75 'ನಿರ್ದಿಷ್ಟ ದುರ್ಬಲ ಬುಡಕಟ್ಟು ಗುಂಪುಗಳು' (ಪಿವಿಟಿಜಿ ಗಳು) ಪ್ರತಿನಿಧಿಸಿದ್ದು, ಇವು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ನಿರಂತರ ಅಭದ್ರತೆಯನ್ನು ಎದುರಿಸುತ್ತಾ ಬಂದಿವೆ. ●



ಬ್ಲೂಮ್ ಬರ್ಗ್ | *ಹೊಸ ಆರ್ಥಿಕ ವೇದಿಕೆ 2026*

ಬ್ಲೂಮ್ ಬರ್ಗ್ ಹೊಸ ಆರ್ಥಿಕ ವೇದಿಕೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಭಾಷಣ

ಸಬಲೀಕರಣಕ್ಕೆ ಅಧಿಕಾರದ ಬಲ

ಅಧಿಕಾರ ಯಾರ ಕೈಯಲ್ಲಿದೆ ಎಂಬುದು ಮುಖ್ಯವಲ್ಲ, ಬದಲಾಗಿ ಅದನ್ನು ಹೇಗೆ ಬಳಸಲಾಗುತ್ತಿದೆ ಎಂಬುದು ಮುಖ್ಯ.. ತಂತ್ರಜ್ಞಾನದ ಪ್ರಯೋಜನಗಳು ಆಯ್ದ ಕೆಲವರಿಗೆ ಸೀಮಿತವಾಗಲಿದೆಯೇ ಅಥವಾ ಅವು ಲಕ್ಷಾಂತರ ಜನರಿಗೆ ಹೊಸ ಅವಕಾಶಗಳನ್ನು ಸೃಜಿಸಲಿವೆಯೇ? ಜ್ಞಾನವು ಕೆಲವೇ ಕೆಲವು ವ್ಯಕ್ತಿಗಳಿಗೆ ಸೀಮಿತವಾಗಿ ಉಳಿಯಲಿದೆಯೇ ಅಥವಾ ಅದು ಪ್ರತಿಯೊಬ್ಬ ವ್ಯಕ್ತಿಯ ಸಾಮರ್ಥ್ಯವನ್ನು ವರ್ಧಿಸಲಿದೆಯೇ? ನವದೆಹಲಿಯಲ್ಲಿ ಅಕ್ಟೋಬರ್ 13 ರಂದು ನಡೆದ 'ಬ್ಲೂಮ್ ಬರ್ಗ್ ಹೊಸ ಆರ್ಥಿಕ ವೇದಿಕೆ (ನ್ಯೂ ಎಕಾನಮಿ ಫೋರಮ್)'ನಲ್ಲಿ ಈ ಪ್ರಶ್ನೆಗಳನ್ನು ಮುಂದಿಡುತ್ತಾ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, "ಇಂದು ನಾನು 'ಸಬಲೀಕರಣಕ್ಕಾಗಿ ಅಧಿಕಾರ' ಎಂಬ ಮುನ್ನೋಟದೊಂದಿಗೆ ನಿಮ್ಮ ಮುಂದಿದ್ದೇನೆ..." ಎಂದು ಹೇಳಿದರು.

ಹೀಗೊಂದು ಸುಭಾಷಿತವಿದೆ: ವಿದ್ಯಾ ವಿವಾದಾಯ ಧನಂ ಮದಾಯ ಶಕ್ತಿಃ ಪರೇಷಾಂ ಪರಿಪೀಡನಾಯ| ಖಲಸ್ಯ ಸಾಧೋರ್ವಿಪರೀತಮೇತತ್ ಜ್ಞಾನಾಯ ದಾನಾಯ ಚ ರಕ್ಷಣಾಯ|| ಇದರ ಸಾರವಿದು: ಜ್ಞಾನ, ಸಂಪತ್ತು ಅಥವಾ ಅಧಿಕಾರವನ್ನು ಯಾರೇ ಹೊಂದಿರಲಿ, ಅವುಗಳನ್ನು ಬಳಸುವ ರೀತಿಯೇ ಮುಖ್ಯವಾಗಿರುತ್ತದೆ. ಅಂದರೆ ಅಧಿಕಾರದ ನಿಜವಾದ ಮೌಲ್ಯವು ಅದರ ಉದ್ದೇಶದಲ್ಲಿ ಅಡಗಿರುತ್ತದೆ ಎಂಬುದು ಇಂದಿನ ಕಾಲಘಟ್ಟದಲ್ಲಿ ಅರ್ಥಮಾಡಿಕೊಳ್ಳಬೇಕಾದ ಅತ್ಯಂತ ಪ್ರಮುಖವಾದ ವಿಷಯವಾಗಿದೆ. ಅಧಿಕಾರವನ್ನು ಇತರರ ಸಬಲೀಕರಣಕ್ಕೆ ಬಳಸಬೇಕು ಎಂಬ ಮಾನವೀಯ ಮನೋಭಾವವು ಕೇವಲ ಇತರರಿಗೆ ಬೋಧನೆ ಮಾಡಲು ಸೀಮಿತವಲ್ಲ, ಸಾವಿರಾರು ವರ್ಷಗಳಷ್ಟು ಹಳೆಯ ಸಂಪ್ರದಾಯಗಳು ನಮಗೆ ಕಲಿಸಿರುವ ಪಾಠ ಇದಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಭಾಷಣದಲ್ಲಿ ಒತ್ತಿ ಹೇಳಿದ್ದಾರೆ. ಭಾರತದಲ್ಲಿ ನಾವು ನಮ್ಮ ಆಡಳಿತ ವ್ಯವಸ್ಥೆ ಮತ್ತು ಕಾರ್ಯ ಸಂಸ್ಕೃತಿಯಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಾಬೀತುಪಡಿಸಿದ್ದೇವೆ ಎಂದು ಅವರು ಹೇಳಿದ್ದಾರೆ.

ಅವಕಾಶಗಳನ್ನೂ ಬೆಸೆದಿರುವ ಸಂಪರ್ಕ ವ್ಯವಸ್ಥೆ

ಸುಮಾರು 12–13 ವರ್ಷಗಳ ಹಿಂದಿನವರೆಗೂ, ಭಾರತದಲ್ಲಿ ಮೊಬೈಲ್ ಫೋನ್ ಮತ್ತು ಅಂತರ್ಜಾಲದ ಲಭ್ಯತೆಯೇ ಸ್ವತಃ ಒಂದು ರೀತಿಯ ಅಧಿಕಾರ ಬಲದಂತಿತ್ತು. 2014ರ ನಂತರ, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡ ಬಳಿಕ, ಮೊಬೈಲ್ ಡೇಟಾ ಕೈಗೆಟುಕುವ ದರದಲ್ಲಿ ಲಭ್ಯವಾಗುವಂತೆ ಮಾಡಲು ಆದ್ಯತೆ ನೀಡಿತು. ಪರಿಣಾಮವಾಗಿ, ಇಂದು ಸಣ್ಣ ಪಟ್ಟಣದ ವಿದ್ಯಾರ್ಥಿಯೂ ಡಿಜಿಟಲ್ ಕಲಿಕೆಯನ್ನು ಪಡೆಯಬಹುದಾಗಿದ್ದು, ಹಳ್ಳಿಯ ಅಂಗಡಿ ಮಾಲೀಕರು ಹೊಸ ಗ್ರಾಹಕರನ್ನು ತಲುಪಲು ಸಾಧ್ಯವಾಗಿದೆ ಮತ್ತು ಯುವಜನರು ಹೊಸ ಆನ್ ಲೈನ್ ಕೋರ್ಸ್ ಗಳಿಗೆ ನೋಂದಾಯಿಸಿಕೊಳ್ಳಬಹುದಾಗಿದೆ. ಇದನ್ನು ಹೀಗೂ ಹೇಳಬಹುದು, ಭಾರತದಲ್ಲಿನ ಸಂಪರ್ಕ ವ್ಯವಸ್ಥೆಯು ಕೇವಲ ಜನರನ್ನು ಮಾತ್ರ ಸಂಪರ್ಕಿಸಿಲ್ಲ, ಸುವರ್ಣ ಅವಕಾಶಗಳನ್ನೂ ಕೂಡ ಪರಸ್ಪರ ಬೆಸೆದಿದೆ. ಇದೇ ಸ್ವಾವಲಂಬನೆಗೆ ಅಧಿಕಾರದ ಬಲ.

ಬ್ಲೂಮ್ ಬರ್ಗ್ ಆರ್ಥಿಕ ವೇದಿಕೆಯು ಈ ವರ್ಷ, ಜಗತ್ತಿನಾದ್ಯಂತ ಉದಯಿಸುತ್ತಿರುವ ಹೊಸ ಶಕ್ತಿಗಳ ಬಗ್ಗೆ ಕೇಂದ್ರೀಕರಿಸಿದೆ

ಭಾರತ ಇವುಗಳನ್ನು ಪರಿಚಯಿಸಿದೆ –

- ಅಂತಾರಾಷ್ಟ್ರೀಯ ಸೌರ ಮೈತ್ರಿ
- ವಿಪತ್ತು-ನಿರೋಧಕ ಮೂಲಸೌಕರ್ಯಕ್ಕಾಗಿ ಮೈತ್ರಿ
- ಬಿಗ್ ಕ್ಯಾಟ್ ಮೈತ್ರಿ (ಬೆಕ್ಕಿನ ಜಾತಿಯ ಪ್ರಾಣಿಗಳ ಸಂರಕ್ಷಣೆಗಾಗಿನ ಒಕ್ಕೂಟ).
- ಜಾಗತಿಕ ಜೈವಿಕ ಇಂಧನ ಮೈತ್ರಿ
- ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್ (ಐ ಎಂ ಇ ಸಿ)
- ಮಿಷನ್ ಲೈಫ್ (LiFE - ಪರಿಸರಕ್ಕಾಗಿ ಜೀವನಶೈಲಿ) — ಸಾಮೂಹಿಕ ಒಳಿತಿನ ಉದ್ದೇಶದ ಉಪಕ್ರಮಗಳು.

ಭಾರತ ಈ ಪರಿಕಲ್ಪನೆಗಳನ್ನು ಮುಂದಿಟ್ಟಿದೆ —

- ಒಂದು ಸೂರ್ಯ, ಒಂದು ಜಗತ್ತು, ಒಂದು ಗ್ರಿಡ್.
- ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ.

ಇಂತಹ ಸನ್ನಿವೇಶಗಳಲ್ಲಿಯೂ ಸಹ, ಅಧಿಕಾರದ ಬಲವನ್ನು ಇತರರ ಸಬಲೀಕರಣಕ್ಕೆ ಮಾತ್ರ ಬಳಸಲಾಗುತ್ತದೆ.

$700 ಶತಕೋಟಿ ದಾಟಿದ ವಿದೇಶಿ ವಿನಿಮಯ ಮೀಸಲು —

- ಭಾರತವು ಪ್ರಸ್ತುತ 700 ಶತಕೋಟಿ ಡಾಲರ್ ಗಿಂತಲೂ ಹೆಚ್ಚಿನ ವಿದೇಶಿ ವಿನಿಮಯ ಮೀಸಲು ನಿಧಿಯನ್ನು ಹೊಂದಿದೆ.
- ಈ ಹಣಕಾಸು ವರ್ಷದ ಏಪ್ರಿಲ್ - ಜೂನ್ ತ್ರೈಮಾಸಿಕದಲ್ಲಿ ಭಾರತದ ಬೆಳವಣಿಗೆ ದರವು 7.8% ರಷ್ಟಿತ್ತು.

ಡಿಜಿಟಲ್ ಶಕ್ತಿಯ ಪ್ರಮುಖ ಪಾತ್ರ

- **100** ಕ್ಕೂ ಹೆಚ್ಚು ಭಾಷೆಗಳು
- **1,000+** ಅಧಿಕ ಉಪಗ್ರಹ ವಾಹಿನಿಗಳು
- **80,000** ನೋಂದಾಯಿತ ವೃತ್ತಪತ್ರಿಕೆಗಳು
- **50+** ದಶಲಕ್ಷ ಯೂಟ್ಯೂಬ್ ಬಳಕೆದಾರರು
- **50** ದಶಲಕ್ಷ ಇನ್ ಸ್ಟಾಗ್ರಾಮ್ ಬಳಕೆದಾರರು



ಸ್ಟಾರ್ಟ್ ಅಪ್ ಗಳು

- **2.50** ಲಕ್ಷಕ್ಕೂ ಹೆಚ್ಚು ಸ್ಟಾರ್ಟ್‌ಅಪ್ ಗಳು
- **45 %** ಹೆಚ್ಚು ಸ್ಟಾರ್ಟ್ ಅಪ್ ಗಳಲ್ಲಿ ಕನಿಷ್ಠ ಒಬ್ಬ ಮಹಿಳಾ ನಿರ್ದೇಶಕರು

ಪ್ರಧಾನಮಂತ್ರಿ ಮೋದಿಯವರ ಸಂಪೂರ್ಣ ಕಾರ್ಯಕ್ರಮವನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ

ಪ್ರತಿಯೊಂದು ಯುಗಕ್ಕೂ ಅಧಿಕಾರದ ಕುರಿತಾಗಿ ತನ್ನದೇ ಆದ ಮೂಲ ಮತ್ತು ವ್ಯಾಖ್ಯಾನಗಳಿವೆ. ಆದಾಗ್ಯೂ, 21ನೇ ಶತಮಾನದಲ್ಲಿ — ವಿಶೇಷವಾಗಿ ಈ ಮೂರನೇ ದಶಕದಲ್ಲಿ—ಒಂದು ದೊಡ್ಡ ಬದಲಾವಣೆ ನಡೆಯುತ್ತಿದೆ. ಇಂದು ತಂತ್ರಜ್ಞಾನ, ದತ್ತಾಂಶ, ಜ್ಞಾನ ಮತ್ತು ನಾವೀನ್ಯತೆಗಳು ಅಧಿಕಾರವನ್ನು ರೂಪಿಸುತ್ತಿವೆ.


ನರೇಂದ್ರ ಮೋದಿ, ಪ್ರಧಾನಮಂತ್ರಿ



2026ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಅದ್ಭುತ ಪ್ರದರ್ಶನ

ಒಂದು ಭವ್ಯ ಪಯಣ ಅವಿಸ್ಮರಣೀಯ ಸಾಧನೆ

ದೇಶದ ಉನ್ನತ ನಾಯಕತ್ವವು ಕ್ರೀಡೆ ಮತ್ತು ಕ್ರೀಡಾಪಟುಗಳ ಅಭಿವೃದ್ಧಿಗೆ ಆದ್ಯತೆ ನೀಡಲು ಮುಂದಾದಾಗ, ಅದು ಉತ್ತಮ ಫಲಿತಾಂಶಗಳನ್ನು ತರುತ್ತದೆ. ಇದೇ ಕಾರಣಕ್ಕಾಗಿಯೇ, ಕಳೆದ 12 ವರ್ಷಗಳಲ್ಲಿ ಭಾರತೀಯ ಕ್ರೀಡಾಪಟುಗಳು ತಮ್ಮ ಅತ್ಯುತ್ತಮ ಪ್ರದರ್ಶನಗಳ ಮೂಲಕ ಕ್ರೀಡಾ ರಂಗದಲ್ಲಿ ದೇಶಕ್ಕೆ ಕೀರ್ತಿ ತಂದಿದ್ದಾರೆ. ಈ ಪ್ರವೃತ್ತಿಯು ಏಷ್ಯಾ ಕ್ರೀಡಾಕೂಟ 2026ರಲ್ಲೂ ಮುಂದುವರಿಯಿತು. ಅಲ್ಲಿ ಭಾರತವು 21 ಚಿನ್ನ, 27 ಬೆಳ್ಳಿ ಮತ್ತು 37 ಕಂಚಿನ ಪದಕಗಳನ್ನು ಗೆಲ್ಲುವ ಮೂಲಕ ಪದಕ ಪಟ್ಟಿಯಲ್ಲಿ 4ನೇ ಸ್ಥಾನ ಪಡೆದುಕೊಂಡಿತು.



ಏಷ್ಯಾ ಕ್ರೀಡಾಕೂಟ 2026ರಲ್ಲಿ ಭಾರತವು ಒಟ್ಟು 85 ಪದಕಗಳನ್ನು ಗೆಲ್ಲುವ ಮೂಲಕ ತನ್ನ ಅಭಿಯಾನ ಮುಕ್ತಾಯಗೊಳಿಸಿತು. ಭಾರತೀಯ ಕ್ರೀಡಾಪಟುಗಳ ಅತ್ಯುತ್ತಮ ಪ್ರದರ್ಶನಗಳು ಮತ್ತು ಐತಿಹಾಸಿಕ ಸಾಧನೆಗಳಿಂದ ಕೂಡಿದ ಈ ಪಯಣವನ್ನು ದೇಶವು ದೀರ್ಘಕಾಲ ನೆನಪಿನಲ್ಲಿಟ್ಟುಕೊಳ್ಳಲಿದೆ. ಜಪಾನಿನ ಐಚಿ-ನಗೋಯಾದಲ್ಲಿ ನಡೆದ ಕ್ರೀಡಾಕೂಟದಲ್ಲಿ ಭಾರತವು 21 ಚಿನ್ನ, 27 ಬೆಳ್ಳಿ ಮತ್ತು 37 ಕಂಚಿನ ಪದಕಗಳೊಂದಿಗೆ ಒಟ್ಟು 85 ಪದಕಗಳನ್ನು ಪಡೆದು ನಾಲ್ಕನೇ ಸ್ಥಾನ ಅಲಂಕರಿಸಿತು. ಏಷ್ಯಾ ಕ್ರೀಡಾಕೂಟದ ಇತಿಹಾಸದಲ್ಲಿ ಭಾರತವು ಗಳಿಸಿದ 2ನೇ ಅತಿ ಹೆಚ್ಚು ಪದಕಗಳ ಸಂಖ್ಯೆ ಇದಾಗಿದೆ. ಸಮಾರೋಪ ಸಮಾರಂಭದಲ್ಲಿ ಕ್ರೀಡಾಪಟುಗಳ ಮೆರವಣಿಗೆ ಸೇರಿದಂತೆ ಸಾಂಪ್ರದಾಯಿಕ ಕಾರ್ಯಕ್ರಮಗಳು ನಡೆದ ನಂತರ ಕ್ರೀಡಾಕೂಟವು ಅಧಿಕೃತವಾಗಿ ಮುಕ್ತಾಯಗೊಂಡಿತು.



ಭಾರತವು ಅಥ್ಲೆಟಿಕ್ಸ್‌ನಲ್ಲಿ 24 ಪದಕಗಳು ಮತ್ತು ಶೂಟಿಂಗ್‌ನಲ್ಲಿ 15 ಪದಕಗಳನ್ನು ಗೆದ್ದಿದೆ

ಭಾರತವು ಹಲವಾರು ಐತಿಹಾಸಿಕ ವೈಯಕ್ತಿಕ ಪ್ರದರ್ಶನಗಳನ್ನು ನೀಡಿತು. ಪ್ರಣವಿ ಅರಸ್ ಏಷ್ಯಾ ಕ್ರೀಡಾಕೂಟದ ಗಾಲ್ಫ್‌ನಲ್ಲಿ ವೈಯಕ್ತಿಕ ಚಿನ್ನದ ಪದಕ ಗೆದ್ದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರೆ, 17 ವರ್ಷದ ಕುಂಕುಮ್ ಮೊಹದ್ ಕಾಂಟಿನೆಂಟಲ್ ಕ್ರೀಡಾಕೂಟದಲ್ಲಿ ವೈಯಕ್ತಿಕ ರಿಕರ್ವ್ ನಲ್ಲಿ ಚಿನ್ನದ ಪದಕ ಗೆದ್ದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಹೆಚ್ಚುವರಿಯಾಗಿ, ಲವ್ಲಿನಾ ಬೊರ್ಗೊಹೈನ್ ಮೇರಿ ಕೋಮ್ ನಂತರ ಏಷ್ಯಾ ಕ್ರೀಡಾಕೂಟದ ಬಾಕ್ಸಿಂಗ್‌ನಲ್ಲಿ ಚಿನ್ನದ ಪದಕ ಗೆದ್ದ 2ನೇ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಭಾರತವು ಅಥ್ಲೆಟಿಕ್ಸ್‌ನಲ್ಲಿ 24 ಪದಕಗಳೊಂದಿಗೆ ಅತ್ಯಧಿಕ ಪದಕಗಳನ್ನು ಗಳಿಸಿತು. ಭಾರತವು ಶೂಟಿಂಗ್‌ನಲ್ಲಿ 15 ಪದಕಗಳನ್ನು ಗೆದ್ದಿತು. ಚಿನ್ನದ ಪದಕಗಳ ವಿಷಯದಲ್ಲಿ ಬಿಲ್ಲುಗಾರಿಕೆ ಅತ್ಯಂತ ಯಶಸ್ವಿ ಕ್ರೀಡೆಯಾಗಿದ್ದು, 5 ಚಿನ್ನದ ಪದಕಗಳನ್ನು ಗಳಿಸಿತು.





“

ಏಷ್ಯಾ ಕ್ರೀಡಾಕೂಟವು ಮುಕ್ತಾಯಗೊಳ್ಳುತ್ತಿರುವ ಈ ಸಂದರ್ಭದಲ್ಲಿ ದೃಢ ಸಂಕಲ್ಪ, ಉತ್ಸಾಹ ಮತ್ತು ಅತ್ಯುತ್ತಮ ಕ್ರೀಡಾಸ್ಫೂರ್ತಿಯೊಂದಿಗೆ ನಮ್ಮ ರಾಷ್ಟ್ರವನ್ನು ಪ್ರತಿನಿಧಿಸಿದ ಭಾರತೀಯ ತಂಡದ ಪ್ರತಿಯೊಬ್ಬ ಸದಸ್ಯರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಪದಕ ವಿಜೇತರೆಲ್ಲರಿಗೂ ಅಭಿನಂದನೆಗಳು. ನಿಮ್ಮ ಅದ್ಭುತ ಪ್ರದರ್ಶನವು ದೇಶಕ್ಕೆ ಅಪಾರ ಸಂತೋಷ ತಂದಿದೆ. ಈ ಕ್ರೀಡಾಕೂಟವು ಮುಂದಿನ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಸಾಧನೆಗಳಿಗೆ ಸ್ಫೂರ್ತಿಯಾಗಲಿ, ತಳಮಟ್ಟದಲ್ಲಿ ಕ್ರೀಡೆಯನ್ನು ಬಲಪಡಿಸಲು ಕೊಡುಗೆ ನೀಡಲಿ ಎಂದು ನಾನು ಆಶಿಸುತ್ತೇನೆ.

- ನರೇಂದ್ರ ಮೋದಿ, ಪ್ರಧಾನಮಂತ್ರಿ

ಭಾರತದ ಐತಿಹಾಸಿಕ ಸಾಧನೆಗಳು

ಜಪಾನ್‌ನಲ್ಲಿ ನಡೆದ ಕ್ರೀಡಾಕೂಟದಲ್ಲಿ ಭಾರತವು ಹಲವು ಐತಿಹಾಸಿಕ ಮೈಲಿಗಲ್ಲುಗಳನ್ನು ಸ್ಥಾಪಿಸಿತು. ವಿವಿಧ ಕ್ರೀಡೆಗಳಲ್ಲಿ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿತು. ಭಾರತದ ಪುರುಷರ ಮತ್ತು ಮಹಿಳೆಯರ ಕ್ರಿಕೆಟ್ ತಂಡಗಳೆರಡೂ ಏಷ್ಯನ್ ಪ್ರಶಸ್ತಿಗಳನ್ನು ಉಳಿಸಿಕೊಂಡರೆ, ಕಬಡ್ಡಿ ತಂಡಗಳೆರಡೂ ಚಿನ್ನದ ಪದಕ ಗೆದ್ದುಕೊಂಡವು. ಪುರುಷರ ಹಾಕಿ ತಂಡವು ಮಲೇಷ್ಯಾ ವಿರುದ್ಧ 5-1 ಅಂತರದ ಗೆಲುವಿನೊಂದಿಗೆ ತನ್ನ ಪ್ರಶಸ್ತಿ ಪಡೆದರೆ, ಇತ್ತ ಮಹಿಳಾ ಹಾಕಿ ತಂಡವು ಫೈನಲ್‌ನಲ್ಲಿ ಚೀನಾವನ್ನು 1-0 ಅಂತರದಿಂದ ಸೋಲಿಸುವ ಮೂಲಕ, ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕಕ್ಕಾಗಿ ಇದ್ದ 44 ವರ್ಷಗಳ ಸುದೀರ್ಘ ಕಾಯುವಿಕೆಗೆ ತೆರೆ ಎಳೆಯಿತು. ▪





"ನಮ್ಮ ತ್ರಿವರ್ಣ ಧ್ವಜಕ್ಕೆ ನೀವು ಗೌರವ ತಂದಿದ್ದೀರಿ"

ಕ್ರೀಡಾಪಟುಗಳ ತಂಡದೊಂದಿಗೆ ಪ್ರಧಾನ ಮಂತ್ರಿ ಮೋದಿ ಸಂವಾದ

ಅಕ್ಟೋಬರ್ 15ರ ಸಂಜೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದೆಹಲಿಯ ಮೇಜರ್ ಧ್ಯಾನ್ ಚಂದ್ ರಾಷ್ಟ್ರೀಯ ಕ್ರೀಡಾಂಗಣದಲ್ಲಿ,2026ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಭಾರತೀಯ ಕ್ರೀಡಾಪಟುಗಳ ತಂಡದೊಂದಿಗೆ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಅವರು ಕ್ರೀಡಾಪಟುಗಳನ್ನು ಉದ್ದೇಶಿಸಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಕ್ರೀಡಾಪಟುಗಳು, ಅವರ ತರಬೇತುದಾರರು, ಸಹಾಯಕ ಸಿಬ್ಬಂದಿ, ಭಾರತೀಯ ಒಲಿಂಪಿಕ್ ಸಂಸ್ಥೆಯ ಪದಾಧಿಕಾರಿಗಳು, ವಿವಿಧ ರಾಷ್ಟ್ರೀಯ ಕ್ರೀಡಾ ಒಕ್ಕೂಟಗಳ ಪ್ರತಿನಿಧಿಗಳು ಹಾಗೂ ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಅಧಿಕಾರಿಗಳು ಉಪಸ್ಥಿತರಿದ್ದರು.

ಮಹಿಳಾ ಹಾಕಿ ತಂಡವು 44 ವರ್ಷಗಳ ಸುದೀರ್ಘ ಕಾಯುವಿಕೆಗೆ ತೆರೆ ಎಳೆದು ಚಿನ್ನದ ಪದಕ ಗೆದ್ದು ತಂದಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಶ್ಲಾಘಿಸಿದರು. ಕ್ರಿಕೆಟ್‌ನಲ್ಲಿ ನಮ್ಮ ಪುರುಷ ಮತ್ತು ಮಹಿಳಾ ತಂಡಗಳೆರಡೂ ಸತತ 2ನೇ ಬಾರಿಗೆ ಚಿನ್ನದ ಪದಕಗಳನ್ನು ಗೆದ್ದು ತಂದಿವೆ. ಅಲ್ಲದೆ, 28 ವರ್ಷಗಳ ಸುದೀರ್ಘ ಕಾಲದ ನಂತರ ದೇಶವು ವೇಟ್‌ಲಿಫ್ಟಿಂಗ್‌ನಲ್ಲೂ ಪದಕ ಪಡೆದಿದೆ. ಮಹಿಳಾ ಕ್ರೀಡಾಪಟುಗಳನ್ನು ಶ್ಲಾಘಿಸಿದ ಅವರು, ದೇಶವು ಗೆದ್ದ ಒಟ್ಟು 85 ಪದಕಗಳ ಪೈಕಿ 38 ಪದಕಗಳನ್ನು ನಮ್ಮ ಹೆಣ್ಣು ಮಕ್ಕಳೇ ತಂದುಕೊಟ್ಟಿದ್ದಾರೆ. ಈ ಪದಕಗಳು ಕೇವಲ ಸಂಖ್ಯೆಗಳಲ್ಲ; ಬದಲಾಗಿ, ಇವು 'ನವ ಭಾರತ'ದ ಪ್ರಬಲ ಚಿತ್ರಣವನ್ನು ಪ್ರತಿನಿಧಿಸುತ್ತವೆ ಎಂದು ಶ್ಲಾಘಿಸಿದರು.

ಕಳೆದ 12 ವರ್ಷಗಳಲ್ಲಿ ಭಾರತವು ಅಪಾರ ತಾಳ್ಮೆ ಮತ್ತು ಕಠಿಣ ಪರಿಶ್ರಮದೊಂದಿಗೆ ತನ್ನ ಕ್ರೀಡಾ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡಿದೆ.

"ನೀವು ತ್ರಿವರ್ಣ ಧ್ವಜದ ಹೆಮ್ಮೆ ಹೆಚ್ಚಿಸಿದ್ದೀರಿ, ಅದರ ಘನತೆಯನ್ನು ಎತ್ತಿಹಿಡಿದಿದ್ದೀರಿ. ಅದಕ್ಕಾಗಿಯೇ ನಿಮ್ಮ ಈ ಯಶಸ್ಸು ಕೇವಲ ನಿಮ್ಮದಷ್ಟೇ ಅಲ್ಲ, ಇದು ಈ ದೇಶದ ಕೋಟ್ಯಂತರ ನಾಗರಿಕರ ಯಶಸ್ಸಾಗಿದೆ. ಭಾರತದ ಸಮಸ್ತ ನಾಗರಿಕರ ಪರವಾಗಿ, ನಾನು ನಿಮ್ಮೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

- ನರೇಂದ್ರ ಮೋದಿ, ಪ್ರಧಾನಮಂತ್ರಿ



ಲಡಾಖ್‌ಗೆ ಅಭಿವೃದ್ಧಿ ಉತ್ತೇಜನ

ಯುವ ಪೀಳಿಗೆಯನ್ನು ಗಮನದಲ್ಲಿ ಇಟ್ಟುಕೊಂಡು ಲಡಾಖ್‌ನಲ್ಲಿ ಅಭಿವೃದ್ಧಿ ಮತ್ತು ಸಬಲೀಕರಣದ ಹೊಸ ಯುಗ ಆರಂಭವಾಗುತ್ತಿದೆ. ಗುಣಮಟ್ಟದ ಶಿಕ್ಷಣ ಒದಗಿಸಲು, ಲೇಹ್‌ನಲ್ಲಿ ಪ್ರಮುಖ ಶ್ರೇಷ್ಠತಾ ಕೇಂದ್ರವನ್ನು ನಿರ್ಮಿಸಲಾಗುತ್ತಿದೆ. ಐಐಟಿ-ಜಮ್ಮು ಮತ್ತು ಐಐಎಂ-ಜಮ್ಮುವಿನಲ್ಲಿ ಉಪಗ್ರಹ ಕ್ಯಾಂಪಸ್‌ಗಳನ್ನು ಸ್ಥಾಪಿಸುವ ಪ್ರಸ್ತಾವನೆಗಳನ್ನು ಪರಿಗಣಿಸಲಾಗುತ್ತಿದೆ. ಪರಿಸರ ಸಂರಕ್ಷಣೆ ಖಚಿತಪಡಿಸಿಕೊಳ್ಳುವಾಗ ಆಧುನಿಕ ಮೂಲಸೌಕರ್ಯ ಅಭಿವೃದ್ಧಿಯು ಪ್ರವಾಸೋದ್ಯಮ ಉತ್ತೇಜಿಸಲು ಸಜ್ಜಾಗಿರುವ ಹೊಸ ವಿಮಾನ ನಿಲ್ದಾಣ ಟರ್ಮಿನಲ್‌ನಿಂದ ಮತ್ತಷ್ಟು ಬಲಗೊಳ್ಳುತ್ತದೆ. ಈ ಸಂದರ್ಭದಲ್ಲಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಕ್ಟೋಬರ್ 15ರಂದು 3,350 ಕೋಟಿ ರೂ. ಮೌಲ್ಯದ ಯೋಜನೆಗಳನ್ನು ಉದ್ಘಾಟಿಸಿದರು...

ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಯೋಜನೆಗಳಿಗೆ ಚಾಲನೆ ನೀಡುವ ಸಂದರ್ಭದಲ್ಲಿ, ಲಡಾಖ್‌ನ ಹೊಸ ಪೀಳಿಗೆಯ ಮೇಲೆ ಸರ್ಕಾರ ವಿಶೇಷ ಗಮನ ಹರಿಸುತ್ತಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರು. ಈ ಪ್ರದೇಶದ ಯುವ ಜನರಿಗೆ ಗುಣಮಟ್ಟದ ಶಿಕ್ಷಣ ಸಿಗುವಂತೆ ನೋಡಿಕೊಳ್ಳಲು, ಹೊಸ ತಂತ್ರಜ್ಞಾನಗಳನ್ನು ಕಲಿಯಲು ಅವಕಾಶಗಳನ್ನು ಒದಗಿಸಲು ಮತ್ತು ಅವರು ಇತರೆ ನಗರಗಳ ಮೇಲೆ ಅವಲಂಬಿತರಾಗದಂತೆ ಮಾಡಲು ಸರ್ಕಾರ ಶ್ರಮಿಸುತ್ತಿದೆ. ಲೇಹ್‌ನಲ್ಲಿ ಒಂದು ಪ್ರಮುಖ 'ಶ್ರೇಷ್ಠತಾ ಕೇಂದ್ರ' ನಿರ್ಮಾಣದ ಜತೆಗೆ, ಐಐಟಿ-ಜಮ್ಮು ಮತ್ತು ಐಐಎಂ-ಜಮ್ಮುವಿನಲ್ಲಿ ಸ್ಯಾಟಲೈಟ್ ಕ್ಯಾಂಪಸ್ ಗಳನ್ನು ಸ್ಥಾಪಿಸುವ ಪ್ರಸ್ತಾವನೆಗಳನ್ನೂ ಮುಂದಕ್ಕೆ ಕೊಂಡೊಯ್ಯಲಾಗುತ್ತಿದೆ ಎಂದು ಪ್ರಧಾನ ಮಂತ್ರಿ ಮೋದಿ ತಿಳಿಸಿದರು. ಇದು ಲಡಾಖ್‌ನ ಯುವಜನರಿಗೆ ಉನ್ನತ ಶಿಕ್ಷಣ, ಸಂಶೋಧನೆ ಮತ್ತು ಹೊಸ ಕೌಶಲ್ಯಗಳನ್ನು ಪಡೆಯಲು ಸ್ಥಳೀಯವಾಗಿ ಉತ್ತಮ ಅವಕಾಶಗಳನ್ನು ಒದಗಿಸುತ್ತದೆ ಎಂದರು.

ಸ್ಥಳೀಯ ಪರಿಸರವನ್ನು ಎಚ್ಚರಿಕೆಯಿಂದ ಸಂರಕ್ಷಿಸುವ ಜತೆಗೆ, ಲಡಾಖ್‌ನಲ್ಲಿ ಆಧುನಿಕ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ. ಇದೇ ಸಂದರ್ಭದಲ್ಲಿ ಪ್ರಧಾನ ಮಂತ್ರಿ ಮೋದಿ ಅವರು ಸುಮಾರು 2,500 ಕೋಟಿ ರೂ. ವೆಚ್ಚದ 'ನಿಮ್ಮು-ಪದಮ್-ದಾರ್ಚಾ' ರಸ್ತೆಯನ್ನು ಲಡಾಖ್‌ಗೆ ಸಮರ್ಪಿಸಿದರು. ಹಿಂದೆ ಸುಮಾರು 12 ತಾಸು ತೆಗೆದುಕೊಳ್ಳುತ್ತಿದ್ದ ಪ್ರಯಾಣವನ್ನು ಈಗ ಕೇವಲ 3 ತಾಸುಗಳಲ್ಲಿ ಪೂರ್ಣಗೊಳಿಸಬಹುದು. ಇದು ಪ್ರಯಾಣದ ಸಮಯ ಉಳಿಸುವುದಲ್ಲದೆ, ಈ ಪ್ರದೇಶದಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ದೊಡ್ಡ ಉತ್ತೇಜನ ನೀಡಲಿದೆ.

ಲಡಾಖ್‌ಗೆ 3,350 ಕೋಟಿ ರೂ. ಮೌಲ್ಯದ 5 ಪ್ರಮುಖ ಯೋಜನೆಗಳು ಲಭಿಸಿವೆ

- ನಿಮ್ಮು-ಪದುಮ್-ದಾರ್ಚಾ ರಸ್ತೆ: 298 ಕಿ.ಮೀ ಉದ್ದದ ಈ ಕಾರ್ಯತಂತ್ರ ರಸ್ತೆಯನ್ನು ರಾಷ್ಟ್ರಕ್ಕೆ ಸಮರ್ಪಿಸಲಾಗಿದೆ.
- ಹೊಸ ವಿಮಾನ ನಿಲ್ದಾಣ ಟರ್ಮಿನಲ್: ಕುಶೋಕ್ ಬಕುಲ ರಿಂಪೋಚೆ ವಿಮಾನ ನಿಲ್ದಾಣದಲ್ಲಿ 640 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ 23,800 ಚದರ ಮೀಟರ್ ವಿಸ್ತೀರ್ಣದ ಆಧುನಿಕ ಟರ್ಮಿನಲ್ ಕಾರ್ಯಾರಂಭ ಮಾಡಿದೆ(ವಾರ್ಷಿಕ ಸಾಮರ್ಥ್ಯ: 35 ಲಕ್ಷ ಪ್ರಯಾಣಿಕರು).
- ವಿದ್ಯುತ್ ಮತ್ತು ಇಂಧನ: 9 ಮೆಗಾವ್ಯಾಟ್ ಸಾಮರ್ಥ್ಯದ 'ಹನು ಸಣ್ಣ ಜಲವಿದ್ಯುತ್ ಯೋಜನೆ' ಮತ್ತು 66 ಕೆವಿ ಡಬಲ್-ಸರ್ಕ್ಯೂಟ್ 'ದಾಹ್-ಹನು-ಖಲತ್ಸೆ' ವಿದ್ಯುತ್ ಪ್ರಸರಣ ಮಾರ್ಗ ಉದ್ಘಾಟಿಸಲಾಗಿದೆ.
- ಜಲ ಸಂರಕ್ಷಣೆ: 'ಹಿಮ್ ಸರೋವರ' ಯೋಜನೆಯಡಿ 40 ಹಳ್ಳಿಗಳಲ್ಲಿ ಅಭಿವೃದ್ಧಿಪಡಿಸಲಾದ 40 ಜಲಮೂಲಗಳನ್ನು ರಾಷ್ಟ್ರಕ್ಕೆ ಸಮರ್ಪಿಸಲಾಗಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಸಂಪೂರ್ಣ ಕಾರ್ಯಕ್ರಮವನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.



ಪರಂಪರೆಯನ್ನು ಪೋಷಿಸುತ್ತಾ, ಭವಿಷ್ಯದ ಆಕಾಂಕ್ಷೆಗಳೊಂದಿಗೆ ಪ್ರಗತಿಯತ್ತ ಸಾಗುವುದು

ಭಾರತವು ತನ್ನ ಪರಂಪರೆಯನ್ನು ಗೌರವಿಸುತ್ತಲೇ, ಭವಿಷ್ಯದ ಆಕಾಂಕ್ಷೆಗಳು ಮತ್ತು ಕನಸುಗಳನ್ನು ಸಾಕಾರಗೊಳಿಸುವತ್ತ ವೇಗವಾಗಿ ಮುನ್ನಡೆಯುತ್ತಿದೆ. 'ಕಾಶಿ ತಮಿಳು ಸಂಗಮಂ'ನಂತಹ ಉಪಕ್ರಮಗಳು ಸಾಂಸ್ಕೃತಿಕ ಬಾಂಧವ್ಯವನ್ನು ಬಲಪಡಿಸುತ್ತಿದ್ದರೆ, ಆಧುನಿಕ ರೈಲು ಮಾರ್ಗಗಳು ಮತ್ತು ಹೆದ್ದಾರಿಗಳು ರಾಜ್ಯಗಳ ಅಭಿವೃದ್ಧಿಗೆ ಚಾಲನೆ ನೀಡುತ್ತಿವೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಚೆನ್ನೈಗೆ ಭೇಟಿ ನೀಡಿದ ಸಂದರ್ಭದಲ್ಲಿ, ತಮಿಳುನಾಡಿಗೆ 13,000 ಕೋಟಿ ರೂ.ಗಿಂತ ಅಧಿಕ ಮೌಲ್ಯದ ಯೋಜನೆಗಳನ್ನು ಲೋಕಾರ್ಪಣೆ ಮಾಡಿದರು, 'ಮೆದುಳು ಸಂಶೋಧನಾ ಕೇಂದ್ರ'ವನ್ನು ರಾಷ್ಟ್ರಕ್ಕೆ ಸಮರ್ಪಿಸಿದರು. ಇದಲ್ಲದೆ, 'ಜೈಗೋಪಾಲ್ ಗರೋಡಿಯಾ ಹಿಂದೂ ವಿದ್ಯಾಲಯ ಮೆಟ್ರಿಕ್ಯುಲೇಷನ್ ಹೈಯರ್ ಸೆಕೆಂಡರಿ ಶಾಲೆ'ಯ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಯುವ ಜನರನ್ನು ಉದ್ದೇಶಿಸಿ ಮಾತನಾಡಿದರು. ದೇಶದಲ್ಲಿರುವ ಅಪಾರ ಸಾಮರ್ಥ್ಯವನ್ನು ಒತ್ತಿ ಹೇಳಿದ ಅವರು, ಯುವಕರು ತಮ್ಮ ಭವಿಷ್ಯವನ್ನು ಉನ್ನತ ಮಟ್ಟದಲ್ಲಿ ರೂಪಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಭಾರತ ಸೇರಿದಂತೆ ಯಾವುದೇ ರಾಷ್ಟ್ರದ ಪ್ರಗತಿಗೆ ಉತ್ಕೃಷ್ಟ ಮೂಲಸೌಕರ್ಯವು ಅತ್ಯಂತ ಪ್ರಬಲ ಆಧಾರಸ್ತಂಭವಾಗಿದೆ. ಯುವಜನರು ದೇಶದ ಭವಿಷ್ಯದ ರೂವಾರಿಗಳು. ಇದೇ ಕಾರಣಕ್ಕಾಗಿ, ಮುಂದಿನ ಪೀಳಿಗೆಗಾಗಿ ರೈಲ್ವೆ, ಮೆಟ್ರೊ ವ್ಯವಸ್ಥೆಗಳು, ಹೆದ್ದಾರಿಗಳು ಮತ್ತು ಎಕ್ಸ್‌ಪ್ರೆಸ್‌ವೇಗಳಂತಹ ದಾಖಲೆ ನಿರ್ಮಿಸುವ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಜತೆಗೆ ಭಾರತವು ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾಲಯಗಳು ಹಾಗೂ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳನ್ನು ಸಹ ಸ್ಥಾಪಿಸುತ್ತಿದೆ. ಚೆನ್ನೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಭಾರತವು ತನ್ನ ಸಾಂಸ್ಕೃತಿಕ ಶಕ್ತಿಯಿಂದ ಸ್ಫೂರ್ತಿ ಪಡೆಯುತ್ತದೆ, ವೈಜ್ಞಾನಿಕ ಪ್ರಗತಿಯ ಮೂಲಕ ಮುನ್ನಡೆಯುತ್ತದೆ ಮತ್ತು ಆಧುನಿಕ ಮೂಲಸೌಕರ್ಯಗಳ ಮೂಲಕ ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ. ನಮ್ಮ ಪರಂಪರೆ ಮತ್ತು ನಮ್ಮ ಭವಿಷ್ಯದ ಆಕಾಂಕ್ಷೆಗಳು ಒಟ್ಟಿಗೆ ಸಾಗುತ್ತಿವೆ ಎಂದರು.

ಕಳೆದ ಒಂದು ದಶಕದಲ್ಲಿ, ಭಾರತವು ದೇಶಾದ್ಯಂತ ತನ್ನ ಮೆಟ್ರೋ ಜಾಲವನ್ನು ಗಣನೀಯವಾಗಿ ವಿಸ್ತರಿಸಿದೆ. 2014ರಲ್ಲಿ ಕೇವಲ 5 ನಗರಗಳಿಗೆ ಸೀಮಿತವಾಗಿದ್ದ ಮೆಟ್ರೋ ರೈಲು ಸೇವೆ ಇಂದು 25 ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಜಾಲವು 250 ಕಿ.ಮೀ. ನಿಂದ 1,100 ಕಿ.ಮೀ.ಗೆ ವಿಸ್ತರಣೆಯಾಗಿದೆ. ಚೆನ್ನೈ ಮೆಟ್ರೋದ ಹೊಸ ವಿಸ್ತರಣೆಯು ಈ ಜಾಲವನ್ನು ಇನ್ನಷ್ಟು ವಿಸ್ತರಿಸಲಿದೆ ಎಂದು ಅವರು ಹೇಳಿದರು. ಇಂದು ದೇಶವು ತನ್ನ ಬಂದರು ಮೂಲಸೌಕರ್ಯ ಬಲಪಡಿಸುವ ಮೂಲಕ ನೌಕಾಯಾನ ವಲಯವನ್ನು ಹೊಸ ಎತ್ತರಕ್ಕೆ

ಒಂದು ಪ್ರಬಲ ಮಂತ್ರ: ರಾಜ್ಯಗಳ ಅಭಿವೃದ್ಧಿಯ ಮೂಲಕ ರಾಷ್ಟ್ರದ ಅಭಿವೃದ್ಧಿ

- ಚೆನ್ನೈನಲ್ಲಿ 13,000 ಕೋಟಿ ರೂ.ಗಿಂತ ಅಧಿಕ ಮೌಲ್ಯದ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು ಮತ್ತು ಅವುಗಳನ್ನು ರಾಷ್ಟ್ರಕ್ಕೆ ಸಮರ್ಪಿಸಿದರು.
- ಈ ಯೋಜನೆಗಳು ಮೆಟ್ರೊ ರೈಲು, ಹೆದ್ದಾರಿಗಳು, ರೈಲ್ವೆ, ಬಂದರುಗಳು, ಪೆಟ್ರೋಲಿಯಂ ಮತ್ತು ಶಿಕ್ಷಣ ಸೇರಿದಂತೆ ವಿವಿಧ ವಲಯಗಳನ್ನು ಒಳಗೊಂಡಿವೆ.
- ಚೆನ್ನೈ ಮೆಟ್ರೊ ರೈಲು ಯೋಜನೆಯ(ಹಂತ-II) ಪೂನಮಲ್ಲಿ-ವಡಪಳನಿ ವಿಭಾಗವನ್ನು ಉದ್ಘಾಟಿಸಿ, ಮೆಟ್ರೊ ರೈಲಿನಲ್ಲಿ ಸಂಚರಿಸಿದರು.
- ತಮಿಳುನಾಡಿನಲ್ಲಿ ಸುಮಾರು 3,700 ಕೋಟಿ ರೂ. ಮೌಲ್ಯದ ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿ, ಅವುಗಳನ್ನು ಉದ್ಘಾಟಿಸಿದರು.
- ಕಾರೈಕಲ್-ಪೆರಲಂ ರೈಲು ಮಾರ್ಗ ಸೇರಿದಂತೆ 750 ಕೋಟಿ ರೂ.ಗಿಂತ ಹೆಚ್ಚಿನ ಮೌಲ್ಯದ ರೈಲ್ವೆ ಮೂಲಸೌಕರ್ಯ ಯೋಜನೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಿದರು.
- ಕೊಯಮತ್ತೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ 3 ರೈಲ್ವೆ ಮೇಲ್ಸೇತುವೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಿದರು. ಅಲ್ಲದೆ ಪಳನಿ, ವೆಲ್ಲೂರು ದಂಡು ಪ್ರದೇಶ, ಅಂಬಾಸಮುದ್ರಂ, ಪರಮಕುಡಿ ಮತ್ತು ನಾಮಕ್ಕಲ್‌ನಲ್ಲಿರುವ 5 'ಅಮೃತ್ ಭಾರತ್' ನಿಲ್ದಾಣಗಳನ್ನು ಉದ್ಘಾಟಿಸಿದರು.
- ಚೆನ್ನೈ ಬಂದರು, ಕಾಮರಾಜರ್ ಬಂದರು ಮತ್ತು ವಿ.ಒ. ಚಿದಂಬರನಾರ್ ಬಂದರಿಗೆ ಸಂಬಂಧಿಸಿದ ಯೋಜನೆಗಳಿಗೆ ಚಾಲನೆ ನೀಡಿ, ಶಂಕುಸ್ಥಾಪನೆ ನೆರವೇರಿಸಿದರು.
- ಐಐಟಿ ಮದ್ರಾಸ್‌ನಲ್ಲಿರುವ 'ಸುಧಾ ಗೋಪಾಲಕೃಷ್ಣನ್ ಬ್ರೈನ್ ಸೆಂಟರ್' ಅನ್ನು ರಾಷ್ಟ್ರಕ್ಕೆ ಸಮರ್ಪಿಸಿ, ಒಂದು ವಿಶಿಷ್ಟ ಜಾಗತಿಕ ವೈಜ್ಞಾನಿಕ ಅಭಿಯಾನಕ್ಕೆ ಚಾಲನೆ ನೀಡಿದರು. ಭ್ರೂಣಾವಸ್ಥೆಯಿಂದ ಹಿಡಿದು ವೃದ್ಧಾಪ್ಯದವರೆಗಿನ ವಿವಿಧ ಹಂತಗಳಲ್ಲಿರುವ 100ಕ್ಕೂ ಹೆಚ್ಚು ಮಾನವ ಮಿದುಳುಗಳ, ಜೀವಕೋಶ ಮಟ್ಟದ ತ್ರಿ-ಆಯಾಮದ(3ಡಿ) ನಕ್ಷೆಗಳನ್ನು ಸಿದ್ಧಪಡಿಸುವುದು ಈ ಅಭಿಯಾನದ ಗುರಿಯಾಗಿದೆ.



“ಕಳೆದ 25 ವರ್ಷಗಳಲ್ಲಿ ಪ್ರಜಾಪ್ರಭುತ್ವದ ಎರಡು ಆಧಾರಸ್ತಂಭಗಳ ಮೇಲಿನ ನನ್ನ ನಂಬಿಕೆ ನಿರಂತರವಾಗಿ ಬಲಗೊಂಡಿದೆ. ಮೊದಲನೆಯದು - ದೇಶದ ಜನರು! ಎರಡನೆಯದು - ಸಹಕಾರಿ ಒಕ್ಕೂಟ ವ್ಯವಸ್ಥೆ! ರಾಜ್ಯಗಳ ಅಭಿವೃದ್ಧಿಯಿಂದಲೇ ರಾಷ್ಟ್ರದ ಅಭಿವೃದ್ಧಿ ಸಾಧ್ಯ ಎಂಬ ಮಂತ್ರವೇ ನನಗೆ ಸದಾ ಮಾರ್ಗದರ್ಶಿಯಾಗಿದೆ.

- ನರೇಂದ್ರ ಮೋದಿ, ಪ್ರಧಾನಮಂತ್ರಿ

- 'ಸಿ-ಸ್ಟ್ರೋಕ್' ಎಂಬ ಮಾನವ ಇಸ್ಕೆಮಿಕ್ ಸ್ಟ್ರೋಕ್ ಕುರಿತಾದ ಮೊದಲ ಬಗೆಯ ಅಟ್ಲಾಸ್ ಬಿಡುಗಡೆ ಮಾಡಿದರು. ಇದು ಸ್ಟ್ರೋಕ್‌ನಿಂದ ಬಾಧಿತವಾದ ಮಿದುಳುಗಳ 1,000ಕ್ಕೂ ಹೆಚ್ಚು ಸೂಕ್ಷ್ಮ ವಿಭಾಗಗಳ ವಿವರವಾದ ಮಾಹಿತಿ ಒಳಗೊಂಡಿದೆ.

ಪ್ರಧಾನಮಂತ್ರಿ ಮೋದಿ ಅವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.


ಕೊಂಡೊಯ್ಯಲು ಶ್ರಮಿಸುತ್ತಿದೆ. ಸರ್ಕಾರದ ಮುಖ್ಯಸ್ಥರಾಗಿ ತಮ್ಮ 25 ವರ್ಷಗಳ ಅಧಿಕಾರಾವಧಿಯನ್ನು ಅವಲೋಕಿಸಿದ ಅವರು, ರಾಜ್ಯ ಮಟ್ಟದಲ್ಲಿ ಕಳೆದ ಆ ಅವಧಿಯು ರಾಷ್ಟ್ರೀಯ ಮಟ್ಟದ ತಮ್ಮ ದೃಷ್ಟಿಕೋನವನ್ನು ರೂಪಿಸಲು ನೆರವಾಯಿತು. ಗುಜರಾತ್ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದು, ರಾಜ್ಯ ಮಟ್ಟದ ಆಕಾಂಕ್ಷೆಗಳನ್ನು ಅರ್ಥ ಮಾಡಿಕೊಳ್ಳಲು ತಮಗೆ ಸಹಕಾರಿಯಾಯಿತು; ಪರಿಣಾಮವಾಗಿ, ಪ್ರಧಾನ ಮಂತ್ರಿಯಾದ ನಂತರ ಅವರು ಆ ನಿರೀಕ್ಷೆಗಳನ್ನು ಈಡೇರಿಸಲು ಪ್ರಯತ್ನಿಸಿದ್ದಲ್ಲದೆ, ಪ್ರತಿಯೊಂದು ರಾಜ್ಯವೂ ತನ್ನ ಆಕಾಂಕ್ಷಿತ ಗುರಿಗಳನ್ನು ಸಾಧಿಸುವುದನ್ನು ಖಚಿತಪಡಿಸಿಕೊಳ್ಳುವಂತೆ ಮಾಡಲು ನೆರವಾಯಿತು ಎಂದರು.

ಭಾರತೀಯ ಯುವಜನರು ಜಾಗತಿಕ ಪರಿಹಾರಗಳನ್ನು ಒದಗಿಸುವ ಸಾಮರ್ಥ್ಯ ಹೊಂದಿದ್ದಾರೆ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಚೆನ್ನೈನ ಜೈಗೋಪಾಲ್ ಗರೋಡಿಯಾ ಹಿಂದೂ ವಿದ್ಯಾಲಯದ ಮೆಟ್ರಿಕ್ಯುಲೇಷನ್ ಹೈಯರ್ ಸೆಕೆಂಡರಿ ಶಾಲೆಯ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದರು. "ಸಾ ವಿದ್ಯಾ ಯಾ ವಿಮುಕ್ತಯೇ"(ಜ್ಞಾನವೇ ಮುಕ್ತಿಯನ್ನು ನೀಡುತ್ತದೆ) ಎಂಬ ಧ್ಯೇಯವಾಕ್ಯದಿಂದ ಪ್ರೇರಿತವಾಗಿರುವ ಈ ಶಾಲೆಯು, ಸಮಾಜಕ್ಕೆ ಅರ್ಥಪೂರ್ಣ ಕೊಡುಗೆ ನೀಡಬಲ್ಲ ವಿದ್ಯಾರ್ಥಿಗಳನ್ನು ರೂಪಿಸಲು ಶ್ರಮಿಸುತ್ತಿದೆ ಎಂದರು. ಈ ಕಾರ್ಯಕ್ರಮದಲ್ಲಿ ಮಾತನಾಡಿದ



ಕಳೆದ ದಶಕದಲ್ಲಿ ಆಗಿರುವ ಶಿಕ್ಷಣ ಮೂಲಸೌಕರ್ಯದ ಬಲವರ್ಧನೆ



- ಹಲವಾರು ಹೊಸ ಐಐಟಿಗಳು, ಐಐಎಂಗಳು, ಐಐಐಟಿಗಳು ಮತ್ತು ಏಮ್ಸ್ ಗಳನ್ನು ಸಹ ಸ್ಥಾಪಿಸಲಾಗಿದೆ.



2036ರ ಒಲಿಂಪಿಕ್ಸ್ ಆಯೋಜಿಸುವ ಸಂಕಲ್ಪ

ಕ್ರೀಡೆಯನ್ನು ಕೇವಲ ಮನರಂಜನೆಯಾಗಿ ಮಾತ್ರವಲ್ಲದೆ, ಒಂದು ಉತ್ತಮ ವೃತ್ತಿಜೀವನದ ಆಯ್ಕೆಯಾಗಿಯೂ ನೋಡುವಂತಾಗಲು, ದೇಶವು ಹೊಸ ಕ್ರೀಡಾ ಮೂಲಸೌಕರ್ಯಗಳನ್ನು ವೇಗವಾಗಿ ಅಭಿವೃದ್ಧಿಪಡಿಸುತ್ತಿದೆ. ಜತೆಗೆ, ಉತ್ತಮ ತರಬೇತಿ ಮತ್ತು ಬೆಂಬಲ ಒದಗಿಸುತ್ತಿದೆ. 2030ರ ಕಾಮನ್‌ವೆಲ್ತ್ ಕ್ರೀಡಾಕೂಟ ಆಯೋಜಿಸಲು ರಾಷ್ಟ್ರವು ಸಕ್ರಿಯವಾಗಿ ಸಿದ್ಧತೆ ನಡೆಸುತ್ತಿದೆ ಎಂದು ಪ್ರಧಾನಮಂತ್ರಿ ಮೋದಿ ಅವರು ಯುವ ಜನರಿಗೆ ತಿಳಿಸಿದರು. ಅದೇ ಸಮಯದಲ್ಲಿ, 2036ರ ಒಲಿಂಪಿಕ್ಸ್ ಆಯೋಜಿಸುವ ಮಹತ್ವಾಕಾಂಕ್ಷೆಯ ಕನಸನ್ನು ನನಸಾಗಿಸುವತ್ತಲೂ ದೇಶ ಹೆಜ್ಜೆ ಹಾಕುತ್ತಿದೆ. ಭವಿಷ್ಯದಲ್ಲಿ ಇಂತಹ ಪ್ರಮುಖ ಜಾಗತಿಕ ಕ್ರೀಡಾಕೂಟಗಳನ್ನು ಆಯೋಜಿಸುವುದರಿಂದ ಯುವ ಜನರಿಗೆ ಅತ್ಯುತ್ತಮ ವೇದಿಕೆ ಸಿಗಲಿದೆ, ಅವರ ಸಾಮರ್ಥ್ಯಗಳು ಹೆಚ್ಚಾಗಲಿವೆ, ಸರ್ಕಾರದಿಂದ ಸಂಪೂರ್ಣ ಬೆಂಬಲವೂ ದೊರೆಯಲಿದೆ ಎಂದು ತಿಳಿಸಿದರು.



“ಇಂದಿನ ಯುವಜನರು 'ವಿಕಸಿತ ಭಾರತ'ದ ದೃಷ್ಟಿಕೋನದ ಹಿಂದಿನ ಚಾಲನಾಶಕ್ತಿಯಾಗಲು ಬಯಸುತ್ತಿದ್ದಾರೆ. ವಿಕಸಿತ ಭಾರತಕ್ಕೆ ಅಗತ್ಯವಿರುವ ಹೊಸ ಆಲೋಚನೆಗಳು ಮತ್ತು ಪರಿಹಾರಗಳು ಕೇವಲ ದೇಶದ ಭವಿಷ್ಯವನ್ನಷ್ಟೇ ಅಲ್ಲ, ಇಡೀ ಜಗತ್ತಿನ ಭವಿಷ್ಯವನ್ನೂ ರೂಪಿಸಲಿವೆ.

- ನರೇಂದ್ರ ಮೋದಿ, ಪ್ರಧಾನಮಂತ್ರಿ

ಪ್ರಧಾನಮಂತ್ರಿ ನರೇಂದ್ರ ಮೋದಿ, ಇಂದಿನ ಯುವಜನತೆಯಲ್ಲಿ 'ವಿಕಸಿತ ಭಾರತ'ದ ಕನಸನ್ನು ನನಸಾಗಿಸುವಲ್ಲಿ ಪ್ರಮುಖ ಚಾಲನಾ ಶಕ್ತಿಯಾಗಬೇಕೆಂಬ ಪ್ರಬಲ ಆಕಾಂಕ್ಷೆಯಿದೆ. ಈ ರಾಷ್ಟ್ರೀಯ ಗುರಿ ಸಾಧಿಸಲು ಅಗತ್ಯವಾದ ಹೊಸ ಆಲೋಚನೆಗಳು ಮತ್ತು ಪರಿಹಾರಗಳು, ಕೇವಲ ನಮ್ಮ ದೇಶದ ಭವಿಷ್ಯವನ್ನಷ್ಟೇ ಅಲ್ಲದೆ, ಇಡೀ ಜಗತ್ತಿನ ಭವಿಷ್ಯವನ್ನೂ ರೂಪಿಸಲಿವೆ. ಇಂದಿನ ಜಗತ್ತು ಪರಿಹಾರಗಳನ್ನು ಹುಡುಕುತ್ತಿದೆ, ಅಂತಹ ಪರಿಹಾರಗಳನ್ನು ಒದಗಿಸುವ ಸಾಮರ್ಥ್ಯ ನಮ್ಮ ಯುವ ಜನತೆಯಲ್ಲಿದೆ ಎಂದರು.

ಕವಿಯೊಬ್ಬರ ಪ್ರಸಿದ್ಧ ಮಂತ್ರವಾದ 'ಅಚಮಿಲ್ಲೈ, ಅಚಮಿಲ್ಲೈ'(ಭಯವಿಲ್ಲ, ಭಯವಿಲ್ಲ) ಎಂಬುದನ್ನು ಅಳವಡಿಸಿಕೊಳ್ಳಬೇಕು. ತಮ್ಮ ಆಲೋಚನೆಗಳು ಮತ್ತು ಕನಸುಗಳನ್ನು ನನಸಾಗಿಸಲು ಅಪಾರ ಉತ್ಸಾಹದಿಂದ ಮುನ್ನಡೆಯಬೇಕು ಎಂದು ಪ್ರಧಾನಮಂತ್ರಿ ಮೋದಿ ಅವರು ಯುವ ಜನತೆಗೆ ಕರೆ ನೀಡಿದರು. ದೊಡ್ಡ ಕನಸು ಕಾಣಲು, ವಿಭಿನ್ನವಾಗಿ ಯೋಚಿಸಲು ಮತ್ತು ನಿರ್ಭೀತರಾಗಿರಲು ಅವರು ಯುವಜನರನ್ನು ಪ್ರೋತ್ಸಾಹಿಸಿದರು. ●

ಪ್ರಧಾನಮಂತ್ರಿ ಮೋದಿ ಅವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಭಾರತದ ಮೊದಲ ಮಹಿಳಾ ಏರ್ ಮಾರ್ಷಲ್



1968ರಲ್ಲಿ ಭಾರತೀಯ ವಾಯುಪಡೆ ಸೇರಿದ ಡಾ. ಪದ್ಮಾವತಿ ಬಂಡೋಪಾಧ್ಯಾಯ ಅವರು, ಭಾರತದ ಮೊದಲ ಮಹಿಳಾ 'ಏರ್ ಮಾರ್ಷಲ್' ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಭಾರತೀಯ ವಾಯುಪಡೆಯ ವೈದ್ಯಕೀಯ ವಿಭಾಗದಲ್ಲಿ ಸುಮಾರು 4 ದಶಕಗಳ ಕಾಲ ಸೇವೆ ಸಲ್ಲಿಸಿದ ಅವರು, 1971ರ ಭಾರತ-ಪಾಕಿಸ್ತಾನ ಯುದ್ಧದಲ್ಲೂ ಭಾಗವಹಿಸಿದ್ದರು. ಅವರ ಈ ಸೇವೆ ಪರಿಗಣಿಸಿ 'ವಿಶಿಷ್ಟ ಸೇವಾ ಪದಕ' ನೀಡಿ ಗೌರವಿಸಲಾಯಿತು. ಉತ್ತರ ಧ್ರುವದಲ್ಲಿ ವೈಜ್ಞಾನಿಕ ಸಂಶೋಧನೆ ನಡೆಸಿದ ಮೊದಲ ಭಾರತೀಯ ಮಹಿಳೆ ಎಂಬ ಕೀರ್ತಿಯೂ ಇವರದ್ದಾಗಿದೆ. ಮಹಿಳಾ ಸಬಲೀಕರಣದ ಸಂಕೇತವಾಗಿರುವ ಹಾಗೂ 'ಪದ್ಮಶ್ರೀ' ಪ್ರಶಸ್ತಿ ಪುರಸ್ಕೃತರಾದ ಡಾ. ಪದ್ಮಾವತಿ ಬಂಡೋಪಾಧ್ಯಾಯ ಅವರು, ಇಡೀ ರಾಷ್ಟ್ರಕ್ಕೆ ಅದರಲ್ಲೂ ವಿಶೇಷವಾಗಿ ದೇಶದ ಹೆಣ್ಣು ಮಕ್ಕಳಿಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ.



ಜನನ: 4 ನವೆಂಬರ್ 1944

ಆಂಧ್ರಪ್ರದೇಶದ ತಿರುಪತಿಯಲ್ಲಿ 1944ರ ನವೆಂಬರ್ 4 ರಂದು ಜನಿಸಿದ ಡಾ. ಪದ್ಮಾವತಿ ಬಂಡೋಪಾಧ್ಯಾಯ ಅವರು, ಬಾಲ್ಯದಿಂದಲೇ ವೈದ್ಯೆಯಾಗುವ ಕನಸು ಕಂಡಿದ್ದರು. ನಂತರದ ದಿನಗಳಲ್ಲಿ, ಅವರು ಪುಣೆಯ ಸಶಸ್ತ್ರ ಪಡೆಗಳ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆದರು. 1968ರಲ್ಲಿ ಭಾರತೀಯ ವಾಯುಪಡೆಗೆ ಸೇರ್ಪಡೆಯಾದರು. ಆಗಸದಲ್ಲಿ ವಿಹರಿಸುವ ಕನಸನ್ನೂ ಅವರು ಹೊಂದಿದ್ದರು. ಅವರು ವಾಯುಪಡೆಗೆ ಸೇರಿದ ಆ ಕಾಲದಲ್ಲಿ, ಮಹಿಳೆಯೊಬ್ಬರು ಇಂತಹ ಪಡೆಯ ಭಾಗವಾಗಬಹುದು ಎಂಬ ಕಲ್ಪನೆಯನ್ನೇ ಬಹುತೇಕರು ಊಹಿಸಿರಲಿಲ್ಲ.

1971ರ ಯುದ್ಧದ ಸಮಯದಲ್ಲಿ, ಅವರು ತಮ್ಮ ಪತಿಯೊಂದಿಗೆ ಗಡಿಯಲ್ಲಿ ನಿಯೋಜನೆಗೊಂಡಿದ್ದರು. ಅಲ್ಲಿ ನಿಯೋಜಿತರಾದ ಸಿಬ್ಬಂದಿಗಳಲ್ಲಿ ಅವರೊಬ್ಬರೇ ಮಹಿಳೆಯಾಗಿದ್ದರು, ಅವರು ಬಂಕರ್‌ನಲ್ಲಿ ವಾಸಿಸುತ್ತಿದ್ದರು. 1971ರ ಭಾರತ-ಪಾಕಿಸ್ತಾನ ಯುದ್ಧದ ಸಂದರ್ಭದಲ್ಲಿ ತೋರಿದ ಮಾದರಿ ನಡವಳಿಕೆಗಾಗಿ ಅವರಿಗೆ 'ವಿಶಿಷ್ಟ ಸೇವಾ ಪದಕ' ನೀಡಿ ಗೌರವಿಸಲಾಯಿತು. 2002ರಲ್ಲಿ ಅವರು 'ಏರ್ ವೈಸ್ ಮಾರ್ಷಲ್'(ಎರಡು-ಸ್ಟಾರ್ ಶ್ರೇಣಿಯ) ಹುದ್ದೆಗೆ ಬಡ್ತಿ ಪಡೆದ ಮೊದಲ ಮಹಿಳಾ ಅಧಿಕಾರಿಯಾದರು. ಇದಲ್ಲದೆ, 'ಏರ್ ಕಮೋಡೋರ್' ಹುದ್ದೆಗೆ ಬಡ್ತಿ ಪಡೆದ ಮೊದಲ ಮಹಿಳಾ ಅಧಿಕಾರಿ, ಉತ್ತರ ಧ್ರುವದಲ್ಲಿ ವೈಜ್ಞಾನಿಕ ಸಂಶೋಧನೆ ನಡೆಸಿದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾದರು. ಈ ಸಾಧನೆಗಳ ಜತೆಗೆ, 'ಡಿಫೆನ್ಸ್ ಸರ್ವಿಸಸ್ ಸ್ಟಾಫ್ ಕಾಲೇಜು' ಕೋರ್ಸ್ ಪೂರ್ಣಗೊಳಿಸಿದ ಮೊದಲ ಮಹಿಳಾ ಅಧಿಕಾರಿ ಕೂಡ ಇವರೇ ಆಗಿದ್ದರು.

2020 ಜನವರಿ 25ರಂದು ವೈದ್ಯಕೀಯ ಕ್ಷೇತ್ರದಲ್ಲಿನ ಸೇವೆಗಾಗಿ ಪದ್ಮಾವತಿ ಬಂಡೋಪಾಧ್ಯಾಯ ಅವರಿಗೆ 'ಪದ್ಮಶ್ರೀ' ಪ್ರಶಸ್ತಿ ಘೋಷಿಸಲಾಯಿತು. ಅಂದಿನ ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ಅವರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರಿಗೆ ಈ ನಾಗರಿಕ ಗೌರವ ನೀಡಿ ಸನ್ಮಾನಿಸಿದರು. ಈ ಗೌರವ ಸ್ವೀಕರಿಸಿದ ನಂತರ ಅವರು ಭಾರತ ಸರ್ಕಾರ, ಪ್ರಧಾನ ಮಂತ್ರಿ ಮತ್ತು ಗೃಹ ಸಚಿವರಿಗೆ ತಮ್ಮ ಕೃತಜ್ಞತೆ ವ್ಯಕ್ತಪಡಿಸಿದರು. ತಾವು ಸುಮಾರು 12 ವರ್ಷಗಳಿಂದ 'ಟೆಲಿಮೆಡಿಸಿನ್' ಮೂಲಕ ಉತ್ತರ ಪ್ರದೇಶದ ಪಶ್ಚಿಮ ಭಾಗದ ರೋಗಿಗಳಿಗೆ ಸೇವೆ ಸಲ್ಲಿಸುತ್ತಿರುವುದಾಗಿ ಅವರು ತಿಳಿಸಿದರು. ಅವರು ವಾರದಲ್ಲಿ 3 ದಿನಗಳನ್ನು ಈ ಸೇವೆಗಾಗಿ ಮೀಸಲಿಟ್ಟು, 80ರಿಂದ 100 ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದರು. ಇದಲ್ಲದೆ, ವಾರಾಂತ್ಯಗಳಲ್ಲಿ ಅವರು ತಮ್ಮ ಮನೆಯಲ್ಲಿ ಹಿಂದುಳಿದ ವರ್ಗದ ಮಕ್ಕಳಿಗೆ ವಿಜ್ಞಾನ ಮತ್ತು ಗಣಿತ ಕಲಿಸುತ್ತಿದ್ದರು. ತಮಗೆ ಲಭಿಸಿದ ಈ 'ಪದ್ಮಶ್ರೀ' ಗೌರವವು ಆ ಮಕ್ಕಳ ಆಶೀರ್ವಾದದ ಫಲವೇ ಹೊರತು ಬೇರೇನೂ ಅಲ್ಲ ಎಂದು ಅವರು ವಿನಮ್ರವಾಗಿ ಹೇಳಿದ್ದರು. ●

ನಾನಾ ಪಾಟೇಕರ್ ಗೆ ವಿದಾಯ











ತ್ರಿವರ್ಣ ಧ್ವಜದ ಗೌರವ ಮತ್ತು ವೈಭವಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಅಸಾಧಾರಣ ಕಲಾವಿದ ನಾನಾ ಪಾಟೇಕರ್ ಅವರು ಅಕ್ಟೋಬರ್ 8ರಂದು ನಿಧನರಾದರು. ವೈವಿಧ್ಯಮಯ ಪಾತ್ರಗಳ ಮೂಲಕ ಪ್ರೇಕ್ಷಕರ ಹೃದಯ ಗೆದ್ದಿದ್ದ ನಾನಾ, ಎಂದಿಗೂ ಸಾಂಪ್ರದಾಯಿಕ ಚೌಕಟ್ಟುಗಳಿಗೆ ಸೀಮಿತವಾಗಲಿಲ್ಲ. ಬದಲಾಗಿ, ಮುಕ್ತ ಪಕ್ಷಿಯಂತೆ ಚಲನಚಿತ್ರ ಲೋಕದಲ್ಲಿ ವಿಹರಿಸಿದರು. ತಮ್ಮ ಚಲನಚಿತ್ರಗಳ ಮೂಲಕ, ಸಮಾಜದಲ್ಲಿನ ಅವ್ಯವಸ್ಥೆಗಳನ್ನು ಖಂಡಿಸಿದ್ದರು. ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಚಲನಚಿತ್ರ ರಂಗದ ಅನೇಕ ದಿಗ್ಗಜರು ಹಾಗೂ ಹಲವಾರು ಗಣ್ಯರು ನಾನಾ ಪಾಟೇಕರ್ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಜನನ: 1 ಜನವರಿ 1951,
ಮರಣ: 8 ಅಕ್ಟೋಬರ್ 2026

ಹಿಂದಿ ಮತ್ತು ಮರಾಠಿ ಚಲನಚಿತ್ರರಂಗದಲ್ಲಿ ಖ್ಯಾತ ನಟರಾಗಿದ್ದ ನಾನಾ ಪಾಟೇಕರ್, ದಶಕಗಳ ಸುದೀರ್ಘ ವೃತ್ತಿ ಜೀವನದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನ ಕಂಡುಕೊಂಡು, ಸಮಾಜದ ಮೇಲೆ ಅಳಿಸಲಾಗದ ಛಾಪು ಮೂಡಿಸಿದ್ದರು. ಅವರು ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡಿದ ನಿಜವಾದ 'ಕ್ರಾಂತಿವೀರ' ಆಗಿದ್ದರು. ಅವರ ಸಿಡಿದೇಳುವ ಮಾತುಗಳಷ್ಟೇ ಅವರ ಮೌನವೂ ಪ್ರಭಾವಶಾಲಿಯಾಗಿತ್ತು. ರಾಷ್ಟ್ರವಿರೋಧಿ ಶಕ್ತಿಗಳನ್ನು ನಿಯಂತ್ರಣದಲ್ಲಿಡಬೇಕೆಂದು ಅವರು ಬಲವಾಗಿ ಪ್ರತಿಪಾದಿಸುತ್ತಿದ್ದರು. 'ಪರಿಂದಾ', 'ಕ್ರಾಂತಿವೀರ', 'ಅಬ್ ತಕ್ ಛಪ್ಪನ್' ಮತ್ತು 'ವೆಲ್ಕಮ್'ನಂತಹ ಚಲನಚಿತ್ರಗಳಲ್ಲಿನ ಅವರ ಅಭಿನಯಕ್ಕಾಗಿ ಅವರು ವ್ಯಾಪಕ ಮೆಚ್ಚುಗೆ ಪಡೆದರು. ಭಾರತ ಸರ್ಕಾರವು ಅವರಿಗೆ 'ಪದ್ಮಶ್ರೀ' ಪ್ರಶಸ್ತಿ ನೀಡಿ ಗೌರವಿಸಿದೆ.

ದೇಶಸೇವೆಯ ಬಗ್ಗೆ ನಾನಾ ಪಾಟೇಕರ್ ಗೆ ಬದ್ಧತೆ ಎಷ್ಟಿತ್ತೆಂದರೆ, 'ಪ್ರಹಾರ್' ಚಲನಚಿತ್ರ ನಿರ್ದೇಶಿಸಲು ಮತ್ತು ಅದರಲ್ಲಿ ನಟಿಸಲು ಸಿದ್ಧತೆ ಮಾಡಿಕೊಳ್ಳಲು ಅವರು ಪ್ರಾದೇಶಿಕ ಸೇನೆಯಲ್ಲಿ 3 ವರ್ಷಗಳ ಕಠಿಣ ಮಿಲಿಟರಿ ತರಬೇತಿ ಪಡೆದರು. ಅವರಿಗೆ ಸೇನೆಯಲ್ಲಿ ಗೌರವ ಕ್ಯಾಪ್ಟನ್(ನಂತರ ಮೇಜರ್) ಹುದ್ದೆ ನೀಡಲಾಗಿತ್ತು. ವಿಶೇಷವಾಗಿ, 1999ರ ಕಾರ್ಗಿಲ್ ಯುದ್ಧದ ಸಮಯದಲ್ಲಿ ಅವರು 'ತುರ್ತು ಸ್ಪಂದನಾ ತಂಡ'ದೊಂದಿಗೆ ಸೇರಿಕೊಂಡು, ಮರಾಠಾ ಲೈಟ್ ಇನ್ಫಾಂಟ್ರಿ ರೆಜಿಮೆಂಟ್‌ನೊಂದಿಗೆ ಯುದ್ಧಭೂಮಿಯ ಮುಂಚೂಣಿಗೆ ತೆರಳಿ ದೇಶ ಸೇವೆ ಸಲ್ಲಿಸಿದರು.

> **ನಾನಾ ಪಾಟೇಕರ್ ಅವರಲ್ಲಿದ್ದಂತಹ ಆಳ, ವಿಶಿಷ್ಟತೆ ಮತ್ತು ಪ್ರಭಾವಶಾಲಿ ವ್ಯಕ್ತಿತ್ವವು ಬಹಳ ಕಡಿಮೆ ನಟರಲ್ಲಿ ಮಾತ್ರ ಕಂಡುಬರುತ್ತದೆ. ಅವರು ಪ್ರತಿಯೊಂದು ಪಾತ್ರದಲ್ಲೂ ಬಹುಮುಖ ಪ್ರತಿಭೆ ಮತ್ತು ಸೃಜನಶೀಲತೆಯನ್ನು ಪ್ರದರ್ಶಿಸಿದರು, ಮುಂದಿನ ಪೀಳಿಗೆ ನೆನಪಿಸಿಕೊಳ್ಳುವಂತಹ ಪಾತ್ರಗಳನ್ನು ನಮಗೆ ನೀಡಿದರು. ಅವರು ತಮ್ಮ ಸ್ಪಷ್ಟ ಮತ್ತು ನೇರ ನಿಲುವುಗಳಿಂದಾಗಿ ಮೆಚ್ಚುಗೆಗೆ ಪಾತ್ರರಾಗಿದ್ದರು. ಅವರು ತಮ್ಮ ಮನಸ್ಸಿನಲ್ಲಿರುವುದನ್ನು ಹೇಳಲು ಎಂದಿಗೂ ಹಿಂಜರಿಯುತ್ತಿರಲಿಲ್ಲ.**
>
> *- ನರೇಂದ್ರ ಮೋದಿ, ಪ್ರಧಾನಮಂತ್ರಿ*

> **ಭಾರತೀಯ ಚಿತ್ರರಂಗದ ದಿಗ್ಗಜ ನಟ ನಾನಾ ಪಾಟೇಕರ್ ಅವರ ನಿಧನವು ಕಲಾ ಜಗತ್ತಿಗೆ ತುಂಬಲಾರದ ನಷ್ಟವಾಗಿದೆ.**
>
> *- ಅಮಿತ್ ಶಾ, ಕೇಂದ್ರ ಗೃಹ ಸಚಿವರು*



Narendra Modi ✓
@narendramodi


25 वर्षों का जनविश्वास मेरे लिए और अधिक ऊर्जा के साथ काम करने की प्रेरणाशक्ति है। ईश्वररूपी जनता-जनार्दन के लिए मेरा एक ही संकल्प है कि मैं देशवासियों की और अधिक सेवा करूं।

Gratitude to everyone for their blessings and wishes. What greater strength can there be than the trust and affection of 140 crore Indians?



Rajnath Singh ✓
@rajnathsingh

देश की सुरक्षा के लिए हमारी Defence Industry की Surge Capacity और Production Capacity का मजबूत होना जरूरी है। हमारी प्रतिभा, युवा शक्ति और Policy Support हमारी ताकत हैं। सरकार हमेशा Defence Industry के साथ खड़ी है, ताकि जरूरत पड़ने पर उत्पादन तेजी से बढ़ाया जा सके और देश हर चुनौती के लिए तैयार रहे।



Amit Shah ✓ @AmitShah

मोदी सरकार में सहकारिता ग्रामीण अर्थव्यवस्था व महिला सशक्तीकरण का सशक्त माध्यम बन रही है। चाहे श्वेत क्रांति 2.0 की शुरुआत हो या PACS को बहुउद्देश्यीय बना डेयरी से जोड़ना हो, सहकारिता का सबसे बड़ा लाभ सहकारी डेयरी क्षेत्र को मिल रहा है।

आज भोपाल में आयोजित राज्य स्तरीय गोपालक सम्मेलन में प्रदेशभर से आए पशुपालकों से संवाद किया। इस अवसर पर गोपालक दीदियों का सम्मान किया, डॉ. भीमराव अंबेडकर कामधेनु योजना के तहत लाभ वितरित किए तथा मोरवन प्रोजेक्ट के अंतर्गत नगर वन विकसित करने के लिए KRIBHCO एवं मध्य प्रदेश राज्य जैवविविधता बोर्ड के बीच MOU भी हुआ।



Nitin Gadkari ✓ @nitin_gadkari

हवा में उडनेवाली बस.. (Skybus), यह सिर्फ एक नई Transport Technology नहीं...

यह उस 🇮🇳 भारत की कल्पना है,
जहां Innovation का उद्देश्य सिर्फ गति नहीं, बल्कि जनसेवा, सुविधा और बेहतर भविष्य है।

नई सोच।
नई तकनीक।
नई ऊँचाई।
और गतिशील 🇮🇳भारत का भविष्य - SKY BUS



Kiren Rijiju ✓ @KirenRijiju ·

SIR प्रक्रिया में 13 करोड़ वोटर कटने का दावा भ्रामक है!
प्रक्रिया के दौरान करीब 13 करोड़ नाम ड्राफ्ट स्तर पर मृत, अनुपस्थित/अप्राप्य, स्थायी रूप से स्थानांतरित या दोहरी प्रविष्टि जैसी श्रेणियों में चिह्नित किए गए हैं। इन्हें 13 करोड़ अंतिम विलोपन बताना सही नहीं है।
ड्राफ्ट सूची सभी राजनीतिक दलों के BLA के साथ साझा की गई है और पात्र मतदाताओं को दावा-आपत्ति दर्ज कराने का अवसर दिया गया है।
तथ्यों को समझें, भ्रम से बचें और लोकतांत्रिक प्रक्रिया पर विश्वास रखें।



Arjun Ram Meghwal ✓
@arjunrammeghwal

न्यायिक प्रक्रियाओं में तेजी लाने, मामलों का समयबद्ध निस्ता सुनिश्चित करने तथा justice distribution system को अधिक प्रभावी बनाने हेतु संबंधित अधिकारियों को आवश्यक दिशा-निर्देश दिए।

#JusticeDelivery #JudicialReforms

In world of uncertainty, India offers reliability, stability: PM

'We Don't Grow At Anyone's Cost. We Grow With World, For World'

TIMES NEWS NETWORK

New Delhi: PM Narendra Modi Tuesday sought to position India as a trusted ally while stating that supply chains, energy, minerals, payment systems, and technology are increasingly becoming instruments of pressure and dominance and the routes created by globalisation over the past decades have become chokepoints in several cases.

"One of the biggest questions facing the world today is that of trust, of confidence — the confidence that supplies will continue uninterrupted in times of need. We do not grow at anyone's cost. We grow with the world, and for the world," the PM said at a Bloomberg event. He pitched India's expanding economic and technological capabilities to address global challenges during geopolitical tensions, supply-chain disruptions and growing competition for strategic resources.

The PM also said that India's economic growth is anchored in strong fundamentals, financial resilience and a sustained reform drive, as he cited the 7.8% growth recorded in the June quarter. Modi placed India as a global economic and technology power that seeks to help other countries prosper rather than growing at their expense.

"It is because of this strength that India's sovereign ratings are being upgraded. In a world filled with uncertainty, India offers the assurance of reliability and stability," he said, highlighting GST, labour reforms and steps to make it easier to do business. "We are pursuing reforms with a clear policy direction. India's reform express continues to move ahead at high speed. For us, reforms are not a compulsion. Reforms are our conviction," he said.



PM Modi with former UK PM Rishi Sunak in New Delhi Tuesday

Modi also said that the true measure of economic and technological strength lay not in the ability to control others but in creating opportunities for them, as he argued that India believes in the principle of "power to empower".

"Today, technology is power. Data is power. Knowledge is power. Innovation is power. But the real question is not who possesses power. Rather, the question is how that power is being used," he said, while highlighting the country's digital public infrastructure, affordable mobile data, digital payments and direct benefit transfer as examples of technology widening access to economic opportunities.

PM urges youth to upgrade skills, adapt to emerging technologies

EXPRESS NEWS SERVICE @ New Delhi

PRIME Minister Narendra Modi on Friday said that as technology evolves rapidly, young people must acquire new skills, upgrade their existing capabilities and adapt to emerging technologies.

Modi, who was interacting with representatives of Indian participants at the WorldSkills Competition held in Shanghai, also emphasised the need for coordinated efforts by youth, the government and training institutions to establish the country as a global hub of skilled human resources.

Highlighting the importance of specialised skills, he asked young people to adapt to emerging technologies, develop skills in line with requirements of the global market, and contribute to improving India's skill training ecosystem through their experiences and suggestions, an official statement said.



PM Modi interacts with the Indian Team of WorldSkills Shanghai 2026 in Delhi | PTI

Underlining the objective behind establishing a separate Ministry for Skill Development, he said the skill training institutions are no less important than the IITs and IIMs.

Modi encouraged the participants to share their experiences and suggestions with the government to help improve India's skill training system, the statement said.

WorldSkills is a leading international skills competition, bringing together young professionals to demonstrate excellence in a wide range of vocational and technical skills.

During the interaction with Modi, the participants shared their experiences from the competition. They also discussed the importance of adapting to new tools and software.

Empowering States is key to Viksit Bharat: PM

DEVELOPMENT MANTRA. Always committed to cooperative federalism, says Modi at the inauguration of projects totalling ₹13,000 crore in Chennai

Our Bureau
Chennai

Prime Minister Narendra Modi on Sunday said empowering States was central to India's development, emphasising that the country's progress depended on enabling individual States to achieve their aspirations.

Addressing a gathering in Chennai at the launch of over ₹13,000 crore worth of development projects at IIT Madras, Modi said his experience as a Chief Minister had strengthened his understanding of the expectations of States and shaped his approach towards cooperative federalism.

Modi inaugurated the 15-km Poonamallee-Vadapalani stretch of Phase II of the Chennai Metro Rail Project, built at a cost of around ₹4,900 crore and laid the foundation stone for and dedicated various development projects. "I have always carried the mantra of developing the country through the development of the State," he said in the presence of Tamil Nadu Chief Minister C Joseph Vijay. The PM said changes in governments had not altered his commitment to the State's development.

"In the last 25 years, I have always accorded topmost importance to national progress and cooperative federalism. I have had the honour of working with Jayalalithaa, Karunanidhi ji, O Panneerselvam, Edappadi K Palaniswami, MK Stalin and now Vijay. My commitment to the development of Tamil Nadu and to serving its people has always remained unwavering," he said

PM noted that initiatives such as Make in India and Vocal for Local were benefiting industries in the State. The Centre was working to strengthen the entire manufacturing chain, from components and technology to finished products, he said.



Prime Minister Narendra Modi and Tamil Nadu Chief Minister C Joseph Vijay in Chennai on Sunday

KEY PROJECTS

The Centre is investing around ₹17,000 crore to develop the VO Chidambaranar Port in Thoothukudi as a megacontainer and green energy hub. Once completed, the project will enable ultra-large container vessels to call at the port, strengthening Tamil Nadu's links with global trade, Modi said.

Reiterating the need for collaboration between the Centre and States, Modi said the Union government was committed to providing the support needed for Tamil Nadu's continued development.

Modi laid the foundation stone of and inaugurated key National Highway projects, including the 36-km, four-laned Vaduppatti-Theriyuvengunallur section of NH-744, worth around ₹3,700 crore. He also laid the foundation stone of the Group II/III Lube Oil Base Stocks (LOBS) project at the existing Manali Refinery of Chennai Petroleum Corporation Limited (CPCL) in Chennai costing around ₹1,620 crore. At IIT-Madras, Modi dedicated to the nation the Sudhu Gopalakrishnan Brain Centre (SGBC) at IIT Madras.

Clear metro phase III, release ₹5,110 cr education funds: TN CM

Chief Minister C Joseph Vijay urged the Centre to expedite approvals for key infrastructure projects in the State, including the Chennai Metro Rail Phase III, metro rail projects in Coimbatore and Madurai, and high-speed rail corridors connecting Chennai with Kanyakumari and Coimbatore. He also sought the release of ₹5,110 crore in pending central funds under the Samagra Shiksha scheme without any conditionalities.

Addressing an event in Chennai on Sunday where the PM launched development projects worth ₹13,000 crore, CM Vijay emphasised the role of States in the country's development.

Tamil Nadu had consistently contributed to India's economic, social and cultural progress, cooperation between the Union and State governments should translate into tangible benefits for people, Vijay said.

Vijay also asked the Prime Minister to reconsider the proposals for metro rail projects in Coimbatore and Madurai, citing the future development and economic growth of western and southern Tamil Nadu. He sought approval for an inter-State metro rail link between Hosur in Tamil Nadu and Bommasandra in Karnataka.

Vijay urged the Centre to accord priority to the Godavari–Cauvery river linking project and take it up as a national project.

India and Canada together contributing to prosperous, stable world: Modi to Carney

Suhasini Haidar
NEW DELHI

India and Canada are together contributing to a "more stable and prosperous world", said Prime Minister Narendra Modi after a call with Canadian Prime Minister Mark Carney, during which they agreed to conclude a trade agreement soon.

The phone call on Tuesday night came even as senior Canadian Ministers, including Foreign Minister Anita Anand and Minister of International Trade Maninder Sidhu, are in Delhi for talks with their counterparts – External Affairs Minister S. Jaishankar and Commerce Minister Piyush Goyal – to finalise the trade deal.



Narendra Modi and Mark Carney shake hands during the 2025 G20 Summit. FILE PHOTO

Mr. Carney, who was in Delhi for the G20 Summit in September 2025, had also met Mr. Modi briefly in Kananaskis, Canada, in June 2025, after the G7 Summit, and the two leaders had agreed to "reset" ties between the two countries, which had been strained over the Canadian Government's allegations of Indian involvement in the killing of Khalistani activist Hardeep Singh Nijjar in Canada in June 2023.

Mr. Modi had also met Mr. Carney briefly at the G7 Summit in Alberta in June 2025

ಸಾರ್ವಜನಿಕ ಸೇವಾ ಪ್ರಸಾರ ದಿನ – 12 ನವೆಂಬರ್


ಸಾರ್ವಜನಿಕ ಜಾಗೃತಿ, ಪ್ರಜಾಪ್ರಭುತ್ವ ಮತ್ತು ಸಂವಾದ ಉತ್ತೇಜಿಸುವ ಒಂದು ಭವ್ಯ ಪಯಣ

1947ರ ನವೆಂಬರ್ 12ರಂದು ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರು ಆಲ್ ಇಂಡಿಯಾ ರೇಡಿಯೊ (ಆಕಾಶವಾಣಿ) ಮೂಲಕ ನೀಡಿದ ಐತಿಹಾಸಿಕ ಭಾಷಣದ ನೆನಪಿಗಾಗಿ, ಪ್ರತಿವರ್ಷ 'ಸಾರ್ವಜನಿಕ ಸೇವಾ ಪ್ರಸಾರ ದಿನ' ಆಚರಿಸಲಾಗುತ್ತದೆ. 2000ನೇ ಇಸವಿಯಲ್ಲಿ ಅಂದಿನ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವರಾಗಿದ್ದ ಸುಷ್ಮಾ ಸ್ವರಾಜ್ ಅವರು, ಈ ವಿಶೇಷ ದಿನವನ್ನು 'ಸಾರ್ವಜನಿಕ ಸೇವಾ ಪ್ರಸಾರ ದಿನ'ವನ್ನಾಗಿ ಆಚರಿಸಲಾಗುವುದು ಎಂದು ಘೋಷಿಸಿದರು. ಅಂದಿನಿಂದ, ಪ್ರತಿವರ್ಷ ಆಕಾಶವಾಣಿ ಭವನದಲ್ಲಿ ವಿಶೇಷ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಮೂಲಕ ಈ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ...

ಬಾಪು ಅವರು ನಿರಾಶ್ರಿತರನ್ನು ಉದ್ದೇಶಿಸಿ ಮಾತನಾಡಿದರು

- ಆ ಐತಿಹಾಸಿಕ ದಿನದಂದು, ದೇಶ ವಿಭಜನೆಯ ಯಾತನೆ ಅನುಭವಿಸುತ್ತಿದ್ದ ಮತ್ತು ಕುರುಕ್ಷೇತ್ರದಲ್ಲಿ ಆಶ್ರಯ ಪಡೆದಿದ್ದ ನಿರಾಶ್ರಿತರನ್ನು ಉದ್ದೇಶಿಸಿ ಬಾಪು ಮಾತನಾಡಿದರು.
- ಅವರ ಸಂದೇಶದ ನೆನಪಿಗಾಗಿ, ಆ ಸ್ಟುಡಿಯೊವನ್ನು ಈಗ 'ಬಾಪು ಸ್ಟುಡಿಯೊ' ಎಂದು ಕರೆಯಲಾಗುತ್ತಿದೆ.
- ಈ ಸಂದರ್ಭದಲ್ಲಿ ಆಕಾಶವಾಣಿಯು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ, ಇದರಲ್ಲಿ ಬಾಪು ಅವರಿಗೆ ಅಚ್ಚುಮೆಚ್ಚಿನ ಭಜನೆಗಳ ಪ್ರಸ್ತುತಿಗಳು ಒಳಗೊಂಡಿರುತ್ತವೆ.





“ನಿಮ್ಮೆಲ್ಲರ ನಡುವೆ ಸುಮಾರು ಎರಡೂವರೆ ಲಕ್ಷ ನಿರಾಶ್ರಿತರಿದ್ದಾರೆ, ಇನ್ನೂ ಜನರು ಬರುತ್ತಲೇ ಇದ್ದಾರೆ ಎಂಬುದನ್ನು ತಿಳಿದಾಗ ನನಗೆ ತೀವ್ರ ನೋವಾಯಿತು... ನನ್ನ ಮನಸ್ಸು ಕರಗಿತು. ನಿಮ್ಮ ಬಳಿಗೆ ಬಂದು ನಿಮಗೆ ಸಾಂತ್ವನ ಹೇಳಲೇಬೇಕೆಂಬ ಭಾವನೆ ನನ್ನಲ್ಲಿ ಮೂಡಿತು.”

- ಮಹಾತ್ಮ ಗಾಂಧಿ (ಆಲ್ ಇಂಡಿಯಾ ರೇಡಿಯೊದಲ್ಲಿ ಮಾಡಿದ ಭಾಷಣ, 12 ನವೆಂಬರ್ 1947)

NEW INDIA SAMACHAR
FORTNIGHTLY

RNI NO.: DELENG/2020/78811 NOVEMBER 1-15, 2026
RNI Registered No DELENG/2020/78811 (Publishing Date: October 19, 2026 Pages: 52)

EDITOR IN CHIEF
Dhirendra Ojha
Principal Director General
Press Information Bureau, New Delhi

PUBLISHER:
Kanchan Prasad
Director General, on behalf of
Central Bureau Of Communication

PUBLISHED FROM:
Room No–278, Central Bureau Of Communication, 2nd Floor, Soochna Bhawan, New Delhi -110003